ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಮೆರವಣಿಗೆ ಬಹಿರಂಗ ಸಭೆಯ ಆವರಣ ಪ್ರವೇಶಿಸುತ್ತದೆ

ಸಂಪುಟ 12 ಸಂಚಿಕೆ 37 ಸೆಪ್ಟೆಂಬರ್ 16, 1990 ರೂ. 1.50

"ಸಮಾನತೆಯ, ವಿಮೋಚನೆಯ ಹೋರಾಟವನ್ನು ಬೆಂಬಲಿಸಿ"

ನಾವು-ಮಹಿಳೆಯರ ಸಂಘಟನೆ-ಹೋರಾಡಿ ದೇಶದ ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಲ್ಲಿ 498A ನೇ ವಿಭಾಗವನ್ನು ಸೇರಿಸುವಂತೆ ಮಾಡಿದೆವು. ಇದರ ಪ್ರಕಾರ ಮಹಿಳೆಯರಿಗೆ ಕಿರುಕುಳದ ಬಗ್ಗೆ ಕಿರುಕುಳಗೊಳಗಾದವರು ದೂರು ಸಲ್ಲಿಸದಿದ್ದರೂ ಯಾವುದೇ ಸಾಮಾಜಿಕ ಸಂಘಟನೆ ದೂರು ಸಲ್ಲಿಸಿದರೂ ಅದನ್ನು ದಾಖಲು ಮಾಡಿಕೊಂಡು ಕ್ರಮ ಜರುಗಿಸಬೇಕು. ಇದರ ಉದ್ದೇಶ ಮಹಿಳೆಯರಿಗೆ ವರದಕ್ಷಿಣೆ ಇತ್ಯಾದಿಗಳ ಮೇಲೆ ನೀಡುವ ಕಿರುಕುಳ ತಡೆಯುವುದು. ಆದರೆ ಕರ್ನಾಟಕದ ಪೋಲೀಸರು ತನ್ನ ಪತ್ನಿ ಶಶಿಕಲಾಳನ್ನು ಹತ್ಯೆಮಾಡಿದ ಕಿರ್ಲೋಸ್ಕರ್ ಕಂಪೆನಿಯ ನೌಕರನನ್ನು ಈ ಸೆಕ್ಷನ್ ಪ್ರಕಾರ ಬಂಧಿಸಿ ಬಿಡುಗಡೆಮಾಡಿದ್ದಾರೆ. ವಾಸ್ತವವಾಗಿ ಕೊಲೆ ಅಥವಾ ಕೊಲೆಯ ಪ್ರಯತ್ನಕ್ಕೆ ಸೆಕ್ಷನ್ 302 ಇದ್ದು ಅದರ ಪ್ರಕಾರವೇ ಆತನ ವಿರುದ್ಧ ಕ್ರಮ ಜರುಗಿಸಬೇಕಾಗಿತ್ತು. ಆದರೆ ಈಗ ಸೆಕ್ಷನ್ 498A ನ್ನು ಅನ್ವಯಿಸಿದರೆ ಸೆಕ್ಷನ್ 302 ಅನ್ವಯಿಸಲು ಆಗುವುದಿಲ್ಲ ಎಂದು ಇಲ್ಲಿಯ ಪೋಲೀಸರು ನೆವ ಹಾಕುತ್ತಿದ್ದಾರೆ. ಇದೆಂತಹ ನ್ಯಾಯ? ಇದೆಂತಹ ಸರ್ಕಾರ. ಈ ಅನ್ಯಾಯದ ವಿರುದ್ಧ ಹೋರಾಡಲು ಕರ್ನಾಟಕ ಜನವಾದಿ ಮಹಿಳಾ ಸಂಘಟನೆ ನಿರ್ಧರಿಸಿದೆ. ಈ ಸಂಘಟನೆಗೆ ಈಗಾಗಲೇ ನೆರವು, ಬೆಂಬಲ ನೀಡಿರುವವರು ಹಾಗೂ ಬೆಂಗಳೂರಿನ ಜನ ಈ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾರ್ಯಾಧ್ಯಕ್ಷೆ, ಅಹಲ್ಯಾ ರಂಗ್ನೇಕರ್ ಕರೆ ನೀಡಿದ್ದಾರೆ.

ಅವರು ಸೆಪ್ಟೆಂಬರ್ 8 ಹಾಗೂ 9 ರಂದು ಬೆಂಗಳೂರಿನಲ್ಲಿ ಜರುಗಿದ ಅ.ಭಾ.ಜಾ.ಪ್ರ.ಮ. ಸಂಘಟನೆಯ 2ನೇ ಕರ್ನಾಟಕ ರಾಜ್ಯ ಸಮ್ಮೇಳನದ ಅಂತ್ಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದರು.

ಈ ಸಮ್ಮೇಳನದಲ್ಲಿ 20 ರಿಂದ 30 ವರ್ಷ ವಯಸ್ಸಿನ 50 ಕ್ಕೂ ಹೆಚ್ಚು ಯುವತಿಯರು ಉತ್ಸಾಹದಿಂದ ಭಾಗವಹಿಸಿದರು. ಇದು ನಮಗೆ ಹೆಮ್ಮೆಯ ವಿಷಯ. ಇದು ಆಂದೋಲನದ ಸ್ವರೂಪವನ್ನೇ ಬದಲಿಸಲಿದೆ ಎಂದು 30 ಲಕ್ಷಕ್ಕೂ ಹೆಚ್ಚು ಸದಸ್ಯೆಯರನ್ನು ಪಡೆದ ದೇಶದ ಅತ್ಯಂತ ದೊಡ್ಡ ಮಹಿಳಾ ಸಂಘಟನೆಯಾಗಿರುವ ಎ.ಡಿ.ಡಬ್ಲ್ಯು.ಎ ನ ಈ ಹಿರಿಯ ಮುಖಂಡ ಬಹಳ ನಿರೀಕ್ಷೆಯಿಂದ ನುಡಿದರು.

ಎ.ಐ.ಡಿ. ಡಬ್ಲ್ಯು.ಎ. ದೇಶದ ಎಲ್ಲಡೆ ಮಹಿಳೆಯರ ಹೋರಾಟಗಳಿಗೆ ನೇತೃತ್ವ ನೀಡುತ್ತಿದೆ. ಆದರೆ ಅದು ಹೋರಾಡುತ್ತಿರುವುದು ಹಕ್ಕುಗಳಿಗಾಗಿಯೇ ಮಾತ್ರವಲ್ಲ, ದೇಶದ ರಕ್ಷಣೆಯಲ್ಲಿ ತಮ್ಮ ಕರ್ತವ್ಯವನ್ನೂ ಪಾಲಿಸುತ್ತಿದ್ದಾರೆ. ಎ.ಐ.ಡಿ. ಡಬ್ಲ್ಯು.ಎ ನ ಪಂಜಾಬ್ ರಾಜ್ಯ ಘಟಕದ ಸಹಕಾರ್ಯದರ್ಶಿ ಧನ್ವಂತರ್ ಕೌರ್‌ರ ವೀರಮರಣದ ಉದಾಹರಣೆ ಈಗ ದೇಶದ ಮುಂದಿದೆ. ಎ.ಐ.ಡಿ ಡಬ್ಲ್ಯು ಎ. ಸದಸ್ಯೆಯರು ತಮ್ಮಹಕ್ಕುಗಳಿಗಾಗಿ ಹೋರಾಡುವುದರೊಂದಿಗೆ ದೇಶದ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಲೂ ಸಿದ್ಧ. ಎಂದು ಘೋಷಿಸಿದರು. ಈ ಹಿನ್ನೆಲೆಯಲ್ಲಿ ಅವರು ಇಡೀ ದೇಶ, ಅದರ ಭಾಗವಾಗಿ ಕೆಲವೊಮ್ಮೆ ಮುಖ್ಯವಾಗಿ ಮಹಿಳೆಯರೇ ಎದುರಿಸಬೇಕಾದ ಬೆಲೆಯೇರಿಕೆ, ಗಲಭೆಗಳು ಇತ್ಯಾದಿ ಸಮಸ್ಯೆಗಳತ್ತ ಮಹಿಳೆಯರ ಗಮನ ಸೆಳೆದರು. ಹಿಂದಿನ ಸರ್ಕಾರಗಳು ಸಿರಿವಂತರ ಮೇಲೆ ಹಾಕಬಹುದಾದ ನೇರ ತೆರಿಗೆಗಳನ್ನು ಕ್ರಮೇಣ ಕಮ್ಮಿ ಮಾಡುತ್ತಾ ಜನಸಾಮಾನ್ಯರ ಜೀವನಾವಶ್ಯಕ ವಸ್ತುಗಳ ಮೇಲೆ ಪರೋಕ್ಷ ತೆರಿಗೆ ಹೆಚ್ಚಿಸಿ ಜನಸಾಮಾನ್ಯರ ಮೇಲೆ ಹೇರುವ ನೀತಿ ಅವಲಂಬಿಸಿದವು. ಹೊಸ ಸರ್ಕಾರ ಕೂಡಾ.

ರಾಷ್ಟ್ರೀಯರಂಗ ಸರ್ಕಾರ ಪ್ರಸಾರ ಮಾಧ್ಯಮಗಳಿಗೆ ಸ್ವಾಯತ್ತತೆ ನೀಡಿರುವುದು ಸ್ವಾಗತಾರ್ಹ ಎಂದ ಕಾಂ.ಅಹಲ್ಯಾ ರಂಗ್ನೇಕರ್ ಈ ಸಂದರ್ಭದಲ್ಲಿ ಪ್ರಸಾರ ಮಾಧ್ಯಮಗಳು ಮಹಿಳೆಯರ ಬಗೆಗೆ ವಿಶೇಷವಾಗಿ ಜಾಹಿರಾತುಗಳಲ್ಲಿ-ತಳೆದಿರುವ ನಿಲುವನ್ನು ಖಂಡಿಸಿದರು. ಗೋದ್ರೆಜ್ ಸಂಸ್ಥೆಯ "ನಾನು ನನ್ನ ಹೆಂಡತಿಯನ್ನು ಮತ್ತು ಫ್ರಿಜ್ ಅನ್ನು ಬದಲಿಸಿಲ್ಲ" ಎಂದು ಸಾರುವ ಜಾಹೀರಾತಿನ ವಿರುದ್ಧ ಮುಂಬೈಯ ಮಹಿಳೆಯರು ತೀವ್ರ ಪ್ರತಿಭಟನೆ ಸಲ್ಲಿಸಿದಾಗ ಅದನ್ನು ಹಿಂತೆಗೆದುಕೊಂಡ ಘಟನೆಯನ್ನು ವಿವರಿಸಿದ ಅವರು ಮಹಿಳೆಯರನ್ನು ಫ್ರಿಜ್ ಮೊದಲಾದ ಉಪಭೋಗದ ವಸ್ತುಗಳಿಗೆ ಹೋಲಿಸುವ ಮೌಲ್ಯವನ್ನು ತೀವ್ರವಾಗಿ ಖಂಡಿಸಿದರು.

ದೇಶದಲ್ಲೆಲ್ಲಾ ಈಗ ತೀವ್ರವಾಗಿ ಚರ್ಚೆಗೊಳಗಾಗಿರುವ ಮಂಡಲ್ ವರದಿ ಬಗ್ಗೆ ಮಾತನಾಡುತ್ತಾ (ಎಡಶಕ್ತಿಗಳ) ನಿಲುವನ್ನು ಬೆಂಬಲಿಸಿದ ಅವರು "ಮಂಡಲ್ ವರದಿ ಹಿಂದೂಗಳನ್ನು ಒಡೆದಿದೆ" ಎಂಬ ಬಿ.ಜೆ.ಪಿ.ಯ ಕರ್ನಾಟಕ ಘಟಕದ ಹೇಳಿಕೆಯನ್ನು ಪ್ರಶ್ನಿಸುತ್ತಾ ಹರಿಜನರನ್ನು ಸಾವಿರಾರು ವರ್ಷ ಸಮಾಜದಿಂದ ದೂರವಿಟ್ಟು, ಮೇಲು ಕೀಳಿನ ಜಾತಿ ವ್ಯವಸ್ಥೆಯ ಮೂಲಕ ಹಿಂದೂಗಳನ್ನು ಎಷ್ಟೋ ಶತಮಾನಗಳಿಂದ ಒಡೆದಿಟ್ಟವರು ಯಾರು ಎಂದು ತೀಕ್ಷ್ಣವಾಗಿ

ಪುಟ 2ಕ್ಕೆ



ಸಮ್ಮೇಳನ ಸ್ಮರಣ ಸಂಚಿಕೆ ಬಿಡುಗಡೆ.

"ಹಿಂದೂ ಸಂಸ್ಕೃತಿ" ಯ ರಕ್ಷಕರು!

ಮಹಾರಾಷ್ಟ್ರದ ಸಂಕುಚಿತವಾದೀ "ಸಂಘಟನೆ, ಶಿವಸೇನೆ ಕಾಂ. ಅಹಲ್ಯಾ ರಂಗ್ನೇಕರ್‌ರವರ ದಲಿತಪರ ನಿಲುವಿನಿಂದ ಕುಪಿತಗೊಂಡು ರಾಜ್ಯದಲ್ಲಿ [illegible] "ರಾಮಾಯಣದ ಅಹಲ್ಯೆ ರಾಮನಿಂದ ವಿಮೋಚಿತಗೊಂಡಳು. ಈ ಅಹಲ್ಯೆ ದಲಿತರಿಂದ ವಿಮೋಚನೆ ಬಯಸುತ್ತಿದ್ದಾಳೆ" ಎಂದು ಪ್ರಚಾರ ಮಾಡುತ್ತಿದ್ದಾರೆ. ಸಾವಿರಾರು ವರ್ಷಗಳ ಕಾಲ ದಮನಕ್ಕೊಳಗಾದ ಒಂದು ವಿಭಾಗದಿಂದ ವಿಮೋಚನೆ [illegible] ಹಿಂದೂ ಸಂಸ್ಕೃತಿಯ ಈ [illegible] "ರಕ್ಷಕರು" [illegible]

ಸಾಮಾಜಿಕ ನ್ಯಾಯದೊಂದಿಗೆ ದುಡಿಯುವ ಜನಗಳ ಐಕ್ಯತೆಯ ರಕ್ಷಣೆ

– ಪ್ರಕಾಶ್ ಕಾರಟ್

1981 ರಲ್ಲಿ ಮಂಡಲ್ ಆಯೋಗದ ವರದಿ ಬಂದ ಮೇಲೆ ಆಗಾಗ ಅದರ ಪರ ಹಾಗೂ ವಿರೋಧವಾಗಿ ಚಳುವಳಿ ನಡೆದವು. ಈಗ ವಿ.ಪಿ.ಸಿಂಗ್ ಸರ್ಕಾರ ಅದನ್ನು ಭಾಗಶಃ ಜ್ಯಾರಿ ಮಾಡುವ ನಿರ್ಧಾರ ಮಾಡಿದ ಮೇಲೆ ವಿವಿಧ ರಾಜ್ಯಗಳಲ್ಲಿ ವಿದ್ಯಾರ್ಥಿಗಳ ವ್ಯಾಪಕ ಪ್ರತಿಭಟನೆ ಕಂಡು ಬಂದಿದೆ. ಅವರಿಗೆ ಬುದ್ಧಿಜೀವಿಗಳ ಒಂದು ಗಮನಾರ್ಹ ವಿಭಾಗದಿಂದ ಬೆಂಬಲ ದೊರೆಯುತ್ತಿದೆ. ದೊಡ್ಡ ಬಂಡವಾಳಶಾಹಿಗಳ ಹಿಡಿತದಲ್ಲಿರುವ ಪತ್ರಿಕೆಗಳಂತೂ ಪೂರ್ಣವಾಗಿ ಈ ಮಿಸಲಾತಿ ವಿರೋಧಿ ವಿದ್ಯಾರ್ಥಿಗಳಿಗೆ ಬೆಂಬಲ ನೀಡುತ್ತಿವೆ.

ಈ ಪ್ರತಿಭಟನೆಗಳು ನಮ್ಮ ಸಮಾಜದಲ್ಲಿ ಸೀಮಿತ ಸರಕಾರೀ ಉದ್ಯೋಗಾವಕಾಶ ಹಾಗೂ ಸೀಮಿತ ಶಿಕ್ಷಣ ಮೂಲಗಳ ಬಗ್ಗೆ ಎದ್ದು ಬರುತ್ತಿರುವ ತೀಕ್ಷ್ಣ ತಿಕ್ಕಾಟಗಳ ಪ್ರತಿಫಲನ. ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಗೆ ವಿರೋಧದ ಜತೆಗೇ ಹರಿಜನ - ಗಿರಿಜನರ ಮೀಸಲಾತಿಗೂ ಮುಸುಕಿನಲ್ಲಿ ವಿರೋಧ ಕಾಣಬರುತ್ತಿದೆಯೆಂಬುದೂ ಗಮನಾರ್ಹ.

ಈಗಿನ ಸಂದರ್ಭದಲ್ಲಿ ಮೀಸಲಾತಿಗೆ ವಿರೋಧ ಖಂಡಿತವಾಗಿಯೂ ಒಂದು ಪ್ರತಿಗಾಮಿ ನಿಲುವು. ಅದು ಮೇಲ್ಜಾತಿಗಳ ಪ್ರಾಬಲ್ಯವನ್ನು ಉಳಿಸಿಕೊಳ್ಳುವವರ ಹಿತಾಸಕ್ತಿಗಳನ್ನು ಕಾಪಾಡಲು ನೆರವಾಗುತ್ತದಷ್ಟೆ.

ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ, ಕೇಂದ್ರದಲ್ಲಿ ಹೊಸತಾದರೂ ಹಲವು ರಾಜ್ಯಗಳಲ್ಲಿ ಇದು ಈಗಾಗಲೇ ಬಹಳ ವರ್ಷಗಳಿಂದ ಜ್ಯಾರಿಯಲ್ಲಿದೆ. ನಾಲ್ಕು ದಕ್ಷಿಣದ ರಾಜ್ಯಗಳಲ್ಲಿ ಸ್ವಾತಂತ್ರ್ಯದ ಮೊದಲಿಂದಲೂ ಇತ್ತು. ಗುಜರಾತ್, ಮಹಾರಾಷ್ಟ್ರ, ಬಿಹಾರ, ಪಂಜಾಬ್, ಯು.ಪಿ., ಹಿಮಾಚಲ ಪ್ರದೇಶಗಳಲ್ಲಿ ವಿವಿಧ ಮಟ್ಟದವರೆಗೆ ಇವೆ. ಒರಿಸ್ಸಾ, ಅಸ್ಸಾಂ, ಹೆಚ್ಚಿನ ವಾಯುವ್ಯ ಪ್ರದೇಶಗಳಲ್ಲಿ ಮೀಸಲಾತಿಯಿಲ್ಲ. ಇದಕ್ಕೆ ಕಾರಣ ಅಲ್ಲಿ ಜಾತಿಗಳ ಐತಿಹಾಸಿಕ ವಿಕಾಸದ ದಾರಿ ಬೇರೆಯೇ ಆಗಿತ್ತು. ಪಶ್ಚಿಮ ಬಂಗಾಳದಲ್ಲೂ ಇಲ್ಲ. ಅದಕ್ಕೆ ಕಾರಣ ದೀರ್ಘ ಹೋರಾಟಗಳ ಮೂಲಕ ಅಲ್ಲಿ ಆಗಿರುವ ದೊಡ್ಡ ಸಾಮಾಜಿಕ ಆರ್ಥಿಕ ಬದಲಾವಣೆಗಳು.

ವಿವಿಧ ರಾಜ್ಯಗಳಲ್ಲಿ "ಇತರ ಹಿಂದುಳಿದ ಜಾತಿ" ಗಳೆಂದು ಪರಿಗಣಿಸಲ್ಪಟ್ಟವರು ವಾಸ್ತವವಾಗಿ ಬಹುಪಾಲು ಗ್ರಾಮೀಣ ಬಡವರು. ಇವರಲ್ಲಿ ಬಹುಮಂದಿ ಈಗಲೂ ಜಾತಿ ಪದ್ಧತಿಯ ಮೇಲೆ ನಿಂತ ಕಸುಬುಗಳನ್ನು ಅವಲಂಬಿಸಿದವರೆಂಬುದೂ ಇನ್ನೊಂದು ವಾಸ್ತವ ಸಂಗತಿ.

ಆದ್ದರಿಂದ ಎಲ್ಲಿ ಜಾತಿ ಸ್ಥಾನಮಾನಕ್ಕೂ ಕೋಮುಗಳ ಹಿಂದುಳಿಕೆಗೂ ಈಗಲೂ ಪರಸ್ಪರ ಸಂಬಂಧವಿದೆಯೋ, ಎಲ್ಲಿ ಜಾತಿ - ವಿರೋಧಿ ಆಂದೋಲನಗಳಿಗೆ ಜಾತಿ ಬಂಧನಗಳನ್ನು ಮುರಿದು ಶಕ್ತಿಶಾಲಿ ವರ್ಗ - ಆಧಾರಿತ ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ಸಾಧ್ಯವಾಗಿಲ್ಲವೋ ಅಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಬೇಕಾಗುತ್ತದೆ ಎಂಬುದು ಸಿ.ಪಿ.ಐ(ಎಂ) ನಿಲುವು. ಆದರಿಂದಾಗಿ ಸಿ.ಪಿ.ಐ(ಎಂ) ಮಂಡಲ್ ಆಯೋಗದ ವರದಿಯ ಜ್ಯಾರಿಯನ್ನು 1981-82 ರಿಂದಲೂ ಬೆಂಬಲಿಸುತ್ತಾ ಬಂದಿದೆ. ಅದಕ್ಕೆ ಮೊದಲು ಹಲವು ರಾಜ್ಯಗಳಲ್ಲೂ ಇಂತಹ ಆಂದೋಲನಗಳನ್ನು ಬೆಂಬಲಿಸಿದ ಆಧಾರವೂ ಇದೆ.

ಆದರೆ ಈ ಬೆಂಬಲದೊಂದಿಗೆ ಸಿ.ಪಿ.ಐ(ಎಂ) ಎರಡು ಅಂಶಗಳ ಮೇಲೆ ಒತ್ತು ನೀಡುತ್ತಾ ಬಂದಿದೆ- ಒಂದು, ಹಿಂದುಳಿದ ವರ್ಗಗಳೊಳಗೇ ಒಂದು ಆರ್ಥಿಕ ಆಳತೆಗೋಲು ಬೇಕು ಹಾಗೂ ಎರಡು ಈ ಸೂಕ್ಷ್ಮ ಪ್ರಶ್ನೆಯ ಮೇಲೆ ಒಂದು ಸರ್ವಸಮ್ಮತಿ ರೂಪಿಸಲು ಈ ಮೀಸಲಾತಿಯ ಅಗತ್ಯವನ್ನು ಇತರ ವಿಭಾಗಗಳಿಗೆ ಮನವರಿಕೆ ಮಾಡುವ ಪ್ರಯತ್ನ ನಡೆಸಬೇಕು. ಆದ್ದರಿಂದಲೇ ಸರಿಯಾದ ಸಮಾಲೋಚನೆ ನಡೆಸದೆ ವಿ.ಪಿ. ಸಿಂಗ್ ಸರ್ಕಾರ ಈ ನಿರ್ಧಾರ ಪ್ರಕಟಿಸಿದುದನ್ನು ಪಕ್ಷ ಟೀಕಿಸಬೇಕಾಯಿತು.

ನಾಲ್ಕು ದಶಕಗಳ ಸಾಮಾಜಿಕ - ಆರ್ಥಿಕ ಬೆಳವಣಿಗೆ ಹಾಗೂ ಬಂಡವಾಳಶಾಹಿಯ ಬೆಳವಣಿಗೆಯಿಂದಾಗಿ ಜಾತಿ ವ್ಯವಸ್ಥೆಯೊಳಗೇ ವರ್ಗವಿಭಜನೆ ಕಂಡು ಬಂದಿದೆ. "ಇತರ ಹಿಂದುಳಿದ ವರ್ಗ" ಗಳೆಂದು ಪರಿಗಣಿಸಲ್ಪಟ್ಟ ಜಾತಿಗಳಲ್ಲಿ, ಬೇರೆ ಬೇರೆ ರಾಜ್ಯಗಳಲ್ಲಿ ಕೆಲವು ಜಾತಿಗಳಲ್ಲಿ ಪ್ರಭಾವಶಾಲಿ ವಿಭಾಗವೊಂದು, ಭೂಮಿ ಮತ್ತಿತರ

ಪುಟ 8ಕ್ಕೆ

ಆರ್‌[illegible]ರಾಯಂತಹವರು ಚಾರಿತ್ರಿಕ ಸತ್ಯವನ್ನು ಬೇರೆಂದೇ ಮರೆ ಮಾಡುತ್ತಾರೆ. ಬಾಬ್ರಿ ಮಸೀದಿಯನ್ನು ಅದು ಈಗಿರುವ ಅಯೋಧ್ಯೆಯಿಂದ "ಸ್ಥಳಾಂತರಿಸಬೇಕು" ಎನ್ನುವ ಪ್ರತಿಪಾದನೆ ಮತ್ತು [illegible] ಆಕಾಂಕ್ಷೆಗಳನ್ನು [illegible] ಮಾಡುವ ನಿಲುವು - ಇವೆರಡೂ ಒಂದೇ ದುಷ್ಟಸ್ವಭಾವದ ಎರಡು ರೂಪಗಳು.

"ಏಶ್ಯಾಡ್ ಜ್ಯೋತಿಯ ನೆತ್ತಿ......."

ಏಶ್ಯಾ ಖಂಡದ ಈ ವರ್ಷದ ಅತ್ಯಂತ ದೊಡ್ಡ ಕ್ರೀಡಾ ಕೂಟ ಸೆಪ್ಟಂಬರ್ 22 ರಂದು ಬೈಜಿಂಗ್ ನಲ್ಲಿ ಆರಂಭವಾಗಲಿದೆ.

ಪೂರ್ವದಲ್ಲಿ ಒಟ್ಟಾಗಿ ಬಾಳುವ ನಾವು
ಪೂರ್ವದ ಗೌರವಕ್ಕಾಗಿ ಒಟ್ಟಾಗಿ
ಏಳಿ ಯುವ ನಾವು ಏಷ್ಯಾವನ್ನು
ಒಟ್ಟಾಗಿ ಮನೆಯಾಗಿಸುವ ನಾವು
ಏಷ್ಯಾದ ಪುನರುಜ್ಜೀವನಕ್ಕೆ
ದುಡಿಯುವ ನಾವು ಐದು
ಕಡಲುಗಳಲ್ಲೊಂದು ನಾವು ಬನ್ನಿ
ಮೇಲಕ್ಕೆತ್ತೋಣ ಏಷ್ಯನ್ ಗೆಳೆತನ
ಪ್ರಗತಿಯ ಹಾಡುತ್ತಾ ಮೇಲಕ್ಕೆತ್ತೋಣ
ಏಷ್ಯಾಡ್‌ನ ಜ್ಯೋತಿಯನ್ನು.

ಸೆಪ್ಟೆಂಬರ್ 22 ರಂದು ಚೀಣಾದ ರಾಜಧಾನಿ ಬೈಜಿಂಗ್‌ನಲ್ಲಿ 39 ದೇಶಗಳ 6 ಸಾವಿರ ಕ್ರೀಡಾಪಟುಗಳನ್ನು ಸ್ವಾಗತಿಸಲು ಚೀಣೀ ರೈತರು ಹಾಡಲಿರುವ, ಚೀಣೀ ಮಕ್ಕಳು, ಕಾರ್ಮಿಕರು ಹಾಡಲಿರುವ ಹಲವು ಹಾಡುಗಳಲ್ಲಿ ಇದೊಂದು.

ನಾಲ್ಕು ದಶಕಗಳ ಹಿಂದೆ ವಸಾಹತುಶಾಹಿಯಿಂದ ಮುಕ್ತಗೊಂಡ ಏಶ್ಯಾದ ವಿವಿಧ ದೇಶಗಳ ಪ್ರಾಚೀನ ಸಂಬಂಧಗಳನ್ನೆ ಗೆಳೆತನದ ಆಧುನಿಕ ರೂಪ ಕೊಟ್ಟ ಏಷ್ಯನ್ ಕ್ರೀಡಾ ಕೂಟ ಆರಂಭವಾಗಿ ಸುಮಾರು ನಾಲ್ಕು ದಶಕಗಳಾಗುತ್ತಿದೆ. 11ನೇ ಏಷ್ಯನ್ ಕ್ರೀಡಾ ಕೂಡ ಅಂದು ಬೈಜಿಂಗ್‌ನಲ್ಲಿ ಆರಂಭವಾಗಲಿದೆ.

ಇದು ಚೀಣಾ ಜನತಾ ಗಣತಂತ್ರದಲ್ಲಿ ನಡೆಯುವ ಮೊದಲ ಏಷ್ಯನ್ ಕ್ರೀಡಾ ಕೂಟ. ಹಿಂದಿನ ಏಶ್ಯಾಡ್‌ಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು ಕ್ರೀಡಾ ಸ್ಪರ್ಧೆಗಳಲ್ಲಿ, ಅಂದರೆ 27 ಸ್ಪರ್ಧೆಗಳಲ್ಲಿ, ಏಶ್ಯಾದ 6000 ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಬೈಜಿಂಗ್ ಈ ಮಹಾನ್ ಕ್ರೀಡಾ ಕೂಟಕ್ಕೆ ಎಲ್ಲ ರೀತಿಯಲ್ಲಿ ಸನ್ನದ್ಧವಾಗಿ ನಿಂತಿದೆ ಎಂದು 'ಚೈನಾ ಟುಡೇ' ಪತ್ರಿಕೆ ವರದಿ ಮಾಡಿದೆ. ಚೀಣಾವೂ ಒಂದು ಅಭಿವೃದ್ಧಿ ಹೊಂದುತ್ತಿರುವ ದೇಶ. ಆದ್ದರಿಂದ ಈ ಕ್ರೀಡಾ ಕೂಟ ನಡೆಸಲು ಬಹಳ ಪ್ರಯತ್ನ ನಡೆಸಬೇಕಾಯಿತು. ಅತ್ಯಲ್ಪ ಅವಧಿಯಲ್ಲೇ ನಲ್ವತ್ತು ಸಾವಿರ ಕೆಲಸಗಾರರು ಹಗಲಿರುಳು ದುಡಿದು ಏಷ್ಯನ್ ಆಟಗಳ ಗ್ರಾಮ ಹಾಗೂ 33 ಸ್ಪರ್ಧಾಕ್ಷೇತ್ರಗಳನ್ನು ಕಟ್ಟಿದರು

ಸಂಪೂರ್ಣವಾಗಿ ಚೀಣೀ ತಂತ್ರಜ್ಞಾನ, ಚೀಣೀ ಸಾಮಗ್ರಿಗಳನ್ನೇ ಉಪಯೋಗಿಸಿ. 10 ಕೋಟಿಗೂ ಹೆಚ್ಚು ಜನ ದೇಣಿಗೆ ನೀಡಿದರು. ವಿದ್ಯಾರ್ಥಿಗಳು ತಮ್ಮ ಜೇಬು ಖರ್ಚಿನ ಹಣ ಕೊಟ್ಟರು. ಹಲವಾರು ಯುವಜನ ಕ್ರೀಡಾ ಕೂಟದಲ್ಲಿ ಸ್ವಯಂಸೇವಕರಾಗಿ ದುಡಿಯಲು ಮುಂದೆ ಬಂದರು. ಕೆಲವು ನವ ವಿವಾಹಿತರು ಬೈಜಿಂಗ್‌ಗೆ ಬಂದು ಕ್ರೀಡಾ ಕೂಟಕ್ಕಾಗಿ ಒಂದೊಂದು ಗಿಡ ನೆಟ್ಟು ಹೋದರು.

ಏಷ್ಯನ್ ಕ್ರೀಡಾಕೂಟದ ಭವ್ಯ ಉದ್ಘಾಟನಾ ಸಮಾರಂಭದ ನೇತೃತ್ವ ವಹಿಸುವ ತಂಡ 400 ಕ್ಕೂ ಹೆಚ್ಚು ಮಂದಿಯಿರುವ "ವೈಫೆಂಗ್ ನಗಾರಿ ಡಮರು" ತಂಡ. ಇದು ವೃತ್ತಿ ಸಂಗೀತಗಾರರ ತಂಡವಲ್ಲ ಎಂಬುದು ಒಂದು ವೈಶಿಷ್ಟ್ಯ. ಸಮಾಜವಾದೀ ದೇಶ ಮಾತ್ರದಲ್ಲೇ ಕಾಣಬಹುದಾದ ವೈಶಿಷ್ಟ್ಯ. ಈ ತಂಡದ ಸದಸ್ಯರೆಲ್ಲಾ ಶಾಂಕ್ಸಿ ಪ್ರಾಂತದ ರೈತರು. ವೈಫೆಂಗ್ ಎಂದರೆ "ಭಯಭಕ್ತಿ ಮೂಡಿಸುವ ಎಂದರ್ಥ. ಇದು ಆ ಪ್ರಾಂತ್ಯದ ಅತ್ಯಂತ ಜನಪ್ರಿಯ ಜನಪದ ಸಂಗೀತ. ಶಾಂಕ್ಸಿ ರೈತರ ನಗಾರಿ,ಡಮರು, ತಾಳಗಳ ಮುಗಿಲು ಮುಟ್ಟುವ ದನಿ, ಅದರೊಂದಿಗೆ ಲಯಬದ್ಧವಾದ ಹೆಜ್ಜೆಗಳು ಸಮಾರಂಭದ ಅತ್ಯಂತ ಆಕರ್ಷಕ ಭಾಗ ಎಂದು ಹೇಳಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಏಶ್ಯಾದ ದೇಶಗಳು ಕ್ರೀಡಾ ರಂಗದಲ್ಲಿ ಬಹಳಷ್ಟು ಪ್ರಗತಿ ಸಾಧಿಸಿವೆ. ಈ ಬಾರಿಯೂ ದಕ್ಷಿಣ ಕೊರಿಯಾ, ಜಪಾನ್ ಮತ್ತು ಚೀಣಾ ಮುಖ್ಯ ಸ್ಪರ್ಧಿಗಳಾಗುವ ನಿರೀಕ್ಷೆಯಿದೆ. ಉತ್ತರ ಕೊರಿಯಾ ಕೂಡಾ ಹಲವು ಆಟಗಳಲ್ಲಿ ಸಾಕಷ್ಟು ಸ್ಪರ್ಧೆ ನೀಡಲಿದೆ.

ಏಶ್ಯಾಡ್‌ಗೆ ಸಿದ್ಧತೆಯ ಯಶಸ್ಸಿನಿಂದ ಹುರುಪು ತುಂಬಿದ ಚೀಣಾ ಈಗ ಇಪ್ಪತ್ತನೇ ಶತಮಾನದ ಕೊನೆಯ ದಶಕದಲ್ಲಿ ಕ್ರೀಡೆಗಳ ಅಭಿವೃದ್ಧಿಗೆ ದೊಡ್ಡ ಯೋಜನೆಗಳನ್ನು ಹಾಕಿಕೊಂಡಿದೆ. ಶತಮಾನದ ಅಂತ್ಯದ ವೇಳೆಗೆ ಆ ದೇಶದ ಆರ್ಥಿಕ ಸಾಕಷ್ಟು ಉನ್ನತಿಯ ಘಟ್ಟ ತಲುಪುವ ನಿರೀಕ್ಷೆ ಇರುವುದರಿಂದ ಕ್ರೀಡಾ ಯೋಜನೆಗಳೂ ಅದರೊಡನೆ ಹೆಜ್ಜೆ ಹಾಕುವ ನಿರೀಕ್ಷೆಯಿದೆ. ಒಲಂಪಿಕ್ ಆಟಗಳನ್ನು ನಡೆಸಲು ಬೇಕಾಗುವಷ್ಟು ಕ್ರೀಡಾ ಸೌಲಭ್ಯಗಳನ್ನು ನಿರ್ಮಿಸಲು ಸರಕಾರ ಯತ್ನಿಸುತ್ತಿದೆ. ದೇಶದ ಪ್ರತಿ ಮೂರರಲ್ಲಿ ಒಂದು ಪಂಚಾಯತಿಯಲ್ಲಿ ಕ್ರೀಡಾ ಸ್ಪರ್ಧೆಗಳನ್ನೆಲ್ಲಾ ನಡೆಸಬಹುದಾದ ಕ್ರೀಡಾಂಗಣಗಳನ್ನು ಕಟ್ಟಲಾಗುವುದು. 2000ನೇ ಇಸ್ವಿಯಲ್ಲಿ ನಡೆಯಲಿರುವ ಒಲಂಪಿಕ್ ಆಟಗಳನ್ನು ನಡೆಸಲು ಅರ್ಜಿ ಹಾಕುವ ಬಗ್ಗೆ ಚೀಣಾ ಈಗ ಪರಿಶೀಲಿಸುತ್ತಿದೆ ಎಂದು ಚೀಣಾದ ಕ್ರೀಡಾ ಆಯೋಗದ ಮಂತ್ರಿ ಹಾಗೂ ಅಂತರ್‍ರಾಷ್ಟ್ರೀಯ ಒಲಂಪಿಕ್ ಸಮಿತಿಯ ಉಪಾಧ್ಯಕ್ಷ ಹೆ ಝೆನ್‌ಲಿಯಾಂಗ್ ಹೇಳಿದ್ದಾರೆ.

1951 ಮಾರ್ಚ್‌ನಲ್ಲಿ ನವದೆಹಲಿಯಲ್ಲಿ ಮೊದಲ ಕ್ರೀಡಾ ಕೂಟದೊಂದಿಗೆ ಆರಂಭವಾದ ಏಷ್ಯನ್ ಕ್ರೀಡಾ ಕೂಟ ಏಷ್ಯನ್ ಒಲಂಪಿಕ್ ಮಂಡಳಿ ನಡೆಸುವ ಒಂದು ಸಮಗ್ರ ಕ್ರೀಡಾಕೂಟ. ಎರಡು ಒಲಂಪಿಕ್‌ಗಳ ನಡುವೆ ನಾಲ್ಕು ವರ್ಷಕೊಮ್ಮೆ ನಡೆಯುವ ಈ ಕ್ರೀಡಾ ಕೂಟ 16 ದಿನ ನಡೆಯುತ್ತದೆ. ಹಿಂದಿನ ಏಶ್ಯಾಡ್ ದಕ್ಷಿಣ ಕೊರಿಯಾದ ರಾಜಧಾನಿ ಸಿಯೊಲ್‌ನಲ್ಲಿ 1986ರಲ್ಲಿ ನಡೆದಿತ್ತು. ಭಾರತದಲ್ಲಿ ಇದು ಎರಡು ಬಾರಿ, ಬ್ಯಾಂಗ್ ಕಾಕ್‌ನಲ್ಲಿ ಮೂರು ಬಾರಿ ನಡೆದಿದೆ. ಚೀಣಾದಲ್ಲಿ ಮೊದಲ ಬಾರಿಗೆ ನಡೆಯುತ್ತಿದೆ. ಇಂದಿನ ಹತ್ತು ಏಶ್ಯಾಡ್‌ಗಳ ಸ್ಥೂಲ ವಿವರ ಹೀಗಿದೆ.

ಏಶ್ಯಾಡ್ ಸಂಖ್ಯೆ	ದಿನಾಂಕ	ಸ್ಥಳ	ಸ್ಪರ್ಧೆಗಳ ಸಂಖ್ಯೆ	ಕ್ರೀಡಾಪಟುಗಳ ಸಂಖ್ಯೆ
ಒಂದನೇ	ಮಾರ್ಚ್ 1951	ನವದೆಹಲಿ	6	489
ಎರಡನೇ	ಮೇ 1954	ಮನಿಲಾ	8	1280
ಮೂರನೇ	ಮೇ 1958	ಟೋಕಿಯೋ	13	1820
ನಾಲ್ಕನೇ	ಆಗಸ್ಟ್ 1962	ಜಕಾರ್ತಾ	13	1460
ಐದನೇ	ಡಿಸೆಂಬರ್ 1966	ಬ್ಯಾಂಗ್‌ಕಾಕ್	14	2500
ಆರನೇ	ಡಿಸೆಂಬರ್ 1970	ಬ್ಯಾಂಗ್‌ಕಾಕ್	13	2400
ಏಳನೇ	ಸೆಪ್ಟೆಂಬರ್ 1974	ಟೆಹ್ರಾನ್	16	3010
ಎಂಟನೇ	ಡಿಸೆಂಬರ್ 1978	ಬ್ಯಾಂಗ್‌ಕಾಕ್	19	3842
ಒಂಭತ್ತನೇ	ನವಂಬರ್ 1982	ನವದೆಹಲಿ	21	4595
ಹತ್ತನೇ	ಸೆಪ್ಟೆಂಬರ್ 1986	ಸಿಯೊಲ್	25	3839

ಜನವಾದಿ ಮಹಿಳಾ ಸಂಘಟನೆ

ಪುಟ 1 ರಿಂದ.

ಕೇಳಿದರು. ಇದೇ ಸಂದರ್ಭದಲ್ಲಿ ಬಿ.ಜೆ.ಪಿ. ಮುಖಂಡೆ ವಿಜಯರಾಜೇ ಸಿಂಧ್ಯಾ ಸಂಸತ್ತಿನಲ್ಲಿ "ಸ್ವೇಚ್ಛೆಯಿಂದ ಸತಿಯಾಗಲು ಅವಕಾಶವಿರಬೇಕು" ಎಂದು ಹೇಳಿರುವುದನ್ನು ಟೀಕಿಸುತ್ತಾ ಅವರೇ ಸ್ವತಃ ಈ ಸ್ವೇಚ್ಛೆಯನ್ನೇಕೆ ಅಂಗೀಕರಿಸಲಿಲ್ಲ ಎಂದು ಪ್ರಶ್ನಿಸಿ ಮಹಿಳೆಯರನ್ನು ಕಂದಾಚಾರಗಳ ಗುಲಾಮರನ್ನಾಗಿಸುವ ಪ್ರವೃತ್ತಿಯನ್ನುಖಂಡಿಸಿದರು.

ಈ ನೀತಿ ಬದಲಿಸದೆ ಬೆಲೆಯೇರಿಕೆ ತಡೆಯಲು ವಿಫಲಗೊಂಡಿದೆ ಎಂದ ಕಾಂ. ಅಹಲ್ಯಾ ವಿ.ಪಿ.ಸಿಂಗ್ ಸರ್ಕಾರ ತನ್ನ ಆರ್ಥಿಕ, ಕೈಗಾರಿಕಾ ನೀತಿಗಳ ಮರುವಿಮರ್ಶೆ ನಡೆಸಬೇಕೆಂದು ಮಹಿಳೆಯರು ಎಚ್ಚರಿಸುತ್ತಿದ್ದಾರೆ. ಎಂದರು.

ಹಿಂದೆ ಅಂತರಾಷ್ಟ್ರೀಯ ಮಹಿಳಾ ವರ್ಷ ಆಚರಿಸಲಾಯಿತು. ಈ ವರ್ಷ ಹೆಣ್ಣು ಮಗುವಿನ ವರ್ಷ. 1975 ರಿಂದ 225 ಯೋಜನೆಗಳು ಬಂದಿವೆ. ಆದರೆ ಮಹಿಳೆಯರ ಸಮಸ್ಯೆಗಳ ಪರಿಹಾರದತ್ತ ಅಗತ್ಯ ಒಲವು ಕಂಡು ಬಿಂದಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗಲೂ ಏನೂ ಆಗಲಿಲ್ಲ. ಮಹಿಳೆಯರಿಗೆ ಉದ್ಯೋಗಾವಕಾಶ ನಿರ್ಮಿಸುತ್ತೇವೆ ಎಂದರು. ಆದರೆ ಕೊಟ್ಟದ್ದೇನು? ಹಪ್ಪಳ, ಉಪ್ಪಿನಕಾಯಿ ಕೆಲಸ. ಆಧುನಿಕ ಉದ್ದಿಮೆಗಳಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶ ನೀಡಲಿಲ್ಲ. ಬದಲಿಗೆ ಆಧುನೀಕರಣದ ಹೆಸರಿನಲ್ಲಿ ಅರಿಗೆ ಇದ್ದ-ಬದ್ದ ಉದ್ಯೋಗಾವಕಾಶವೂ ಕಡಿತಗೊಂಡಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ರಂಗ ಸರ್ಕಾರ ಮಹಿಳಾ ಆಯೋಗದ ಸ್ಥಾಪನೆ ಬಗ್ಗೆ ನಿರ್ಧರಿಸಿರುವುದು ಸ್ವಾಗತಾರ್ಹ ಎಂದ ಅವರು ಇದು ದೇಶದ ಮಹಿಳಾ ಸಂಘಟನೆಗಳು ಸ್ವಾತಂತ್ರ್ಯ ದೊರೆತಂದಿನಿಂದ ಒತ್ತಾಯಿಸುತ್ತಾ ಬಂದಿರುವ, ಹೋರಾಡುತ್ತಾ ಬಂದಿರುವ, ಹೋರಾಡುತ್ತ ಬಂದಿರುವ ಒಂದು ಬೇಡಿಕೆ ಎಂದರು.

ಸಂಸತ್ತಿನಲ್ಲಿ ವಿರೋಧ ಪಕ್ಷದ ಮುಖಂಡನೆಂದುಕೊಂಡು ಪ್ರಜಾಪ್ರಭುತ್ವದ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ರಾಜೀವಗಾಂಧಿ ತ್ರಿಪುರಾದಲ್ಲಿ ಆತನ ಪಕ್ಷದ ಸರ್ಕಾರ ಮಹಿಳೆಯರ ಮೇಲೆ ಎಡೆಬಿಡದೆ ನಡೆಸುತ್ತಿರುವ ಅತ್ಯಾಚಾರಗಳನ್ನು ನಿಲ್ಲಿಸುತ್ತಿಲ್ಲ ಎಂದು ಬಲವಾಗಿ ಟೀಕಿಸಿದರು.

ಇಂತಹ ಪ್ರವೃತ್ತಿಗಳ ವಿರುದ್ಧ, ದೇಶವನ್ನು ಒಡೆಯುವ ವಿಚ್ಛಿದ್ರಕಾರಿ, ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಹೋರಾಟದ ಅಗತ್ಯವನ್ನೂ ಒತ್ತಿಹೇಳಿದರು.

69 ವರ್ಷದ ವೃದ್ಧೆ ಕಾಂ. ಅಹಲ್ಯಾ ರಂಗ್ನೇಕರ್ "ಕೆಲವರು ರಕ್ತ ಕಾವಿಯೆನ್ನುವರು, ಇದನ್ನು ಕೆಲವರು ಹಸಿರೆನ್ನುವರು, ಆದರೆ ನನ್ನದು ಈ ವಯಸ್ಸಿನಲ್ಲೂ ಕೆಂಪು ರಕ್ತ" ಎಂದು ನುಡಿದ ಬಿಸಿರಕ್ತದ ಹೋರಾಟದ ಕಹಳೆ ಮಹಿಳಾ ಕಾರ್ಯಕರ್ತೆಯರಲ್ಲಿ ರಾಜ್ಯದಲ್ಲಿ ಮಹಿಳಾ ಆಂದೋಲನ ವಿಸ್ತರಿಸುವ ಹುರುಪು ಮೂಡಿಸಿತು.

ಈ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಎರಡನೇ ರಾಜ್ಯ ಸಮ್ಮೇಳನ ಅಧ್ಯಕ್ಷೆಯಾಗಿ ಚುನಾಯಿಸಿದ ಹರಿಣಿ ಕಕ್ಕೇರಿಯವರುವಹಿಸಿದ್ದರು. ಸಹಕಾರ್ಯದರ್ಶಿ ಫ್ಲೋರಾ ಸ್ವಾಗತಿಸಿದರು. ಕಾರ್ಯದರ್ಶಿ ವಿಮಲಾ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳ ಸ್ಥೂಲ ಪರಿಚಯ ನೀಡಿದರು, ಸಮ್ಮೇಳನ ಆರಿಸಿದ ಹೊಸ ಮುಖಂಡತ್ವದ ಪಟ್ಟಿ ನೀಡಿದರು. ಅದಕ್ಕೆ ಮೊದಲು ಪ್ರಖ್ಯಾತ ಪ್ರಗತಿಶೀಲ ಬರಹಗಾರ ಬರಗೂರು ರಾಮಚಂದ್ರಪ್ಪ ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡುತ್ತಾ ನಮ್ಮ ಸಮಾಜದಲ್ಲಿರುವ ಮಹಿಳಾ ಸಮಾನತೆಯ ವಿರೋಧಿ ಮೌಲ್ಯಗಳನ್ನು ಟೀಕಿಸುತ್ತಾ ಅವುಗಳ ವಿರುದ್ಧ ಹೋರಾಟದ ಮನಸ್ಸನ್ನು ಹೊತ್ತು ಈ ಸಮ್ಮೇಳನದಿಂದ ಮುಂದೆ ಸಾಗಲು ಕರೆ ನೀಡಿದರು. ಕೊನೆಯಲ್ಲಿ ಉಪಾಧ್ಯಕ್ಷೆ ಎಸ್. ಆರ್. ಲೀಲಾವತಿ ವಂದನಾರ್ಪಣೆ ಸಲ್ಲಿಸಿದರು.

ಬಹಿರಂಗ ಸಭೆ ನಡೆಯುವ ಮೊದಲು ಸಮ್ಮೇಳನದ ಆವರಣದಿಂದ ಸಭೆ ನಡೆದ ಚಿಕ್ಕಲಾಲ್‌ಬಾಗ್‌ವರೆಗೆ ಮಹಿಳಾ ಪ್ರತಿನಿಧಿಗಳು ಹಾಗೂ ಇತರರು ಪಾಲುಗೊಂಡ ಮೆರವಣಿಗೆ ಬೆಂಗಳೂರಿನ ಜನರ ಗಮನ ಸೆಳೆಯಿತು.

ಉರ್ವಶಿಯ ಶಾಪ ಮತ್ತು ಕಮ್ಯುನಿಸ್ಟರು

ಇತಿಹಾಸದ ಪುಟಗಳಿಂದ

ಗಿಜಿಗಿಸುವ ಕಲ್ಕತ್ತಾದ ಬೀದಿಗಳು. ಸೊಣಕಲು ದೇಹದ ಯುವಕನೊಬ್ಬ ತಮಟೆ ಹಿಡಿದು ನಿಂತಿದ್ದಾನೆ. ಒಂದು ಓ ಎರಡು...ಬಾರಿಸಿದ ಹೋಗುತ್ತಿರುವ ಕೆಲವು ಜನ ಆತನ ಮುಖವನ್ನೊಮ್ಮೆ ನೋಡಿದರು. ಹಲವು ಜನ ಕತ್ತು ಹೊರಳಿಸದೇ ಹಾಗೇ ನಡೆದರು.

ಯುವಕ ಹಾಡಲು ತೊಡಗಿದ. ಹಾಗೆ ಒಂದೆರಡು ಜನ ಬಂದು ನಿಂತರು. ಬಂಗಾಳಿ ಬಾಬುವಿನ ಜಾದು ಆಟ ಇರಬಹುದೇ ಅಂತಾ ಇನ್ನೂ ಕೆಲವರು ಕೇಳ ಕೇಳುತ್ತಿದ್ದಂತೆ ಮನೋರಂಜನೆಯ ಗೀತೆಗಳಲ್ಲ ಎಂಬುದು ಸ್ಪಷ್ಟವಾಯಿತು. ಸ್ವಾತಂತ್ರ್ಯದ ತಹತಹಿಕೆಯಲ್ಲಿ ಮನದಾಳದಿಂದ ಚಿಮ್ಮುತ್ತಿದ್ದ ಕ್ರಾಂತಿಕಾರಿ ಕಿಡಿಗಳವು.

ಯುವಕ ಹಾಡುವುದನ್ನು ನಿಲ್ಲಿಸಿದ. ಬ್ರಿಟಿಷ್ ಸಾಮ್ರಾಜ್ಯಶಾಹಿ ಸುಲಿಗೆತನ ದಾಸ್ಯದ ಸರಪಳಿ ಕಿತ್ತೊಗೆಯಲು ಸಂಪೂರ್ಣ ಸ್ವಾತಂತ್ರ್ಯದ ಸಾಧನೆಗೆ ಕ್ರಾಂತಿಕಾರಿ ಮಾರ್ಗವೊಂದೇ ಅನಿವಾರ್ಯವೆಂದು ವಿವರಿಸಿದ. ನೆರೆದ ಜನರಲ್ಲಿ ಕೆಲವರು ಗಂಭೀರವಾಗಿ ಆಲಿಸಿದರು. ಪೋಲೀಸಿನವನು ಬಂದು ಕೂಗಾಡಿದಾಗ ಎಲ್ಲರೂ ಕರಗಿದರು.

'ಜಾದುಗಾರ' ಯುವಕ ಕೆಂಪು ಬಾವುಟ ಹಾರಿಸಿ, ಜನರೊಂದಿಗೆ ಹೆಜ್ಜೆ ಹಾಕಿದ. ಗಲ್ಲಿಯೊಂದರ ತಿರುವಿನಲ್ಲಿ ಮರೆಯಾದ. ಮತ್ತೆ ನಾಳೆಯ [illegible] ಆತನ [illegible] ಪಲ್ಲಿ.

[illegible] ಪ.ಬಂಗಾಳ ಪಕ್ಷದ ಘಟಕದ [illegible] ಕಳೆದ ಐದು ತಿಂಗಳಿನಿಂದಲೂ ಕಾಲರಾ, ಸಿಡುಬು, ಗಳಿಂದಾಗಿ ಹಲವಾರು ಸಂಗಾತಿಗಳು ಸತ್ತಿದ್ದಾರೆ. ಅನೇಕ ಜನರೂ ಸಹ ಬಲಿಯಾಗುತ್ತಿದ್ದಾರೆ ಇದನ್ನೂ ತಡೆಗಟ್ಟಲು ಸ್ಥಳೀಯರಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಬೇಕೆಂದು ಸುತ್ತೋಲೆಯಲ್ಲಿ ವಿವರಿಸಲಾಗಿತ್ತು. 1943 ನವೆಂಬರ್ ಬಂಗಾಳದ ಜನತೆಯ ಈ ಭೀಕರ ಸ್ಥಿತಿಯನ್ನು, ಭಾರತದ ಇಡೀ ಜನಸ್ತೋಮದ ಮುಂದೆ ವಿವರಿಸಿ. ಹಸಿವು 'ಮಹಾಮಾರಿ' ಸಾವಿಗೆದುರಾಗಿ ಹೋರಾಟ ನಡೆಸಲು ಕರೆ ನೀಡಿ ಪಕ್ಷದ ಕೇಂದ್ರ ಸಮಿತಿಯ ಒಂದು ಕಿರುಪುಸ್ತಕ ಪ್ರಕಟಿಸಿತು, ಬಂಗಾಳದಲ್ಲಿ ಪರಿಹಾರ ಕಾಮಗಾರಿ ನಡೆಸಲು ಜನತೆಯಲ್ಲಿ ವಿನಂತಿಸಿತು. ಇದಕ್ಕಾಗಿ ಸಾಂಸ್ಕೃತಿಕ ತಂಡಗಳನ್ನು ರಚಿಸಿ - 'ಬಂಗಾಳ ಉಳಿಸಿ' ನಿಧಿ ಸಂಗ್ರಹಕ್ಕೆ ಇಳಿಯಲಾಯಿತು.

ಈ ಕಠಿಣ ದಿನಗಳಲ್ಲಿ ಶ್ರಮಿಸಿದ ಕಮ್ಯುನಿಸ್ಟ್ ನಾಯಕ ಕಮಲ್ ಚಟರ್ಜಿಯವರು " ಊರ್ವಶಿಯ ಶಾಪ ಉಪಕಾರ ಮಾಡಿದಂತಾಗಿತ್ತು' ಎನ್ನುತ್ತಾರೆ. ಕ್ವಿಟ್ ಇಂಡಿಯಾ' ಹೋರಾಟದಲ್ಲಿ ಭಾರತೀಯ ಕಮ್ಯುನಿಸ್ಟರ ನಿಲುವಿನ ಮೇಲೆ ನಡೆದ ಅಪಪ್ರಚಾರದ ಧಾಳಿಯಿಂದಾಗಿ ದೇಶದ ಜನತೆಯನ್ನು ಕಮ್ಯುನಿಸ್ಟ್ ಪಕ್ಷದಿಂದ ಕೊಂಚ ದೂರಸರಿಯುವಂತೆ ಮಾಡಲಾಗಿತ್ತು. ಆದರೆ ಕ್ಷಾಮದ ಈ ದಾರುಣ ಸ್ಥಿತಿಯು ಮತ್ತೆ ಜನರ ಮಧ್ಯೆ ಒಂದಾಗಿ ಬೆರೆತು ಹೋರಾಟದ ಅನುವು ಮಾಡಿಕೊಟ್ಟಿತ್ತು. ಕಮ್ಯುನಿಸ್ಟರಲ್ಲಿದ್ದು ಅಗಾಧ ಮಾನವ ಪ್ರೇಮ ಎಲ್ಲಾ ಅಡ್ಡಗೋಡೆಗಳನ್ನು ಉರುಳಿಸಿ ಸ್ನೇಹ - ಸಂವಾದದ ಬೆಸುಗೆ ಹಾಕಿತು. ಹಿಂದೆ ದೂರ ಹೋಗಿದ್ದ ಕಾಂಗ್ರೆಸ್ ವಿದ್ಯಾರ್ಥಿಗಳು ಕಮ್ಯುನಿಸ್ಟರೊಂದಿಗೆ ಕಲೆತು ಕೈಜೋಡಿಸಿದರು. ಆ ಸಂದರ್ಭದಲ್ಲಿ ಕಾಂ. ಪಿ.ಸಿ. ಜೋಷಿಯವರು ಬರೆದ 'ಬಂಗಾಳ ಕಾಪಾಡಿ' ಮತ್ತು ಕಾಂ ಭವಾನಿ ಸೇನ್ ರವರ "ಬಂಗಾಳದ ಕಷ್ಟದಾಳಕ್ಕೆ' ಈ ಎರಡು ಲೇಖನಗಳೂ ಕಮ್ಯುನಿಸ್ಟ್‌ನೂ ,

ಜನಸಾಮಾನ್ಯರೂ ಒಂದಾಗಿ ಶ್ರಮಿಸುವಂತ ಪ್ರೇರೇಪಣೆ ನೀಡಿದವು.

ಕುಮುದಾ ಬಿಸ್ವಾಸ್ . ಅವರ ಭಾಷೆಯಲ್ಲಿ ಹೇಳುವುದಾದರೆ "ಗಂಜಿಗೂ ಗತಿಯಿಲ್ಲದಿರುವಾಗ ಜನರ ಜೀವ ಉಳಿಸಲು ಹೋರಾಡಿದವರು ಕಮ್ಯುನಿಸ್ಟರು ಮಾತ್ರ. ಶಿಸ್ತುಬದ್ಧ ತಂಡಗಳನ್ನು ಕಟ್ಟಲಾಗಿತ್ತು. ಮುಂದೆ ಇದು ಎಲ್ಲರನ್ನೂ ಒಳಗೊಳಿಸತೊಡಗಿತು. ಬರ್ಧ್ವಾನ್ ಜಿಲ್ಲೆಯ ಮಹಾರಾಜನು ಅಧ್ಯಕ್ಷನಾಗಿದ್ದು, ಕಮ್ಯುನಿಸ್ಟರು, ಕಾಂಗ್ರೆಸ್ಸಿಗರು - ಮುಸ್ಲಿಂ ಲೀಗ್‌ನವರು ಎಲ್ಲರೂ ಸೇರಿದ್ದ ಈ ಸಮಿತಿಅದರ ಕಾರ್ಯಗಳನ್ನು ಅವಗಣಿಸಲು ಬ್ರಿಟೀಷರಿಗೂ ಸಾಧ್ಯವಾಗಲಿಲ್ಲ. ಹೀಗೆ ಕಮ್ಯುನಿಸ್ಟರು ಜನತೆಯ ಮದದಾಳ ಹೊಕ್ಕು ನೆಲೆಯಾಗಿ ನಿಂತು ಬಿಟ್ಟರು".

(ಮುಂದುವರೆಯುವುದು)

-ಇ.ಕೆ. ಎನ್. ರಾಜನ್

-ಎಸ್.ವೈ. ಗುರುಶಾಂತ್.

"ಮುಖ್ಯ ಮಂತ್ರಿಗಳೇ, ಜಲಮಂಡಳಿ ಉಳಿಸಿ" "ಭ್ರಷ್ಟ ಅಧಿಕಾರಿ ದೊರೆರಾಜುರವರನ್ನು ತೊಲಗಿಸಿ"

ಈ ಘೋಷಣೆ ಆಗಸ್ಟ್ 27 ರಂದು ಮೈಸೂರಿನಲ್ಲಿ ಕಾವೇರಿ ನೀರು ಯೋಜನೆಯ ಮೂರನೆಯ ಹಂತಕ್ಕೆ ಶಂಕು ಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿ ಕೇಳಿಬಂತು. ಜಲಮಂಡಳಿಯ ಅಧ್ಯಕ್ಷ ಮತ್ತ ಮ್ಯಾನೇಜಿಂಗ್ ಡೈರೆಕ್ಟರ್ ದೊರೈರಾಜ್‌ರ ನೌಕರ ವಿರೋಧಿ, ಅಕ್ರಮ - ಅವ್ಯವಹಾರದ ಭ್ರಷ್ಟ ನೀತಿಯನ್ನು ಪ್ರತಿಭಟಿಸಿ ಮುಖ್ಯ ಮಂತ್ರಿಗಳ ಗಮನ ಸೆಳೆಯಲು ಜಲಮಂಡಳಿ ನೌಕರರು ಪ್ರತಿಭಟನಾ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದರು. ಪೋಲೀಸರನ್ನು ಬಳಸಿ ದೊರೈರಾಜು ಈ ಕಾರ್ಯಕ್ರಮವನ್ನು ವಿಫಲಗೊಳಿಸಲು ನಡೆಸಿದ ಪ್ರಯತ್ನ ಸಾಗಲಿಲ್ಲ. ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಲು ಪುರಭವನದವರೆಗೆ ಮೆರವಣಿಗೆ ಹೋಗಲು ಬಿಡದಿದ್ದರೆ ನೀರು ಬಂದ್ ಮುಂತಾದ ತೀವ್ರ ಚಳುವಳಿ ಮಾರ್ಗ ಹಿಡಿಯಬೇಕಾದೀತೆಂದು ನೌಕರರು ಎಚ್ಚರಿಸಬೇಕಾಗಿ ಬಂತು.

ಕೊನೆಗೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಕರ್ನಾಟಕ ನಗರದ ನೀರು ಪೂರೈಕೆ ಹಾಗೂ ಒಳಚರಂಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ವಿ.ಎನ್. ಹಳಕಟ್ಟಿ, ಮೈಸೂರು ವಿಭಾಗ ಸಮಿತಿ ಅಧ್ಯಕ್ಷ ಗೌಡೇಗೌಡರ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಸಂಘದ ನಿಯೋಗವೊಂದು ಭೇಟಿ ಮಾಡಿ ಮನವಿ ಸಲ್ಲಿಸಿತು. ಪ್ರತಿನಿಧಿ ಮಂಡಳಿಯಲ್ಲಿದ್ದ ಇತರ ಮುಖಂಡರೆಂದರೆ ಎ.ಎನ್. ಪಾಟೀಲ್, ವಿ.ಟಿ.ಗುಡಿ, ಸಿ.ರಘುನಾಥ್, ಎಂ. ಚಂದ್ರಶೇಖರ, ನಿಂಗೇಗೌಡ ಮತ್ತು ರಾಜು.

ನೌಕರರ ಸಮಸ್ಯೆಗಳನ್ನು ಪರಿಶೀಲಿಸಿ ನಗರಾಭಿವೃದ್ಧಿ ಮಂತ್ರಿಗಳ ಮೂಲಕ ತ್ರಿಪಕ್ಷೀಯ ಸಭೆ ನಡೆಸುವುದಾಗಿಯೂ, ತಾನು ಮಧ್ಯ ಪ್ರವೇಶಿಸಿ ಜಲಮಂಡಳಿಗೆ ಶೀಘ್ರವೇ ಚೇರ್ ಮನ್, ಎಂ.ಡಿ. ಮುಂತಾದ ಮೇಲಧಿಕಾರಿಗಳನ್ನು ನೇಮಿಸುವುದಾಗಿಯೂ ಮುಖ್ಯ ಮಂತ್ರಿಗಳು ಭರವಸೆ ನೀಡಿದರು. ನಂತರ ನಿಯೋಗ ನಗರಾಭಿವೃದ್ಧಿ ಸಚಿವರನ್ನು ಭೇಟಿ ಮಾಡಿತು. ಅವರೂ ತ್ರಿಪಕ್ಷೀಯ ಸಭೆಯ ಭರವಸೆಯಿತ್ತರು.

ಮತ ಪ್ರದರ್ಶನ, ಮೆರವಣಿಗೆಯಲ್ಲಿ ಸಾವಿರಕ್ಕೂ ಹೆಚ್ಚು ನೌಕರರು ಭಾಗವಹಿಸಿದ್ದರು, ಸಾಕಷ್ಟು ಸಂಖ್ಯೆಯಲ್ಲಿ ಮಹಿಳಾ ನೌಕರರೂ ಭಾಗವಹಿಸಿದರು.

ಈ ನಡುವೆ ಆಗಸ್ಟ್ 20ರಿಂದ ಬೆಂಗಳೂರಿನಲ್ಲಿ ಜಲಮಂಡಳಿ ಕೇಂದ್ರ ಕಚೇರಿಯೆದುರು ವಿವಿಧ ವಿಭಾಗ ಸಮಿತಿಗಳಿಂದ ಸರದಿ ಅನ್ನ ಸತ್ಯಾಗ್ರಹ ನಡೆಯುತ್ತಿದೆ.

ಜಲಮಂಡಳಿಯ ಉಚ್ಚ ಹುದ್ದೆಗಳು ಖಾಲಿ ಇರುವುದರಿಂದ ಮಂಡಳಿಯ ಆಡಳಿತ ತೀವ್ರವಾಗಿ ಸ್ಥಗಿತಗೊಂಡಿದೆ ಅನೇಕ ನೀರು ಪೂರೈಕೆ ಯೋಜನೆಗಳು ಕಾರ್ಯಗತವಾಗದೇ ಉಳಿದಿವೆ. ಒಂದೆಡೆ ಸರ್ಕಾರ, ಮಂತ್ರಿಗಳು ನೀರು ಪೂರೈಕೆ ಯೋಜನೆಗಳು ಶಂಕು ಸ್ಥಾಪನೆ ಮಾಡುತ್ತಿದ್ದರೂ ಅದಕ್ಕೆ ಅಗತ್ಯ ಹಣ ಬಿಡುಗಡೆ ಮಾಡುತ್ತಿಲ್ಲ. ಎಲ್ಲಾ ನಗರಗಳ ಬಲ್ಕ್ ಸಪ್ಲೈ ಹಂತದ ನಿರ್ವಹಣೆಯನ್ನು ಜಲಮಂಡಳಿಗೆ ವಹಿಸಿಕೊಡಬೇಕೆಂದು ಸರಕಾರ ನಿರ್ಣಯಿ ಸಿದ್ಧರೂ ಆದಿನ್ನೂ ಕಾರ್ಯಗತವಾಗಿಲ್ಲ. ನೌಕರರ ಪರವಾದ ಜಲಮಂಡಳಿಯ ಸಿ ಅಂಡ್ ಆರ್ ತಿದ್ದುಪಡಿಗಳನ್ನು ತಡೆಹಿಡಿದು ನೌಕರರಿಗೆ ಅನ್ಯಾಯ ಮುಂದುವರೆಸಲಾಗುತ್ತಿದೆ. ವರ್ಕ್ ಚಾರ್ಜ್ ನೌಕರರನ್ನು ಖಾಯಂಗೊಳಿಸುತ್ತಿಲ್ಲ. ನೌಕರರ ಇನ್ನೂ ಹಲವು ಸಮಸ್ಯೆಗಳತ್ತ ಗಮನ ಹರಿಸುತ್ತಿಲ್ಲ.

ಕಳೆದ ಒಂದೂವರೆ ವರ್ಷದಿಂದ ಅನೇಕ ಮನವಿಗಳನ್ನು ನೀಡಿದರೂ ಪ್ರಯೋಜನವಾಗದ್ದರಿಂದ ನೌಕರರ ಸಂಘ ಆಗಸ್ಟ್ 20 ರಿಂದ ಈ ಕಾರ್ಯಾಚರಣೆ ಆರಂಭಿಸಿದೆ. ಆಗಸ್ಟ್ 22-23 ರಂದು ಸಂಘದ ಪದಾಧಿಕಾರಿಗಳೊಡನೆ ಚೇರ್ ಮನ್ ಎರಡು ಸುತ್ತಿನ ಮಾತುಕತೆ ನೆಡಸಿದ್ದರೂ ನೌಕರರ 12 ಬೇಡಿಕೆಗಳಿಗೆ ಪರಿಹಾರ ನೀಡಲು ಮಂಡಳಿ ವಿಫಲವಾಗಿದೆ ಎಂದು ಸಂಘದ ಹೇಳಿಕೆ ತಿಳಿಸಿದೆ.

ಈ ಕೂಡಲೇ ನೌಕರರ ಸಮಸ್ಯೆಗಳನ್ನು ಬಗೆಹರಿಸದಿದ್ದರೆ, ಮುಖ್ಯಮಂತ್ರಿಗಳ ನಗರಾಭಿವೃದ್ಧಿ ಮಂತ್ರಿಗಳ ಆಶ್ವಾಸನೆಯಂತೆ ನಡೆದು ಕೊಳ್ಳದಿದ್ದರೆ ಚಳುವಳಿಯನ್ನು ತೀವ್ರಗೊಳಿಸುವುದಾಗಿ ಸಂಘದ ಹೇಳಿಕೆ ತಿಳಿಸಿದೆ.

ಎಂ.ಎಸ್.ಕೆ.ಮಿಲ್ಸ್ ಕಾರ್ಮಿಕರ ಬೇಡಿಕೆಗಳ ವಾರಚರಣೆ

ಸಿ.ಐ.ಟಿ.ಯು. ರಾಜ್ಯ ಸಮಿತಿಯ ಕರೆಯ ಮೇರೆಗೆ ಎಂ.ಎಸ್.ಕೆ. ಮಿಲ್ಸ್ ಕಾರ್ಮಿಕರ ಸಂಘ, ಹತ್ತಿಗಿರಣಿಯ ಕಾರ್ಮಿಕರ ಬೇಡಿಕೆಗಳ ಬಗ್ಗೆ ಆಗಸ್ಟ್ 25 ರಿಂದ 31 ರವರೆಗೆ ವಾರಚರಣೆ ಹೋರಾಟ ನಡೆಸಲಾಯಿತು.

ಜಂಟಿ ಕಾರ್ಯದರ್ಶಿ ತಿಮ್ಮಣ್ಣ ದೊಡಮನಿ ಗೇಟ್ ಮೀಟಿಂಗ್ ಹಾಗೂ ಬಹಿರಂಗ ಸಭೆಯಲ್ಲಿ ಮಾತನಾಡುತ್ತ, 1985 ರಲ್ಲಿ ಕಾಂಗ್ರೆಸ್ ಸರಕಾರ ಹೊಸ ಜವಳಿ ನೀತಿಯನ್ನು ತಂದು ದೇಶದ ಹತ್ತಿಗಿರಣಿ ಕಾರ್ಮಿಕರನ್ನು ಬೀದಿ ಪಾಲು ಮಾಡಿತು. ಆದರೆ ಕಳೆದ ವರ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ರಾಷ್ಟ್ರೀಯ ರಂಗ ಸರ್ಕಾರ ಕೂಡ ಹಿಂದಿನ ಕಾಂಗ್ರೆಸ್(ಐ) ಸರಕಾರ ಮಾಡಿದ ಕೈಗಾರಿಕಾ ಆರ್ಥಿಕ ನೀತಿಯನ್ನು ಅನುಸರಿಸುತ್ತಿರುವುದನ್ನು ಟೀಕಿಸಿದರು.

ಆದ್ದರಿಂದ ಹತ್ತಿಗಿರಣಿಗಳ ಆರ್ಥಿಕ ನೀತಿ ಹದಗೆಟ್ಟಿದೆ. ಅದನ್ನು ಕೈಬಿಟ್ಟು ದೇಶದಲ್ಲಿ ಮುಚ್ಚಿರುವ ಹತ್ತಿಗಿರಣಿಗಳನ್ನು ರಾಷ್ಟ್ರೀಕರಣ ಮಾಡಬೇಕು. ರೋಗಗ್ರಸ್ತವಾಗಿರುವ ಎನ್.ಟಿ.ಸಿ. ಗಿರಣಿಗಳನ್ನು ಅಭಿವೃದ್ಧಿ ಮಾಡಿ ದೇಶದ ಕಾರ್ಮಿಕರಿಗೆ ಕೆಲಸ ಒದಗಿಸಬೇಕೆಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕಲ್ಲಪ್ಪ ಶಿರಣಗಿ ಸಭೆಯಲ್ಲಿ ಮಾತನಾಡಿ ಎನ್.ಟಿ.ಸಿ. ಗಿರಣಿ ಕಾರ್ಮಿಕರು ಒಂದಾಗಿ ಹೊಸ ಜವಳಿ ನೀತಿ ವಿರುದ್ಧ ಹೋರಾಟ ಮಾಡಿದರೆ ಗಿರಣಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವೆಂದು ತಿಳಿಸಿದರು.

ಸಾಮೂಹಿಕ ಕಾರ್ಮಿಕ ಸಂಘದ ಕಾರ್ಯದರ್ಶಿಯಾದ ಸಯ್ಯದ ಗುಲಮಾ . ಇಬ್ರಹಿಮ್ ಸಭೆಯಲ್ಲಿ ಮಾತನಾಡಿ ಕೈ ಮಗ್ಗಗಳ ಮುಖಾಂತರ ಬಹಳ ಹಿಂದಿನಿಂದಲೂ ಬಟ್ಟೆಗಳನ್ನು ತಯಾರು ಮಾಡುತ್ತಿದ್ದೇವೆ. ಆದರೆ ಹತ್ತಿಗಿರಣಿಗಳು ಚಲಾವಣೆಯಲ್ಲಿ ಬಂದ ನಂತರ ಕೈಮಗ್ಗ ಗಳ ಕಾರ್ಮಿಕರು ಬೀದಿಪಾಲಾದರು ಎಂದು ಸಭೆಯಲ್ಲಿ ತಿಳಿಸಿದರು. ಆಗಸ್ಟ್ 31-1990 ರಂದು ಎಂ.ಎಸ್.ಕೆ. ಮಿಲ್ ಗೇಟು ಎದುರುಗಡೆ ಕಾರ್ಮಿಕರು ಧರಣಿ ನಡೆಸಿದರು. ಧರಣಾದ ನೇತೃತ್ವವನ್ನು ಯೂನಿಯನ್ ಪ್ರಧಾನ ಕಾರ್ಯದರ್ಶಿಯಾದ ಅಬ್ದುಲ್ ಖಾದರ್ ಹನ್ನೂಭಾಯಿ, ಜಂಟಿ ಕಾರ್ಯದರ್ಶಿ ತಿಮ್ಮಣ್ಣಾ ದೊಡಮನಿ ಇವರು ವಹಿಸಿದರು.

ನಿಮಗಿದು ಗೊತ್ತೇ?

ಪ್ರತಿ 2000 ಚೀಣಿಯರಿಗೊಂದು ಕ್ರೀಡಾಂಗಣ

ಮುಂದಿನ ತಿಂಗಳು ಚೀಣಾದಲ್ಲಿ ನಡೆಯಲಿರುವ 11 ನೇ ಏಶ್ಯಾಡ್ ಏಶ್ಯನ್ ಕ್ರೀಡೆಗಳಲ್ಲೇ ಅತ್ಯಂತ ದೊಡ್ಡದು. 39 ದೇಶಗಳ 6000 ಕ್ಕೂ ಹೆಚ್ಚು ಆಟಗಾರರು 27 ವಿಧದ ಆಟಗಳಲ್ಲಿ ಭಾಗವಹಿಸಲಿದ್ದಾರೆ. ದಿಲ್ಲಿಯಲ್ಲಿ ನಡೆದ 9ನೇ ಏಶ್ಯಾಡ್‌ನಲ್ಲಿ 4595 ಕ್ರೀಡಾಪಟುಗಳು 21ವಿಧದ ಆಟಗಳಲ್ಲಿ ಭಾಗವಹಿಸಲಿದ್ದಾರೆ. 10 ನೇ ಸಿಯೋಲ್ ಏಶ್ಯಾಡ್‌ನಲ್ಲಿ 3739 ಆಟಗಾರರು 25 ವಿಧದ ಆಟಗಳಲ್ಲಿ ಭಾಗವಹಿಸಿದ್ದರು.

ಚೀಣಾ ಮೊದಲಬಾರಿಗೆ ಈ ಕ್ರೀಡೆಗಳನ್ನು ನೆಡೆಸುತ್ತಿದೆ ಏಶ್ಯನ್ ಕ್ರೀಡೆ ಗ್ರಾಮ ' ಹಾಗೂ 33 ಸ್ಪರ್ಧಾಸ್ಥಳಗಳನ್ನು ಕಟ್ಟಲು 40 ಸಾವಿರ ಮಂದಿ ಹಗಲಿರುಳು ದುಡಿದಿದ್ದಾರೆ. 10 ಕೋಟಿಗಿಂತಲೂ ಹೆಚ್ಚು ಮಂದಿ ತಮ್ಮ ಉದಾರವಂತಿಗೆ ನೀಡಿದ್ದಾರೆ ವಿದ್ಯಾರ್ಥಿಗಳು ತಮ್ಮ ಪಾಲಕರತ್ತ ಜೇಬುಖರ್ಚನ್ನು ವಂತಿಗೆ ನೀಡಿದರು. ಹಲವಾರು ಯುವಕರು ಸ್ವಯಂ ಸೇವಕರಾಗಿ ದುಡಿಯಲು ಮುಂದೆಬಂದಿದ್ದಾರೆ. ಹಲವು ನವವಿವಾಹಿತರು ಬೈಜಿಂಗ್‌ಗೆ ಬಂದು ವಿಶಿಯಡ್‌ಗಾಗಿ ಒಂದೊಂದು ಮರ ನೆಟ್ಟು ಹೋಗಿದ್ದಾರೆ. ಎಂದು 'ಚೈನಾ ಟುಡೇ' ವರದಿಮಾಡಿದೆ.

ಚೀಣಾ ಈಗ ವಿಶ್ವದ ಪ್ರಮುಖ ಆಟಗಾರ ದೇಶಗಳಲ್ಲಿ ಒಂದು. ಇದರಲ್ಲಿ ಅಲ್ಲಿಯ ಸರಕಾರದ ಪಾತ್ರವೇನು? ಆಟೋಟಗಳು ಜನರ ಆರೋಗ್ಯ, ಸಂತೋಷದ ಭರವಸೆ ನೀಡುವ ಒಂದು ಅತ್ಯಗತ್ಯದ ವಿಭಾಗ ಎಂಬುದು ಅಲ್ಲಿಯ ಸರಕಾರದ ಮೂಲಭೂತ ನಿಯಮ.

ಕಳೆದ ನಲ್ವತ್ತು ವರ್ಷಗಳಲ್ಲಿ ಚೀಣೀಯರ ಸರಾಸರಿ ಆಯುಷ್ಯ 35ರಿಂದ 69 ಕ್ಕೇರಿದೆ. ಆಟೋಟಗಳಿಗೆ ದೊರೆತ ವಿಶೇಷ ಪ್ರೋತ್ಸಾಹದಿಂದಾಗಿ ಯುವಜನರ ಆರೋಗ್ಯ ಬಹಳಷ್ಟು ಹೆಚ್ಚಿದೆ.

ಶಿಕ್ಷಣದ ಎಲ್ಲಾ-ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ-ಮಟ್ಟಗಳಲ್ಲೂ ಪ್ರತಿದಿನ ಒಂದು ಗಂಟೆಯ ಆಟ ಕಡ್ಡಾಯ. ನೌಕರರೂ, ಅವರು ಎಲ್ಲೇ ಕೆಲಸ ಮಾಡುತ್ತಿರಲಿ, ಬೆಳಿಗ್ಗೆ, ಮಧ್ಯಾಹ್ನ 10 ರಿಂದ 20 ಮಿನಿಟಿನ ವ್ಯಾಯಾಮ ಆಟೋಟದಲ್ಲಿ ಭಾಗವಹಿಸಬೇಕೆಂದಿದೆ.

ಚೀಣಾದಲ್ಲೀಗ 15 ರಾಷ್ಟ್ರೀಯ ಅಸೋಸಿಯೇಷನ್‌ಗಳು, 40 ಸಾವಿರ ಲೀಗ್‌ಗಳು, ಫ್ಯಾಕ್ಟರಿಗಳಿಗೆ , ಗಣಿಗಳಿಗೆ ಸೇರಿದ ಸುಮಾರು 5 ಲಕ್ಷ ಟೀಮುಗಳಿವೆ. ಸುಮಾರು 4 ಕೋಟಿ ನಗರ ಪ್ರದೇಶದ ಕಾರ್ಮಿಕರು, ನೌಕರರು ನಿಯಮಿತವಾಗಿ ಆಟೋಟಗಳಲ್ಲಿ ತೊಡಗಿದ್ದಾರೆ. ಗ್ರಾಮಾಂತರಗಳಲ್ಲೂ ಇದೇ ಪ್ರಮಾಣದಲ್ಲಿ ಜನ ತಮ್ಮ ಪ್ರಿಯ ಕೀಡೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಇದರಲ್ಲದೆ ಕ್ರೀಡಾಪಟುಗಳ ತರಬೇತಿಗೆ ಪ್ರಾಥಮಿಕ ಹಂತದಲ್ಲಿ 20 ಸಾವಿರ ತರಬೇತಿ ಶಾಲೆಗಳಿವೆ. ಇದರಲ್ಲಿ 20 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಮಾಧ್ಯಮಿಕ ಹಂತದ ಆಟೋಟ ಶಾಲೆಗಳು, ಆಟೋಟ ಕಾಲೇಜುಗಳು ಇವೆ.

ಹೊಸ ಚೀಣಾದ ಸ್ಥಾಪನೆಯ ನಂತರ ಅಥ್ಲೆಟಿಕ್ ಫೀಲ್ಡ್‌ಗಳ ಸಂಖ್ಯೆ 105 ಪಟ್ಟು ಹೆಚ್ಚಿ 1977 ರ ಅಂತ್ಯದಲ್ಲಿ 5.28 ಲಕ್ಷ ಕ್ರೀಡಾಂಗಣಗಳಿದ್ದವು. ಅಂದರೆ ಪ್ರತಿ 2000 ಚೀಣೀಯರಿಗೆ ಒಂದು ಕ್ರೀಡಾಂಗಣ.

ಪ್ರತ್ಯೇಕತಾವಾದಿ ಉಲ್ಫಾ ನಿಯಂತ್ರಣಕ್ಕೆ ಏನು ಮಾಡಿದಿರಿ?

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲವೂ ಖಾಸಗೀಕರಣಗೊಳ್ಳುತ್ತಲೇ ಹೋಗುವುದು ಸಾಮಾನ್ಯ ನಿಯಮ. ಸರಕಾರ ತನ್ನ ಜವಾಬ್ದಾರಿ ಕಳಚಿಕೊಂಡು ಜನರ ಸೇವೆ ಮಾಡಲು ದುಡ್ಡಿದ್ದ ದೊಡ್ಡವ್ಯಗಳಿಗೆ ಅವಕಾಶ ಮಾಡಿ ಕೊಡುತ್ತದೆ. ಭಾರತದಲ್ಲಿ ಇತ್ತೀಚಿಗೆ ವಿಮಾನ ಪ್ರಯಾಣ ರಂಗದಲ್ಲಿ ಕೂಡ ಖಾಸಗಿಯವರ ಪ್ರವೇಶವಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಯು.ಬಿ.ಮಲ್ಯ ಖಾಸಗಿ ಏರ್‌ಟ್ಯಾಕ್ಸಿ ಸೇವೆ ಆರಂಭಿಸಿದ್ದನ್ನು ಗಮನಿಸಬಹುದು.

ಈ ರೀತಿಯ ಖಾಸಗಿ ವೈಮಾನಿಕ ಸೇವೆಯ ವಿಚಾರ ಸಂಸತ್ತಿನಲ್ಲಿ ಪ್ರಸ್ತಾಪಕ್ಕೆ ಬಂತು. ಇಂಡಿಯನ್ ಏರ್‌ಲೈನ್ಸ್ ಅಥವಾ ವಾಯುದೂತ್ ವಿಧಿಸುವುದಕ್ಕಿಂತ ಹೆಚ್ಚು ಶುಲ್ಕ ವಿಧಿಸಲು ಖಾಸಗಿಯವರಿಗೆ ಅವಕಾಶವೇಕೆ ನೀಡಲಾಗಿದೆ ಎಂದು ರಾಜ್ಯ ಸಭೆಯಲ್ಲಿ ಸಿ.ಪಿ.ಐ(ಎಂ)ನ ದೀಪೇನ್ ಘೋಷ್ ಸೆ. 3 ರಂದು ಪ್ರಶ್ನಿಸಿದರು.

ಕಾಶ್ಮೀರದಲ್ಲಿ ಭದ್ರತಾ ಪಡೆ ಸಿಬ್ಬಂದಿಗಳ ಮೇಲೆ ಆಕ್ರಮಣ ನಡೆಯುತ್ತಿರುವುದು ಭಯೋತ್ಪಾದಕರು ಹತಾಶಗೊಂಡಿರುವುದು ಮತ್ತು ಜನರಿಂದ ಪ್ರತ್ಯೇಕಗೊಳ್ಳುತ್ತಿರುವ ಸೂಚನೆಯಾಗಿದೆ ಎಂದು ಲೋಕಸಭೆಯಲ್ಲಿ ಸೈಫುದ್ದಿನ್ ಚೌಧರಿ ಹೇಳಿದರು. ರಾಜ್ಯದಲ್ಲಿ ಉಗ್ರಗಾಮಿಗಳ ಚಟುವಟಿಕೆ ತಡೆಯುವಲ್ಲಿ ರಂಗ ವಿಫಲವಾಗಿದೆ ಎಂದು ಟೀಕಿಸಿದರು.

ಅಸ್ಸಾಮ್‌ನಲ್ಲಿ ಪ್ರತ್ಯೇಕತಾವಾದಿ ಚಳುವಳಿ ನಡೆಸುತ್ತಿರುವ ಸಂಯುಕ್ತ ಅಸ್ಸಾಮ್ ವಿಮೋಚನಾ ರಂಗ (ಉಲ್ಫಾ) ಚಟುವಟಿಕೆಗಳ ಬಗ್ಗೆ ಸಂಸತ್ತು ಕಳವಳ ವ್ಯಕ್ತಪಡಿಸಿದೆ. ಉಲ್ಫಾ ರಾಜ್ಯದಲ್ಲಿ ಪರ್ಯಾಯ ಸರಕಾರವನ್ನು ನಡೆಸುತ್ತಿದೆ 'ಯೆಂದು ಕೆಲವರು ಆತಂಕ ವ್ಯಕ್ತಪಡಿಸಿದರು. ಉಲ್ಫಾ ಚಟುವಟಿಕೆಗಳ ತಡೆಗೆ ಸರಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ಸೈಫುದ್ದಿನ್ ಚೌಧರಿ ಕೇಳಿದರು.

ಹಾಸ್ಟೆಲ್ ಒಂದರಲ್ಲಿ ಒಬ್ಬಳು ವೈದ್ಯಕೀಯ ವಿದ್ಯಾರ್ಥಿನಿ ಜತೆ ಅಸಭ್ಯವಾಗಿ ವರ್ತಿಸಿದ ರೈಲ್ವೆಮಂಡಳಿಯ ಅಧಿಕಾರಿಯನ್ನು ಪುನಃ ಈ ಹುದ್ದೆಗೆ ತೆಗೆದುಕೊಳ್ಳುವುದಿಲ್ಲ ಎಂದು ಸೆ. 4 ರಂದು ರೈಲ್ವೆ ಸಚಿವ ಜಾರ್ಜ್ ಫೆರ್ನಾಂಡಿಸ್ ಲೋಕಸಭೆಯಲ್ಲಿ ಭರವಸೆ ನೀಡಿದರು. ಸಿ.ಪಿ.ಐ(ಎಂ)ನ ಮಾಲಿನಿ ಭಟ್ಟಾಚಾರ್ಯ ಮತ್ತು ಇತರ ಪಕ್ಷಗಳ ಮಹಿಳಾ ಸದಸ್ಯರು ಈ ವಿಷಯವನ್ನು ಎತ್ತಿದ್ದರು.

ಪ್ರಸಾರ ಭಾರತಿ ಅಂಗೀಕಾರ

ಸೆ. 5 ರಂದು ರಾಜ್ಯಸಭೆ ಪ್ರಸಾರ ಭಾರತಿ ಮಸೂದೆಗೆ ಒಪ್ಪಿಗೆ ನೀಡಿತು. ಹಿಂದಿನ ವಾರ ಲೋಕಸಭೆ ಇದನ್ನು ಅಂಗೀಕರಿಸಿತ್ತು. ರಾಜ್ಯ ಸಭೆಯಲ್ಲಿ ಕಾಂಗ್ರೆಸ್(ಐ) ಈ ಸಂದರ್ಭದಲ್ಲಿ ವಿಚಿತ್ರ ವರ್ತನೆ ತೋರಿತು ಲೋಕ ಸಭೆಯಲ್ಲಿ ಮಸೂದೆಗೆ ಬೆಂಬಲ ನೀಡಿದ್ದ ಅದು ರಾಜ್ಯ ಸಭೆಯಲ್ಲಿ ತಕರಾರು ತೆಗೆಯಿತು. ಮಸೂದೆಯನ್ನು ಸದನದ ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸುವಂತೆ ಒತ್ತಾಯಿಸಿತು. ಆದರೆ ಸದನ ಅದನ್ನು ಧ್ವನಿಮತದಿಂದ ತಳ್ಳಿಹಾಕಿತು. ದೂರದರ್ಶನ ಮತ್ತು ಆಕಾಶವಾಣಿಗೆ ಸ್ವಾಯತ್ತೆ ನೀಡುವ ಈ ಮಸೂದೆಗೆ ನಮ್ಮ ಪಕ್ಷ ಬೆಂಬಲನೀಡಿತ್ತು.



ಸಂಸತ್ತಿನಲ್ಲಿ ನಮ್ಮವರು

ವಿಶ್ವ

ಸೆಪ್ಟೆಂಬರ್ 7 ರಂದು ರಾಜ್ಯ ಸಭೆ ಮತ್ತು ಲೋಕಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಹಿನ್ನೋಟ

ಮುಂಗಾರು ಅಧಿವೇಶನದ ಮೊದಲ ದಿನ ಪ್ರಧಾನಿ ವಿ.ಪಿ.ಸಿಂಗ್ ಸಹಮತ ರೂಪಿಸದೆ ಪ್ರಕಟಿಸಿದ ಮಂಡಲ್ ಆಯೋಗದ ಶಿಫಾರಸುಗಳ ಜಾರಿಯ ಹೇಳಿಕೆ ದೇಶದಲ್ಲಿ ಮೀಸಲಾತಿ ಪರ ವಿರೋಧದ ಅಲೆ ಎಬ್ಬಿಸಿದೆ.

ಮಹಿಳೆಯರ ರಕ್ಷಣೆಗೆ ಸಂಬಂಧಿಸಿದಂಥ ಮಹಿಳಾ ಆಯೋಗ ರಚನೆ ಕುರಿತ ಮಸೂದೆಯನ್ನು ಸಂಸತ್ತು ಈ ಅಧಿವೇಶನದಲ್ಲಿ ಅಂಗೀಕರಿಸಿತು.

ಐತಿಹಾಸಿಕವೆಂದು ಪರಿಗಣಿಸಲಾದ ಆಕಾಶವಾಣಿ ಮತ್ತು ದೂರದರ್ಶನಕ್ಕೆ ಸ್ವಾಯತ್ತೆ ನೀಡುವ ಪ್ರಮುಖ ಮಸೂದೆ ಕೂಡ ಅಂಗೀಕಾರವಾಯಿತು.

ಜನತೆ ಯಾವ ನಿರೀಕ್ಷೆಯಿಟ್ಟು ಹೊಸದಾದ ಒಂದು ಸರಕಾರವನ್ನು ಆರಿಸಿತೋ. ಆ ನಿರೀಕ್ಷೆಗೆ ಸರಕಾರ ಪ್ರತಿಸ್ಪಂದಿಸದಿರುವುದು ಸಂಸತ್ತಿನ ಈ ಅಧಿವೇಶನದಲ್ಲಿ ವ್ಯಕ್ತವಾಯಿತು. ಮುಖ್ಯವಾಗಿ ಬೆಲೆಯೇರಿಕೆ ನಿಯಂತ್ರಿಸುವಲ್ಲಿ ಸರಕಾರದ ವೈಫಲ್ಯ ದಾಳಿಗೆ ಒಳಗಾಯಿತು.

ಇದು ಒಂದೆಡೆಯಾದರೆ: ತಾವು ಅಧಿಕಾರದಲ್ಲಿದ್ದಾಗ ಜನರಿಗೆ ಏನನ್ನೂ ಒಳ್ಳೆದನ್ನು ಮಾಡದ ಕಾಂಗ್ರೆಸವರು ತಾವೇ ಬಡವರ ಹಿತರಕ್ಷಕರು ಎಂಬಂತೆ ವರ್ತಿಸತೊಡಗಿ ಅವಾಸ್ತವಿಕ ಅಲ್ಲದೆ ಕೆಲವು ಮಸೂದೆಗಳ ಮೇಲೆ ಚರ್ಚೆಗೆ ರಾತ್ರಿ ಹೊತ್ತು ಕುಳಿತುಕೊಳ್ಳಲು ನಿರಾಕರಿಸುವ ಮೂಲಕ ಅದು ಅಸಹಕಾರವನ್ನೂ ಅಲಕ್ಷ್ಯವನ್ನು ತೋರಿತು.


ಸಿ.ಪಿ.ಐ(ಎಂ) ಸದಸ್ಯರು ಅನೇಕ ಸಂದರ್ಭಗಳಲ್ಲಿ ಸರಕಾರವನ್ನು ಟೀಕಿಸುವುದರ ಜತೆಗೆ ಅದು ಅಧಿಕಾರ ದಲ್ಲಿದ್ದು ಕಾಂಗ್ರೆ ಮತ್ತೆ ಬಾರದಂತೆ ಬಗ್ಗೆ ಎಚ್ಚರಿಕೆಯ ನಿಲುವನ್ನು ತಾಳಿತು.

ರಾಜ್ಯದ ಮಹಿಳೆಯರನ್ನು ಸಂಘಟಿಸಲು ಅವರಿಗಾಗಿ ಹೋರಾಡಲು ಶಕ್ತವಾದ ಸಂಘಟನೆ ರೂಪಿಸಬೇಕು.



ಸಮ್ಮೇಳನದಲ್ಲಿ ಪ್ರತಿನಿಧಿಗಳು

ಕರ್ನಾಟಕದ 12 ಜಿಲ್ಲೆಗಳಿಂದ ಬಂದ 135 ಪ್ರತಿನಿಧಿಗಳು ಭಾಗವಹಿಸಿದ್ದ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರ್ನಾಟಕ ಘಟಕದ ಎರಡನೇ ರಾಜ್ಯ ಸಮ್ಮೇಳನ ಬೆಂಗಳೂರಿನಲ್ಲಿ 8 ಹಾಗೂ 9 ರಂದು ನಡೆಯಿತು



ಹರಿಣಿ ಕಕ್ಕೇರಿ ಮಾತನಾಡುತ್ತಿದ್ದಾ... ಪಕ್ಕ...

ಸಮ್ಮೇಳನದಲ್ಲಿ ಭಾಗವಹಿಸಿದ 135 ಪ್ರತಿನಿಧಿಗಳಲ್ಲಿ 62ಪ್ರತಿನಿಧಿಗಳ ವಯಸ್ಸು 30 ವರ್ಷ ಅಥವಾ ಅದಕ್ಕಿಂತ ಕಡಿಮೆ. ಇದು ನಂತರ ಎ.ಐ.ಡಿ.ಡಬ್ಲ್ಯು.ಎ. ಕಾರ್ಯಾಧ್ಯಕ್ಷೆ ಅಹಲ್ಯಾ ರಂಗ್ನೇಕರ್‌ರವರು ಉದ್ಧರಿಸಿದಂತೆ ಕರ್ನಾಟಕದಲ್ಲಿ ಮಹಿಳೆಯರ ಪ್ರಜಾಪ್ರಭುತ್ವ ಚಳುವಳಿಯ ಭವಿಷ್ಯದ ಬಗ್ಗೆ ನಿರೀಕ್ಷೆ ಮೂಡಿಸುವ ಸಂಗತಿ.

ಅನಕ್ಷರಸ್ಥರಿಂದ ಹಿಡಿದು ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣ ಪಡೆದವರು, ಕೃಷಿಕೂಲಿಗಾರರು, ಅಂಗನವಾಡಿ ಕಾರ್ಯಕರ್ತೆಯರು, ಸಣ್ಣವ್ಯಾಪಾರಿಗಳು, ಗೃಹಿಣಿಯರು, ಉಪಾಧ್ಯಾಯಿನಿಯರು, ಕೈಗಾರಿಕಾ ಕಾರ್ಮಿಕರು, ಕಛೇರಿ ನೌಕರರು, ವಕೀಲರು, ಪತ್ರಕರ್ತೆಯರು, ವಿದ್ಯಾರ್ಥಿಗಳು ಹಾಗೂ ನಿರುದ್ಯೋಗಿಗಳು ಹೀಗೆ ರಾಜ್ಯದ ಎಲ್ಲಾ ಜನವಿಭಾಗಗಳಿಂದ ಬಂದ ಪ್ರತಿನಿಧಿಗಳು ಭಾಗವಹಿಸಿದ್ದ, ಒಂದು ನಿಜವಾದ ಅರ್ಥದಲ್ಲಿ ಹೇಗೆ ಇತರ ಮಹಿಳಾ ಸಂಘ, ಸಂಘಟನೆಗಳಿಗಿಂತ ಭಿನ್ನವಾದ ಸಂಘಟನೆ ಎಂಬುದನ್ನು ತೋರಿಸಿಕೊಟ್ಟ ಸಮ್ಮೇಳನ ಇದಾಗಿತ್ತು.

ಮಹಿಳಾ ಹಕ್ಕುಗಳಿಗಾಗಿ ದಿಟ್ಟತನದ ಹೋರಾಟಗಳಲ್ಲಿ ಭಾಗವಹಿಸಿದವರು, ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಸಮಾಜದ ಇನ್ನೊಂದು ಭಾಗವಾದ ಪುರುಷರೊಂದಿಗೆ ಹೆಗಲಿಗೆ ಹೆಗಲುಕೊಟ್ಟು ಚಳುವಳಿಗಳಲ್ಲಿ

ದೇಶದ ಪರಿಸ್ಥಿತಿಯನ್ನು ವಿಮರ್ಶಿಸುತ್ತಾ ಮಹಿಳೆಯರಿಗೆ ಸಂಬಂಧಪಟ್ಟಂತೆ ಹಾಗೂ ಒಟ್ಟು ಪ್ರಜಾಪ್ರಭುತ್ವ ಆಂದೋಲನಕ್ಕೆ ಸಂಬಂಧಪಟ್ಟಂತೆ ಹಿಂದಿನ ಸರ್ಕಾರ ಹಾಗೂ ಈಗಿನ ರಾಷ್ಟ್ರೀಯ ರಂಗ ಸರ್ಕಾರದಡಿ ಆಗಿರುವ ಅನುಭವವನ್ನು ವಿವರಿಸುವ ವರದಿ, ಈಗಿನ ಸರಕಾರದ ರಾಷ್ಟ್ರೀಯ ಮಹಿಳಾ ಆಯೋಗ ರಚನೆ ಮುಂತಾದ ಸಕಾರಾತ್ಮಕ ಕ್ರಮಗಳನ್ನು, ಎಡ ನೇತೃತ್ವದ ರಾಜ್ಯಗಳಾದ ಪಶ್ಚಿಮ ಬಂಗಾಳ, ಕೇರಳದ ಭಿನ್ನವಾದ ಹುರುಪು ತುಂಬುವ ಅನುಭವವನ್ನು ಸ್ವಾಗತಿಸಿತು.

ರಾಜ್ಯದಲ್ಲಿ ಮಹಿಳೆಯರ ಪರಿಸ್ಥಿತಿ, ಮಹಿಳಾ ಆಂದೋಲನದ ಪರಿಸ್ಥಿತಿಯನ್ನು ಪರಿಶೀಲಿಸುತ್ತಾ ವರದಿ ರಾಜ್ಯದಲ್ಲಿ ದುರ್ಬಲವಾಗಿರುವ ಮಹಿಳಾ ಸಂಘಟನೆಗಳ ಒಂದು ಪರಾಮರ್ಶೆಯನ್ನು ನಡೆಸಿತು. ಫೆಬ್ರುವರಿ 1988 ರಲ್ಲಿ ರಾಜ್ಯ ಸಮಾವೇಶ ನಡೆದ ರಾಜ್ಯ ಸಂಘಟನಾ ಸಮಿತಿ ರಚನೆಗೊಂಡ ನಂತರ ಸಂಘಟನೆಯ ಚಟುವಟಿಕೆಗಳು ರಾಜ್ಯದ ಹಲವೆಡೆ ನಡೆಸಿದ ವಿವಿಧ ಹೋರಾಟಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ಕರ್ನಾಟಕದ ಮಹಿಳೆಯರನ್ನು ಸಂಘಟಿಸುವ ಅವರ ಸಮಸ್ಯೆಗಳ ಪರಿಹಾರಕ್ಕೆ ಕಂಕಣ ಬದ್ಧವಾಗಿ ಹೋರಾಡುವ ಹೊಣೆ ನೆರವೇರಿಸಲು ಶಕ್ತವಾದ ಸಂಘಟನೆಯನ್ನು ರೂಪಿಸಲು

ಗಳಲ್ಲಿ ಮಹಿಳೆಯರ ವಿರುದ್ಧ ಪಕ್ಷಪಾತ, ಖಂಡಿಸಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಹಿಳೆಯರಿಗೆ ಈಗಾಗಲೇ ಇರುವ ಹೆರಿಗೆ ರಜಾ ಸೌಲಭ್ಯವನ್ನು ಕಿತ್ತುಕೊಂಡಿರುವುದನ್ನು ಖಂಡಿಸಿ, ಎಲ್.ಐ.ಸಿ. ನೇಮಕಾತಿಯ ಸಂದರ್ಭದಲ್ಲಿ ಇಡೀ ಮಹಿಳಾಸಮೂಹಕ್ಕೆ ಅವಮಾನ ಮಾಡುವ ರೀತಿಯ ನೀತಿ ಅನುಸರಿಸಿರುವುದನ್ನು ಖಂಡಿಸಿ, ದೇವದಾಸಿ ಪದ್ಧತಿ ಖಂಡಿಸಿ, ಬಸ್‌ಗಳಲ್ಲಿ ಪ್ರತ್ಯೇಕ ಸ್ಥಳಾವಕಾಶ

ಬೆಲೆ ಏರಿಕೆ ಸಮಸ್ಯೆಯತ್ತ ಸರಕಾರ

"ಮಹಿಳೆಯರು ಕೇವಲ ಮಹಿಳೆಯರಿಗಷ್ಟೆ ಸೀಮಿತವಾದ ಸಮಸ್ಯೆಗಳಷ್ಟೇ ಅಲ್ಲದೆ ಸಾಮಾಜಿಕ ಸಮಸ್ಯೆಗಳಿಗೂ ದನಿ ಎತ್ತಿದಾಗ ಮತ್ತು ಹೋರಾಟ ಮಾಡಿದಾಗ ಸರ್ವಾಂಗ ಅಭಿವೃದ್ಧಿ ಸಾಧ್ಯ".

ಕರ್ನಾಟಕದಲ್ಲಿ ಮಹಿಳಾ ಚಳುವಳಿಯನ್ನು ಬೆಳೆಸಲು ಕರೆ ನೀಡುತ್ತಾ ಹೀಗೆ



ಸಮ್ಮೇಳನದ ವೇದಿಕೆಯ ಮೇಲೆ

ಯಾಗಲು ಸಾಧ್ಯ ಎಂದರು. ಸ್ವಾತಂತ್ರ್ಯದ ನಂತರ ಹಲವಾರು ಶಾಸನಗಳು ರೂಪುಗೊಂಡಿದ್ದರೂ ಯಾವುದೂ ಸಮರ್ಪಕವಾಗಿ ಮಹಿಳೆಯರ ರಕ್ಷಣೆಗಾಗಿ ಇಲ್ಲ ಎಂದರು.

ಇಡೀ ದುಡಿಯುವ ಜನ ವಿಭಾಗಗಳನ್ನು ವಿಶೇಷವಾಗಿ ಮಹಿಳೆಯರನ್ನು ತೀವ್ರವಾಗಿ ಬಾಧಿಸುತ್ತಿರುವ ಬೆಲೆಏರಿಕೆಯ ಸಮಸ್ಯೆಯತ್ತ ವಿ.ಪಿ.ಸಿಂಗ್ ಸರ್ಕಾರ ಗಮನ ಕೊಡದಿದ್ದರೆ ಈ ಸರ್ಕಾರಕ್ಕೂ ರಾಜೀವ ಗಾಂಧಿ ಸರ್ಕಾರಕ್ಕಾದ ಗತಿಯೇ ಬರಬಹುದು ಎಂದು ಎಚ್ಚರಿಸಿದವರು ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ಅಖಿಲ ಭಾರತ ಕಾರ್ಯಾಧ್ಯಕ್ಷೆ ಹಾಗೂ ಹಲವು ಹೋರಾಟಗಳ ದೀರ್ಘ ಅನುಭವ ಪಡೆದ ಹಿರಿಯ ಮಹಿಳಾ ನಾಯಕಿ ಅಹಲ್ಯಾ ರಂಗ್ನೇಕರ್. ಎ.ಐ.ಡಿ.ಡಬ್ಲ್ಯು.ಎ. ಬಗ್ಗೆ ಮಾತನಾಡುತ್ತಾ ಎಲ್ಲಾ ವಿಭಾಗಗಳ

ಧನ್ವಂತರ್ ಕೌರ್ ಸಭಾಂಗಣ"

ಇತ್ತೀಚೆಗೆ ಖಾಲಿಸ್ತಾನೀ ಉಗ್ರಗಾಮಿಗಳ ಬೆದರಿಕೆಗಳಿಗೆ ಸೊಪ್ಪು ಹಾಕದೆ ದೇಶದ ಐಕ್ಯತೆಯ ರಕ್ಷಣೆಗಾಗಿ ಜೀವವನ್ನೇ ಮುಡಿಪಿಟ್ಟ ಧನ್ವಂತರಿ ಕೌರ್ ಎ.ಐ.ಡಿ.ಡಬ್ಲ್ಯು.ಎ. ಬೆಳೆಸಿದ ಆಂದೋಲನದ ಒಬ್ಬ ನಾಯಕಿ ಎಂಬ ಹೆಮ್ಮೆ ಈ ಮಹಿಳಾ ಸಂಘಟನೆಯದ್ದು. ಪಂಜಾಬಿನ ಪ್ರಜಾಪ್ರಭುತ್ವ ಮಹಿಳಾ ಚಳುವಳಿಯ ಈ ಧೀರ ನಾಯಕಿಯ ಹೆಸರನ್ನು ಸಮ್ಮೇಳನದ ಆವರಣಕ್ಕೆ ಇಟ್ಟು ಕರ್ನಾಟಕದ ಜನವಾದಿ ಮಹಿಳಾ ಸಂಘಟನೆ ತನ್ನ ಶ್ರದ್ಧಾಂಜಲಿ ಅರ್ಪಿಸಿತಲ್ಲದೆ ತನ್ನ ಧೀರ ಪರಂಪರೆಯ ನೆನಪು ಮಾಡಿಕೊಂಡಿತು.

ನಿರೀಕ್ಷೆ ಮೂಡಿಸಿದ ಸಮ್ಮೇಳನದ ಪ್ರತಿನಿಧಿಗಳು

ಭಾಗವಹಿಸಿ ಬಂಧನಕ್ಕೊಳಗಾದವರು, ಪ್ರಜಾಪ್ರಭುತ್ವದ ಅಂಶವಾದ ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಜನರ ಪ್ರತಿನಿಧಿಗಳಾಗಿ ಆಯ್ಕೆಯಾದವರು ಹೀಗೆ ಹೋರಾಟದ ಪರಂಪರೆಯ ಮಹಿಳೆಯರು ಭಾಗವಹಿಸಿದರು.

ಕನ್ನಡ, ತುಳು, ಉರ್ದು, ತಮಿಳು, ತೆಲುಗು, ಮರಾಠಿ ಹಾಗೂ ಇಂಗ್ಲೀಷ್ ಭಾಷೆ ಮಾತನಾಡುವ ಬೇರೆ ಬೇರೆ ಮತ ಧರ್ಮಗಳಿಗೆ ಸೇರಿದ್ದ ಮಹಿಳೆಯರು ಭಾಗವಹಿಸಿದ ಈ ಸಮ್ಮೇಳನದ ಒಂದು ನಿಜವಾದ ಪ್ರಜಾಸತ್ತಾತ್ಮಕ ಆಂದೋಲನದಂತೆ ಭಾಷೆ, ಧರ್ಮದ ಹೆಸರಿನಲ್ಲಿ ಜನರ ಒಗ್ಗಟ್ಟು ಮುರಿಯುವ ಶಕ್ತಿಗಳಿಗೆ ಸವಾಲೆಂಬಂತೆ ನಡೆಯಿತು.

ರಾಜ್ಯದಲ್ಲಿ ಮಹಿಳೆಯರ ಪ್ರಜಾಪ್ರಭುತ್ವ ಚಳುವಳಿ ಕಟ್ಟಲೆಂದು ರಚಿತವಾಗಿದ್ದ ರಾಜ್ಯ ಸಂಘಟನಾ ಸಭೆಯ ಸಂಚಾಲಕಿ ಹರಿಣಿ ಕಕ್ಕೇರಿಯವರು ಮಂಡಿಸಿದ ವರದಿ ಮಹಿಳೆಯರ ಶೋಷಣೆಯ ಚಾರಿತ್ರಿಕ ಮೂಲವನ್ನು, ಮಹಿಳಾ ಆಂದೋಲನದ ವಿವಿಧ ಮಜಲುಗಳನ್ನು ಸ್ಥೂಲವಾಗಿ ಪರಿಶೀಲಿಸುತ್ತಾ ಪ್ರಸ್ತುತ ಅಂತರ್ರಾಷ್ಟ್ರೀಯ ರಂಗ ಹಾಗೂ ಅದರಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಹೇಳುತ್ತಾ ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದದ ಹಿನ್ನಡೆಯಿಂದಾಗಿ ಎಲ್ಲರಿಗಿಂತ ಹೆಚ್ಚು ತೊಂದರೆ ಅನುಭವಿಸುತ್ತಿರುವವರು ಮಹಿಳೆಯರು, ಸಮಾಜವಾದ ಅವರಿಗೆ ನೀಡಿದ ಸವಲತ್ತುಗಳನ್ನು ಕಿತ್ತುಕೊಳ್ಳಲಾಗುತ್ತಿದೆ ಎಂಬುದನ್ನು ವಿವರಿಸಿತು.

ಆಗತ್ಯವಾದ ಕ್ರಮಗಳನ್ನು ಸೂಚಿಸಿತು.

47 ಮಂದಿ ಪ್ರತಿನಿಧಿಗಳು ಈ ವರದಿಯ ಮೇಲಿನ ಚರ್ಚೆಯಲ್ಲಿ ಪಾಲುಗೊಂಡರು. ಮಹಿಳೆಯರು ಅನುಭವಿಸುತ್ತಿರುವ ಕಷ್ಟ ಕಾರ್ಪಣ್ಯಗಳನ್ನು ಉದಾಹರಣೆಗಳೊಂದಿಗೆ ವಿವರಿಸಿದ ಪ್ರತಿನಿಧಿಗಳು ಅವುಗಳ ಪರಿಹಾರಕ್ಕೆ ಪ್ರಬಲವಾದ ಮಹಿಳಾ ಸಂಘಟನೆಯನ್ನು ಬೆಳೆಸಬೇಕಾದ ಆವಶ್ಯಕತೆಯ ಬಗ್ಗೆ ಒತ್ತುಕೊಟ್ಟು ಮಾತನಾಡಿದರು.

ಮಹಿಳೆಯರ ವಿಶೇಷ ಸಮಸ್ಯೆಗಳಿಂದ ಅಂಗನವಾಡಿ ಶಿಕ್ಷಕಿಯರ ಸಮಸ್ಯೆಗೆ ಸೂಕ್ತ ಪರಿಹಾರ, ಮಹಿಳೆಯರಿಗೆ ಜಾಯಿಂಟ್ ಪಟ್ಟಾ, ಒತ್ತಾಯಿಸಿ, ಹಲವು ಉದ್ದಿಮೆ

ಮುಂತಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅದೇ ರೀತಿ ಇಡೀ ಪ್ರಜಾಪ್ರಭುತ್ವ ಜನ ವಿಭಾಗಗಳನ್ನೆಲ್ಲಾ ತಟ್ಟಿರುವ ಸಾಲಮನ್ನಾ, ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಮೇಲೆ ತೀವ್ರ ಧಾಳಿ, ಕೋಮು ಪರಿಸ್ಥಿತಿ, ಪಂಜಾಬ್, ಕಾಶ್ಮೀರದ ದಳ್ಳುರಿ, ಸರಕಾರದ ಆರ್ಥಿಕ, ಕೈಗಾರಿಕಾ ನೀತಿ ವಿರೋಧಿಸಿ ಸಮ್ಮೇಳನ ನಿರ್ಣಯಗಳನ್ನು ಅಂಗೀಕರಿಸಿತು. ಒಟ್ಟು 16 ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಹೊಸ ಪದಾಧಿಕಾರಿಗಳು

ಇನ್ನು ಮುಂದೆ ಕರ್ನಾಟಕದಲ್ಲಿ 'ಜನವಾದಿ ಮಹಿಳಾ ಸಂಘಟನೆ' ಎಂದು ಕರೆಸಿಕೊಳ್ಳುವ ಎ.ಐ.ಡಿ.ಡಬ್ಲ್ಯು.ಎ. ಕರ್ನಾಟಕ ಘಟಕದ ಎರಡನೇ ರಾಜ್ಯ ಸಮ್ಮೇಳನ ಸಂಘಟನೆಯ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಿಕೊಂಡು ಹೋಗಲು 25 ಜನರ ರಾಜ್ಯ ಸಮಿತಿಯನ್ನು ಆಯ್ಕೆಮಾಡಿತು. ಪದಾಧಿಕಾರಿಗಳ ಹೆಸರುಗಳು ಹೀಗಿವೆ.

ಅಧ್ಯಕ್ಷರು:	ಹರಿಣಿ ಕಕ್ಕೇರಿ, ರಾಯಚೂರು
ಉಪಾಧ್ಯಕ್ಷರು:	ಎಂ.ಎಂ.ರಾಜಮ್ಮ, ಬೆಂಗಳೂರು
	ಎಸ್.ಆರ್. ಲೀಲಾವತಿ, ಕುಂದಾಪುರ
ಪ್ರಧಾನ ಕಾರ್ಯದರ್ಶಿ:	ಕೆ.ಎಸ್. ವಿಮಲ, ಬೆಂಗಳೂರು
ಸಹಕಾರ್ಯದರ್ಶಿಗಳು:	ಫ್ಲೋರಾ., ಕೆ.ಜಿ.ಎಫ್.
	ಕೆ. ಶಾಂತಕುಮಾರಿ, ಬೆಂಗಳೂರು

ಕಲ್ಕತ್ತಾದಲ್ಲಿ ನವಂಬರ್ ತಿಂಗಳಲ್ಲಿ ನಡೆಯಲಿರುವ ಅಖಿಲ ಭಾರತ ಸಮ್ಮೇಳನಕ್ಕೆ ಏಳು ಪದಾಧಿಕಾರಿಗಳೂ ಸೇರಿದಂತೆ ಒಟ್ಟು ಹತ್ತು ಪ್ರತಿನಿಧಿಗಳನ್ನು ಸಮ್ಮೇಳನ ಆಯ್ಕೆ ಮಾಡಿದೆ.

ಹೇಳಿದವರು ಎ.ಐ.ಡಿ.ಡಬ್ಲ್ಯು.ಎ. ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಸಂಸತ್ ಸದಸ್ಯೆ ಸುಶೀಲಾ ಗೋಪಾಲನ್ ಅವರು ಎರಡನೇ ಕರ್ನಾಟಕ ರಾಜ್ಯಸಮ್ಮೇಳನವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಅವರು ಮಹಿಳೆಯರು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಕುರಿತು ವಿಶ್ಲೇಷಿಸಿದರು.

ಸಮರ್ಪಕವಾದ ಭೂಮಿ ಹಂಚಿಕೆಯಾದಾಗ ಮಾತ್ರ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಾಧ್ಯ. ಶೇ 74 ರಷ್ಟು ಜನ ಹಳ್ಳಿಯಲ್ಲಿ ವಾಸಿಸುವ ಈ ದೇಶದಲ್ಲಿ ಭೂ ಹಂಚಿಕೆಯಾಗದೆ ಗ್ರಾಮೀಣ ಅಭಿವೃದ್ಧಿಯೂ ಅಸಾಧ್ಯ. ಭೂಸುಧಾರಣೆ ಸರಿಯಾಗಿ ಜ್ಯಾರಿಯಾಗಿರುವ ಪಶ್ಚಿಮ ಬಂಗಾಳದಲ್ಲಿ ಸಣ್ಣ ಉದ್ದಿಮೆಗಳು ಸಾಕಷ್ಟು ಬೆಳೆದು ಮಹಿಳೆಯರಿಗೆ ಉದ್ಯೋಗ ಸಿಗುವಂತಾಗಿದೆ ಎನ್ನುತ್ತಾ ಕಾಂ. ಸುಶೀಲಾ ಗೋಪಾಲನ್ ಮಹಿಳೆಯರ ಸಮಾನತೆಯ ಹೋರಾಟ ಹಾಗೂ ಎಲ್ಲಾ ದುಡಿಯುವ, ಪ್ರಜಾಪ್ರಭುತ್ವ ಜನವಿಭಾಗಗಳ ಹೋರಾಟದ ಹೇಗೆ ಪರಸ್ಪರ ಬೆಸೆದುಕೊಂಡಿವೆ ಎಂದು ವಿವರಿಸಿದರು. ಎಲ್ಲರಿಗೂ ಕೆಲಸವಿದ್ದಾಗ ಮಾತ್ರ ಅತ್ಯಾಧುನಿಕ ತಾಂತ್ರಿಕತೆ ಬರಲು ಸಾಧ್ಯ.

ರಾಷ್ಟ್ರೀಯ ಮಹಿಳಾ ಆಯೋಗದ ದೀರ್ಘಕಾಲದ ಬೇಡಿಕೆಗೆ ರಾಷ್ಟ್ರೀಯ ರಂಗ ಸರ್ಕಾರ ಒಪ್ಪಿಕೊಂಡಿದೆ. ಈ ಆಯೋಗಕ್ಕೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ ಎ.ಐ.ಡಿ.ಡಬ್ಲ್ಯು.ಎ. ಸರಕಾರವನ್ನು ಒತ್ತಾಯಿಸಲಿದೆ ಎಂದ ಸುಶೀಲಾ ಗೋಪಾಲನ್ ಮಹಿಳೆಯರ ಸಹಕಾರ ಪಡೆದರೆ ಮಾತ್ರವೇ ಈ ಹೆಜ್ಜೆ ಯಶಸ್ವಿ

ಮಹಿಳೆಯನ್ನುಒಳಗೊಂಡ 40ಲಕ್ಷದಷ್ಟು ಸದಸ್ಯ ಹೊಂದಿರುವ ಈ ಸಂಘಟನೆ ಜನಸಾಮಾನ್ಯರ ಸಮಸ್ಯೆಗಳನ್ನು ಎತ್ತಿ ಹೋರಾಟ ನಡೆಸುತ್ತಿದೆ ಎಂದರು.

ದಿನ ಬೆಳಗಾದರೆ ಬದಲಾಗುವ ಮುಖ್ಯ ಮಂತ್ರಿಗಳು ಕುಟುಂಬ ಯೋಜನೆಯನ್ನು ಜನರಿಗೆ ಬೋಧಿಸುವ ಸ್ವತಃ 9-10 ಮಕ್ಕಳನ್ನು ಹೊಂದಿರುವ ಮುಖ್ಯ ಮಂತ್ರಿಗಳ ಬಗ್ಗೆ ಪ್ರಸ್ತಾಪಿಸಿದ ಅವರು ಇಂತಹವರಿಂದ ದೇಶಕ್ಕೆ ಏನಾಗಲು ಸಾಧ್ಯ ಎಂದರು.

ಉದ್ಯೋಗದಲ್ಲಿ 30-40 ಶೇಕಡಾ ಮೀಸಲಾತಿ ಪಡೆಯಲು ಮಹಿಳೆಯರು ಸಮರ್ಥರಾಗಬೇಕು. "ಅಂತರಾಷ್ಟ್ರೀಯ ಹೆಣ್ಣು ಮಕ್ಕಳ ವರ್ಷ"ವನ್ನು ಪ್ರಸ್ತಾಪಿಸುತ್ತಾ 'ಗರ್ಭದಿಂದಲೇ ಹೊರ ಬರಲಾಗದ



ಚಿತ್ರದಲ್ಲಿರುವವರು ಸುಶೀಲಾ ಗೋಪಾಲನ್. ಕಲ್ಪಾ ರಂಗ್ನೇಕರ್.

...ಹರಿಸಲೇಬೇಕು

ಹೆಣ್ಣು ಮಗುವಿನ ದುಸ್ಥಿತಿಯ ಬಗ್ಗೆ ಖೇದ ವ್ಯಕ್ತಪಡಿಸಿದರು. 21ನೇ ಶತಮಾನ ಆರಂಭವಾಗುತ್ತಿದ್ದರೂ 'ಸತಿ'ಯಾಗುತ್ತಿರುವ ಪರಿಸ್ಥಿತಿ ಬಗ್ಗೆ ವ್ಯಸನ ವ್ಯಕ್ತಪಡಿಸುತ್ತಾ ಇಂತಹ ಅಮಾನವೀಯ ಕೃತ್ಯಗಳನ್ನು ಬೆಂಬಲಿಸುವ ಒಬ್ಬ ಮಹಿಳಾ ಲೋಕಸಭಾ ಸಧಾ ಸದಸ್ಯೆ ಸಂಸ್ಕೃತಿಯ ಹೆಸರಿನಲ್ಲಿ ಕಂದಾಚಾರ ಬಿತ್ತುತ್ತಿದ್ದಾರೆ ಎಂದರು. ಈ ರೀತಿ ಕೋಮುಭಾವನೆ ಬಿತ್ತಿ ದೇಶ ವಿಭಜಿಸುವ ಶಕ್ತಿಗಳಿಗೆ ನೆರವಾಗುತ್ತಿರುವವರ ಬಗ್ಗೆ ಎಚ್ಚರಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಮೊದಲಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷೆ ಹಾಗೂ ಖ್ಯಾತ ಕನ್ನಡ ಲೇಖಕಿ ಡಾ॥ ಅನುಪಮಾ ನಿರಂಜನರವರು ಸ್ವಾಗತ ಭಾಷಣಮಾಡುತ್ತಾ ಮಹಿಳಾ ಸಂಘಟನೆಯು ಮುಂದೆ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಹೇಳಿದರು.

ಧ್ವಜಾರೋಹಣ ಮಾಡಿ ಕಾರ್ಯಕ್ರಮ ಆರಂಭಿಸಿದ್ದ ರಾಜ್ಯ ಸಂಚಾಲಕಿ ಹರಿಣಿ ಕಕ್ಕೇರಿಯವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದೇಶದಲ್ಲಿ ವ್ಯಾಪಕವಾಗಿರುವ ಸಮಸ್ಯೆಗಳ ವಿರುದ್ಧ ಹೋರಾಡುವ ಜವಾಬ್ದಾರಿ ಸಂಘಟನೆಯ ಎದುರಿದೆ ಎಂದರು.

ಸಮ್ಮೇಳನಕ್ಕೆ ಶುಭಕೋರಿದ ಸಿ.ಐ.ಟಿ.ಯು. ಅಖಿಲಭಾರತ ಉಪಾಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಜನರಲ್ಲಿ ಬೇರೂರಿರುವ ಪಾಳೆಯಗಾರಿ ಮನೋಭಾವ ಹೋಗುವವರೆಗೂ ಮಹಿಳೆಯರ ಮೇಲಿನ ತಿರಸ್ಕಾರ ಭಾವನೆ ಹೋಗುವುದಿಲ್ಲ ಮಹಿಳೆಯರು ರಾಜಕೀಯ ಜಾಗೃತಿ ಪಡೆದು ಒಂದು ಪ್ರಬಲವಾದ ಸಂಘಟನೆಯನ್ನು ಚಳುವಳಿಯನ್ನು ಬೆಳೆಸಲಿ ಎಂದು ಹಾರೈಸಿದರು.

ಇತರ ಸಾಮೂಹಿಕ ಸಂಘಟನೆಗಳ ಮುಖಂಡರು, ಪ್ರಾಂತ ರೈತ ಸಂಘದ ಪಿ. ರಾಮಚಂದ್ರರಾವ್, ಕೃಷಿಕೂಲಿಗಾರ ಸಂಘದ ಜಿ.ಎನ್.ನಾಗರಾಜ್, ಡಿ.ವೈ.ಎಫ್.ಐ.ನ ಗಂಗಾಧರ ಕುಷ್ಟಗಿ, ಎಸ್.ಎಫ್.ಐ.ನ ಗುರುಶಾಂತ್ ಸಮ್ಮೇಳನಕ್ಕೆ ಶುಭಕೋರಿದರು.

ಎಲ್.ಐ.ಸಿ., ವಿಜಯಾ ಬ್ಯಾಂಕ್, ಯುಕೋ ಬ್ಯಾಂಕ್, ಪಿಯರ್ ಲಸ್ ನೌಕರರ ಮುಖಂಡರೂ ಶುಭ ಕೋರಿ ಮಾತನಾಡಿದರು.. ಬಂಡಾಯ ಸಾಹಿತ್ಯ ಸಂಘಟನೆ ಹಾಗೂ 'ಸಮುದಾಯ'ದ ಮುಖಂಡರೂ ಶುಭ ಕೋರಿದರು,

ಸ್ವಾಗತ ಸಮಿತಿಯ ಕಾರ್ಯದರ್ಶಿ ವಿಜಯಾರವರ ಸ್ವಾಗತದೊಂದಿಗೆ ಆರಂಭವಾದ ಉದ್ಘಾಟನಾ ಸಭೆ ಸ್ವಾಗತ ಸಮಿತಿಯ ಉಪಾಧ್ಯಕ್ಷೆ ಲಲಿತಾ ಶೆಟ್ಟಿಯವರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡು ಸಮ್ಮೇಳನದ ಫಲಪ್ರದ, ಗಂಭೀರ ಕಲಾಪಗಳಿಗೆ ನಾಂದಿ ಹಾಡಿತು.

ಕೊನೆಯಲ್ಲಿ ಸಮುದಾಯ ತಂಡದವರಿಂದ 'ಭೋಪಾಲ್' ನಾಟಕಪ್ರದರ್ಶನವಿತ್ತು.

'ಏನು ಜಾದು ಮಾಡಿದಿರಯ್ಯಾ ನೀವು ಕಮ್ಯುನಿಸ್ಟರು

ಕಮ್ಯೂನಿಸ್ಟ್ ಆಂದೋಲನ ಸೆಳೆದ ಬಗೆ

ಸಿ.ನಂಜುಂಡಪ್ಪ

(ಕಳೆದ ಸಂಚಿಕೆಯಿಂದ)

ಬಹುಶ: ಅಂದಿನಿಂದ ನನಗೆ ಪೋಲೀಸು ಕಾಟ ಪ್ರಾರಂಭವಾಗಿರಬಹುದೆಂದು ಕಾಣುತ್ತದೆ.

ಬೀದರ್‌ನಲ್ಲಿದ್ದಾಗ ನಾನು ಒಮ್ಮೆ ಬೆಂಗಳೂರಿಗೆ ಬಂದಾಗ ಕಮ್ಯುನಿಸ್ಟ್ ಪಕ್ಷಗಳ ಜಾಗತಿಕ ಸಮ್ಮೇಳನಗಳ (1957-60) ಘೋಷಣೆ ಮತ್ತು ಹೇಳಿಕೆಗಳ ಕನ್ನಡ ಪುಸ್ತಕವು ಸಿಕ್ಕಿತು. ಅದನ್ನು ಓದಿ ನನಗೆ ಸ್ಫೂರ್ತಿ ಬಂದಿತು.

ನಾನು ಬೀದರಿನಲ್ಲಿರುವಾಗ ಭಾರತ ಸರ್ಕಾರದ ದೂರ ಸಂಪರ್ಕ ಇಲಾಖೆಯಲ್ಲಿ ನನಗೆ ಒಂದು ಕೆಲಸ ಸಿಕ್ಕಿ 1961ರ ಜೂನ್ ತಿಂಗಳಲ್ಲಿ ಹುಬ್ಬಳ್ಳಿಗೆ ಹೋದೆ. ಹುಬ್ಬಳ್ಳಿಯಲ್ಲಿ ಕೆಲಸಕ್ಕೆ ಸೇರುವುದರ ಜೊತೆಗೇನೇ ಜಿ.ಜಿ. ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಎಂ.ಕಾಂ. ತರಗತಿಗೆ ಸೇರಿದೆ. 1961ರಲ್ಲಿ ಮಾಸ್ಕೋದಿಂದ ಬರುತ್ತಿದ್ದ 'ನ್ಯೂ ಟೈಮ್ಸ್' ಮತ್ತು 'ಇಂಟರ್ ನ್ಯಾಷನಲ್ ಅಫೇರ್ಸ್' ಪತ್ರಿಕೆಗಳಿಗೆ ಚಂದಾದಾರನಾದೆ. ಇವುಗಳ ಜೊತೆಗೆ 'ಲಿಂಕ್' ವಾರಪತ್ರಿಕೆ ಮತ್ತು 'ಶಂಕರ್ಸ್ ವೀಕ್ಲಿ' ವಾರಪತ್ರಿಕೆಗಳನ್ನು ಓದಲಾರಂಭಿಸಿದೆ. ಬೆಂಗಳೂರಿಗೆ ಹೋದಾಗಲೆಲ್ಲಾ 'ಜನಶಕ್ತಿ', 'ನ್ಯೂ ಏಜ್' ಪತ್ರಿಕೆಗಳನ್ನು ತೆಗೆದುಕೊಳ್ಳುತ್ತಿದ್ದೆ. ನನ್ನ ಗೆಳೆಯ ಗಂಗಣ್ಣನವರು ಧಾರವಾಡದಲ್ಲಿ ಕರ್ನಾಟಕ ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಬೆಂಗಳೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಪರಿಚಯವಾಗಿ ಸ್ನೇಹವಾಗಿ ಬೆಳೆದಿದ್ದಿತು. ಪ್ರತಿವಾರವೂ ನಾವು ಭೇಟಿಯಾಗುತ್ತಿದ್ದೆವು. ಸಮಾಜವಾದಿ ದೇಶಗಳ ಬೆಳವಣಿಗೆಗಳು, ಅಂತರರಾಷ್ಟ್ರೀಯ ಪರಿಸ್ಥಿತಿ, ದೇಶದ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿಗಳನ್ನು ಚರ್ಚಿಸುತ್ತಿದ್ದೆವು. ನನ್ನ ಬಗ್ಗೆ ಮತ್ತು ನನ್ನ ವಿಚಾರಧಾರೆಯ ಬಗ್ಗೆ ಅವರಿಗೆ ಸಹಾನುಭೂತಿಯಿದ್ದಿತು(ಅವರು 1986ರ ಆಗಸ್ಟ್‌ನಲ್ಲಿ ನಿಧನರಾದರು).

1961ರಲ್ಲಿ ನಾನು ಕೆಲಸಕ್ಕೆ ಸೇರಿದ ಕೂಡಲೇ 1960 ರ ಮುಷ್ಕರದ ನಂತರ ಕ್ರಿಯಾ ಶೂನ್ಯವಾಗಿದ್ದ ದೂರ ಸಂಪರ್ಕ ನೌಕರರ ಸಂಘವನ್ನು ಪುನರುಜ್ಜೀವನಗೊಳಿಸಲು ಕೆಲಸ ಮಾಡಿ ಯಶಸ್ವಿಯಾದೆ. ಜತೆಗೆ ಕಮ್ಯುನಿಸ್ಟ್ ಎಂಬ ಬಿರುದೂ ಬಂದಿತು.

1962 ರಲ್ಲಿ ಮೂರನೆಯ ಸಾರ್ವತ್ರಿಕ ಚುನಾವಣೆಯು ನಡೆಯಲಿದ್ದಿತು. ಅದಕ್ಕಾಗಿ 1961 ರಲ್ಲಿ ರಾಜಕೀಯ ಪಕ್ಷಗಳು ಸಿದ್ಧತೆಗಳನ್ನು ನಡೆಸುತ್ತಿದ್ದುವು. 1961ರ ಅಕ್ಟೋಬರಿನ 'ಜನಶಕ್ತಿ'ಯಲ್ಲಿ ನಡುವಿನ ಪುಟಗಳಲ್ಲಿ ಒಂದು ದೊಡ್ಡ ತಲೆಬರಹ ಸುದ್ದಿ ಪ್ರಕಟವಾಗಿತ್ತು. ಬಿಹಾರದಲ್ಲಿ ಒಂದು ಕಡೆ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಚಾರವನ್ನು ಉದ್ಘಾಟನೆ ಮಾಡುತ್ತಾ ಸಿಪಿಐ ನ ಪ್ರಧಾನ ಕಾರ್ಯದರ್ಶಿ ಅಜಯ ಘೋಷ್ 'ಕಮ್ಯುನಿಸ್ಟ್ ಪಕ್ಷಕ್ಕೆ ಮತ ನೀಡಿ, ಕಮ್ಯುನಿಸ್ಟ್ ಪಕ್ಷವು ಸ್ಪರ್ಧಿಸದಿದ್ದ ಕಡೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಎಂದು ಕರೆ ಕೊಟ್ಟಿದ್ದನ್ನು ಓದಿ ನನಗೆ ನಖಶಿಖಾಂತ ಸಿಟ್ಟು ಬಂದಿತು. ಸಿಪಿಐ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರಿಂದ ಭಾರತದಲ್ಲಿ ಸಮಾಜವಾದವನ್ನು ತರುವುದು ಸಾಧ್ಯವಾಗುವುದಿಲ್ಲ-ಸಿಪಿಐಯ ಈ ಧೋರಣೆ ನನಗೆ ಎಳ್ಳಷ್ಟೂ ಸರಿಬರುವುದಿಲ್ಲ ಎಂದು ಹೇಳಿದೆ. ನನ್ನ ಅಬಿಪ್ರಾಯವನ್ನು ಗಂಗಣ್ಣನವರು ಅನುಮೋದಿಸಿದರು.

1961ರ ಕೊನೆಯ ವೇಳೆಗೆ ದೂರಸಂಪರ್ಕ ನೌಕರರ ಸಂಘವನ್ನು ಕ್ರಿಯಾಶೀಲಗೊಳಿಸುವ ಕೆಲಸ ಮಾಡುವಾಗ ನಾನು ಒಂದು ಪಾಠವನ್ನು ಕಲಿತೆ. ಒಬ್ಬ ವ್ಯಕ್ತಿ ಎಷ್ಟೇ ಸಮರ್ಥನಾದರೂ, ಪ್ರತಿಭಾವಂತನಾದರೂ ಜನರನ್ನು ಒಂದುಗೂಡಿಸುವ ಕೆಲಸ ಮಾಡುವಾಗ ಒಬ್ಬನೇ ಸಾಧನೆ ಮಾಡುವುದು ಕಷ್ಟ. ಅದಕ್ಕೆ ಕಾರ್ಯಕರ್ತರ, ಮುಖಂಡರ ಒಂದು ತಂಡವೇ ಬೇಕು. ಮಾರ್ಕ್ಸ್‌ವಾದ- ಲೆನಿನ್‌ವಾದವನ್ನು ಅಧ್ಯಯನಮಾಡಿ ಸ್ವೀಕರಿಸಿದ ವ್ಯಕ್ತಿ ಇತರರಿಗೆ ಅದನ್ನು ಬೋಧಿಸಿ ತರಬೇತುಗೊಳಿಸುವ ಕೆಲಸ ಮಾಡಿ ಕಾರ್ಯಕರ್ತರ ತಂಡವನ್ನು ಬೆಳೆಸಬೇಕು. ಈ ಪಾಠವನ್ನು ಕಲಿತ ನಂತರ ನನ್ನ ಸಹೋದ್ಯೋಗಿಗಳ ನಡುವೆ ಅಂತಹವರನ್ನು ಗುರುತಿಸಲು ಪ್ರಯತ್ನಿಸಿದೆ.

1961ರ ಕೊನೆಯ ವೇಳೆಗೆ ನನಗೆ ಅತಿಯಾದ ಸಮಯದ ಅಭಾವವುಂಟಾಯಿತು. ನನ್ನ ಕನ್ನಡ ಸಾಹಿತ್ಯಾಭ್ಯಾಸ ನಿಂತು ಹೋಗುವ ಸ್ಥಿತಿಗೆ ಬಂದಿತು. ನನ್ನ ಎಂ. ಕಾಂ. ವ್ಯಾಸಂಗಕ್ಕೂ ಸಮಯವಿಲ್ಲದ ಸ್ಥಿತಿ ಬಂದಿತು.

1962ರಲ್ಲಿ ಭಾರತ-ಚೀನ ಗಡಿ ಘರ್ಷಣೆಗೆ ಸಂಬಂಧಿಸಿ ಸಹಸ್ರಾರು ಸಿಪಿಐ ಸದಸ್ಯರ ಬಂಧನವಾಯಿತು. ಸಿಪಿಐಯಲ್ಲಿ ಚೀನದ ಪರವಿರುವವರ ಒಂದು ಪಟ್ಟಿಯನ್ನು ಸಿದ್ಧ ಪಡಿಸಿ ಸಿಪಿಐ ಅಧ್ಯಕ್ಷ ಎಸ್.ಎ. ಡಾಂಗೆ ಭಾರತ ಸರ್ಕಾರದ ಗೃಹ ಇಲಾಖೆಗೆ ಕೊಟ್ಟರೆಂದೂ, ಆ ಪ್ರಕಾರ ಬಂಧನಗಳಾದುವೆಂದೂ ಇಂಡೋನೇಷ್ಯಾದ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಡಿ.ಎನ್. ಐಡಿಟ್‌ಕೊಟ್ಟ ಹೇಳಿಕೆಯೊಂದನ್ನು ಪತ್ರಿಕೆಗಳಲ್ಲಿ ಓದಿದೆ. ಇಂತಹ ವ್ಯಕ್ತಿ ಅಧ್ಯಕ್ಷನಾಗಿರುವ ಪಕ್ಷಕ್ಕೆ ನಾನು ಸದಸ್ಯನಾಗಿ ಸೇರುವುದಾದರೂ ಹೇಗೆ? ಎಂಬ ಪ್ರಶ್ನೆ ನನ್ನ ಮುಂದ ಬಂದಿತು.

1962ರ ಕೊನೆಯ ವೇಳೆಗೆ ಪ್ರಗತಿಶೀಲ ವಿಚಾರಗಳಲ್ಲಿ ಆಸಕ್ತಿ ಇರುವ ಇಬ್ಬರು ಸಹೋದ್ಯೋಗಿಗಳನ್ನು ಗುರುತಿಸಿ ಅವರಿಗೆ ಗಮನ ಕೊಡಲಾರಂಭಿಸಿದೆ.

1962ರ ಡಿಸೆಂಬರ್ ತಿಂಗಳಲ್ಲಿ ತಿರುವನಂತಪುರದಲ್ಲಿ ದೂರ ಸಂಪರ್ಕ ನೌಕರರ ಅಖಿಲ ಭಾರತ ಸಮ್ಮೇಳನ ನಡೆಯಲಿದ್ದು ಆ ಸಮ್ಮೇಳನಕ್ಕೆ ಹುಬ್ಬಳ್ಳಿ ವಿಭಾಗದಿಂದ ಮೂವರು ಪ್ರತಿನಿಧಿಗಳನ್ನು ಆರಿಸಬೇಕಾಗಿದ್ದಿತು. ನಾನು ಎಷ್ಟೇ ಒಲ್ಲೆನೆಂದರೂ ನನ್ನನ್ನು ಒಬ್ಬ ಪ್ರತಿನಿಧಿಯನ್ನಾಗಿ ಆರಿಸಲಾಯಿತು. ನಾವು ಮೂವರೂ ರೈಲಿನಲ್ಲಿ ಹುಬ್ಬಳ್ಳಿಯಿಂದ ಹೊರಟು ಬೆಂಗಳೂರು ಮಾರ್ಗವಾಗಿ ಎರ್ನಾಕುಲಂ ತಲಪಿದೆವು. ಅಲ್ಲಿಂದ ತಿರುವನಂತಪುರಕ್ಕೆ ಹೊರಡುವ ರೈಲು ಕೆಲವು ಗಂಟೆಗಳ ನಂತರ ಹೊರಡುವುದಿದ್ದುದರಿಂದ ರೈಲು ನಿಲ್ದಾಣದ ಹೊರಗಿದ್ದ ಒಂದು ವಿಶ್ರಾಂತಿ ಗೃಹಕ್ಕೆ ಹೋದೆವು. ಅಂದಿನ ಕಾರ್ಮಿಕ ಚಳುವಳಿಯ ಬಗ್ಗೆ ಮಾತನಾಡುತ್ತಿದ್ದಾಗ ಅಲ್ಲಿಯ ಕಾರ್ಮಿಕ ಮುಖಂಡರು ಮಾತನ್ನು ರಾಜಕೀಯದತ್ತ ತಿರುಗಿಸಿ ತಮಿಳುನಾಡಿನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸಿಪಿಐ ಮತ್ತು ಕಾಂಗ್ರೆಸ್ ಪಕ್ಷಗಳ ಹೊಂದಾಣಿಕೆಯನ್ನು ಪ್ರಸ್ತಾಪಿಸಿದರು. ನಾನು ಕೂಡಲೇ ಅದನ್ನು ವಿರೋಧಿಸಿದೆ. ಅವರು ನನ್ನನ್ನು ಗುರುತಿಸಿದರು ಮಾತ್ರವಲ್ಲದೆ ಭಾರತ- ಚೀನ ಗಡಿವಿವಾದದ ವಿಚಾರದಲ್ಲಿ ಸಿಪಿಐಯಲ್ಲಿ ಭಿನ್ನಾಭಿಪ್ರಾಯ, ಡಾಂಗೆ ಮತ್ತು ಸಂಗಡಿಗರ ತಪ್ಪು ನಿಲುಮೆ ಮುಂತಾದ ವಿಚಾರಗಳನ್ನು ಮಾತನಾಡಿದರು.

ತಿರುವನಂತಪುರದಲ್ಲಿ ನಡೆದ ಸಮ್ಮೇಳನಕ್ಕೆ ಸಂಘದ ಅಧ್ಯಕ್ಷರಾದ ಹೋಮಿ ದಾಜಿಯವರು ಬರಲಿಲ್ಲ. ಸ್ವತಂತ್ರ ಭಾರತದಲ್ಲಿ ಮೊದಲಬಾರಿಗೆ ನಡೆದ ಕೇಂದ್ರ ಸರ್ಕಾರದ ನೌಕರರ ಅನಿರ್ದಿಷ್ಟಾವಧಿಯ ಮುಷ್ಕರವನ್ನು ಜವಹರಲಾಲ ನೆಹರು ನಾಯಕತ್ವದ ಕಾಂಗ್ರೆಸ್ ಸರ್ಕಾರವು ಕ್ರೂರ ದಬ್ಬಾಳಿಕೆಯನ್ನು ನಡೆಸಿ ದಮನ ಮಾಡಿದ ಒಂದೂವರೆ ವರ್ಷದ ನಂತರ ನಡೆದ ಈ ಸಮ್ಮೇಳನದಲ್ಲಿ ಒಂದು ಸೈದ್ಧಾಂತಿಕ ಕಾಳಗವೇ ನಡೆಯಿತು. ಪಶ್ಚಿಮ ಬಂಗಾಲದ ವಲಯ ಕಾರ್ಯದರ್ಶಿ ದಿವಂಗತ ಕೆ.ಜಿ.ಬೋಸ್ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಓ.ಪಿ. ಗುಪ್ತರ ನಡುವೆ ಪರೋಕ್ಷವಾಗಿ ಈ ವಿಚಾರಗಳ ಮೇಲೆ ವಾದ ನಡೆಯಿತು. ಕೇಂದ್ರ ಸರ್ಕಾರದ ದಮನಕಾರಿ ನೀತಿಯ ವಿರುದ್ಧ ಸದ್ಯಬಲಕ್ಕೆ ತಿಲಾಂಜಲಿಕೊಟ್ಟು ಹೋರಾಡಬೇಕೆಂಬುದು ಒಂದು ವಾದ. ಭಾರತದ ಮೇಲೆ ಚೀನವು ಆಕ್ರಮಣ ಮಾಡಿದ ಹಿನ್ನೆಲೆಯಲ್ಲಿ ನೆಹರು ಸರ್ಕಾರದ ಕೈಗಳನ್ನು ಬಲಪಡಿಸಬೇಕೆಂಬುದು ಇನ್ನೊಂದು ವಿವಾದವಾಗಿದ್ದಿತು. ಕೊನೆಯಲ್ಲಿ ನೂತನ ಪದಾಧಿಕಾರಿಗಳ ಚುನಾವಣೆಯ ಸಮಯ ಬಂದಾಗ ಓ.ಪಿ.ಗುಪ್ತ ತಾವು ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿಯುವುದಿಲ್ಲವೆಂದರು. ಮುಖ್ಯ ಪ್ರತಿನಿಧಿಗಳು ಒಂದು ಇಡೀ ರಾತ್ರಿ ಪ್ರಯತ್ನ ಮಾಡಿ ರಾಜಿಯಾಗಿ ಓ.ಪಿ. ಗುಪ್ತ ಪ್ರಧಾನ ಕಾರ್ಯದರ್ಶಿಯಾಗಿ, ಅವರ ಒತ್ತಾಯದ ಮೇರೆಗೆ ಸಮ್ಮೇಳನಕ್ಕೆ ಬಂದಿಲ್ಲದ ಮತ್ತು ನಾನು ನೋಡಿರದ ಹೋಮಿ ದಾಜಿ ಅಧ್ಯಕ್ಷರಾಗಿ ಮುಂದುವರಿಯುವುದು ಎಂದಾಯಿತು. ಯಾಕೆಂದರೆ ಕೆ.ಜಿ.ಬೋಸ್ ಮತ್ತು ಸಂಗಡಿಗರಿಗೆ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳ ನಡುವೆ ಬಹುಮತವಿರಲಿಲ್ಲ. ನಿರ್ಣಾಯಕ ಅಂಶವೆಂದರೆ, ವರ್ಗ ಹೋರಾಟಕ್ಕೆ ವಿರುದ್ಧವಾಗಿದ್ದವರ ಕೈಗೆ ಸಂಘಟನೆಯ ಮುಖಂಡತ್ವ ಸಿಕ್ಕಿದುದು.

ಬೆಂಗಳೂರಿನಲ್ಲಿ 1960ರಲ್ಲಿ ನನ್ನ ವಿದ್ಯಾಭ್ಯಾಸ ಮುಗಿದ ನಂತರ ನೇರವಾಗಿ ಕಮ್ಯುನಿಸ್ಟ್ ಪಕ್ಷದ ಕೆಲಸವನ್ನು ಪ್ರಾರಂಭಿಸಲು ಪ್ರಬಲ ವಿರೋಧ ಬಂದಿತೆಂದು ಹೇಳಿದೆನಷ್ಟೆ. ಆಗ ನನ್ನ ಉದ್ದೇಶ ಸಾಧನೆಗೆ ಕೆಲಸ ಮಾಡಲು ಪರಿಣಾಮಕಾರಿ ರಂಗಗಳು ಯಾವುವು ಎಂದು ವಿಚಾರ ಮಾಡಿ ನಾಲ್ಕು ರಂಗಗಳನ್ನು ಆರಿಸಿಕೊಂಡೆ. ಕ್ರಮ ಪ್ರಕಾರ ಅವು ಸೈನ್ಯ, ಶಿಕ್ಷಣರಂಗ, ಪ್ರಸಾರ ಮಾಧ್ಯಮ ಮತ್ತು ರಂಗಭೂಮಿ ಆಗಿದ್ದವು ಬೆಂಗಳೂರು ನಗರ ಸಭೆಯಲ್ಲಿ ಕೆಲಸ ಮಾಡುತ್ತಿರುವಾಗಲೇ ನೌಕಾ ಸೈನ್ಯದಲ್ಲಿ 'ಷಾರ್ಟ್ ಸರ್ವೀಸ್ ಕಮಿಷನ್' ಹುದ್ದೆಗೆ ಅರ್ಜಿ ಹಾಕಿದೆ. ಆದರೆ ನೌಕಾದಳದವರು ನನ್ನನ್ನು ಆರಿಸಲಿಲ್ಲ. ಪ್ರೌಢಶಾಲೆಯಿಂದ ಹಿಡಿದು, ಕಾಲೇಜು ಮತ್ತು ಹಾಸ್ಟೆಲುಗಳಲ್ಲಿ ವಾರ್ಷಿಕೋತ್ಸವಗಳ ಸಂದರ್ಭಗಳಲ್ಲಿ ನಾನು ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದೆ. ನನಗೆ ಒಬ್ಬ ಸಾಮಾನ್ಯ ಮನುಷ್ಯನಿಗೆ ಬರುವುದಕ್ಕಿಂತಲೂ ಹೆಚ್ಚು ಬೆವರು ಬರುತ್ತಿದ್ದರಿಂದ 'ಮೇಕಪ್' ನಿಲ್ಲುತ್ತಿರಲಿಲ್ಲ. ಈ ಕಾರಣದಿಂದಾಗಿ ರಂಗಭೂಮಿಯ ವಿಚಾರವನ್ನು ನಾನು ಕೈ ಬಿಡಬೇಕಾಯಿತು.

ಇನ್ನು ಉಳಿದಿದ್ದುದು ಶಿಕ್ಷಣರಂಗ ಮತ್ತು ಪ್ರಸಾರ ಮಾಧ್ಯಮ. ಆದರೆ ದೂರಸಂಪರ್ಕ ಸೇವೆಯಲ್ಲಿ ಕಾರ್ಮಿಕ ಸಂಘಟನೆಗೆ ಕೈ ಹಾಕಿದ ನಂತರ ಅದು ನನ್ನನ್ನು ಎಳೆದುಕೊಂಡು ಹೋಗುತ್ತಿರುವಂತೆ ನನಗೆ ಅನ್ನಿಸಲಾರಂಭಿಸಿತು. ನಾನು ಶಾಖೆ, ವಿಭಾಗ, ವಲಯಮಟ್ಟಗಳಲ್ಲಿ ಯಾವುದೇ ಹುದ್ದೆಯನ್ನು ವಹಿಸಿಕೊಳ್ಳಲು ಒಪ್ಪದಿದ್ದರೂ ಸಂಘಟನೆಯ ಕೆಲಸದ ದೊಡ್ಡ ಭಾರ ನನ್ನ ಮೇಲೆ ಬಿದ್ದಿತು.

1963ರ ಆಗಸ್ಟಿನಲ್ಲಿ ಸಿಪಿಐ ಜನತೆಯ ಬೇಡಿಕೆಗಳಿಗಾಗಿ ಸಂಸತ್ತಿಗೆ 'ಗ್ರೇಟ್ ಮಾರ್ಚ್' ನಡೆಸಿತು. ಅಲ್ಲಿ ಡಾಂಗೆ, ಎ.ಕೆ. ಗೋಪಾಲನ್‌ರವರಿಗೆ ಭಾಷಣ ಮಾಡಲು ಬಿಡದಿದ್ದುದು ತಿಳಿದು ಬಂದಿತು.

ಅದೇ ತಿಂಗಳಲ್ಲಿ ದೂರಸಂಪರ್ಕ ನೌಕರರ ಸಂಘದ ವಲಯ ಸಮ್ಮೇಳನ ದಾವಣಗೆರೆಯಲ್ಲಿ ನಡೆಯಿತು. ಅಲ್ಲಿ ನನಗೆ ಈ ಸಂಘಟನೆಯ ಬೆಂಗಳೂರು ವಿಭಾಗದ ಮುಖಂಡರ ಪರಿಚಯವಾಯಿತು. ರಾಜ್ಯದ ಇತರ ವಿಭಾಗಗಳ ಮುಖಂಡರ ಪರಿಚಯ ಆ ಮೊದಲೇ ಆಗಿದ್ದಿತು. ಈ ಸಮ್ಮೇಳನದಲ್ಲಿ ವಲಯ ಕಾರ್ಯದರ್ಶಿ ಬದಲಾದರು. ಮುಂದಿನ ವರ್ಷ ವಲಯ ಸಮ್ಮೇಳನವನ್ನು ಹುಬ್ಬಳ್ಳಿಯಲ್ಲಿ ನಡೆಸುವುದು ಎಂದಾಯಿತು.

ಸಿಪಿಎಸ್‌ಯು ಕೇಂದ್ರ ಸಮಿತಿಯು ಚೀನದ ಕಮ್ಯುನಿಸ್ಟ್ ಪಕ್ಷಕ್ಕೆ, ಚೀನದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸಿಪಿಎಸ್‌ಯು ಗೆ ಬರೆದ ಪತ್ರಗಳು ಪ್ರಕಟವಾದವು. ಬೇರೆ ಬೇರೆ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಹೇಳಿಕೆಗಳನ್ನು 'ದ ಗ್ರೇಟ್ ಡಿಬೇಟ್' ಮಾಲಿಕೆಯ ಸರಣಿಯಲ್ಲಿ ಎರಡು ಕಿರುಹೊತ್ತಿಗೆಗಳನ್ನಾಗಿ ಪ್ರಕಟಿಸಿತು. ಇವುಗಳ ಪೈಕಿ 'ಎ ಮಿರರ್ ಫಾರ್ ರಿವಿಜನಿಸ್ಟ್'(-ಪರಿಷ್ಕರಣವಾದಿಗಳಿಗೊಂದು ಕನ್ನಡಿ) ಎಂಬ ಚೀನದ 'ಪೀಪಲ್ಸ್ ಡೇಲಿ'ಯ ಲೇಖನದಲ್ಲಿ ಎಸ್.ಎ.ಡಾಂಗೆ ಮತ್ತು ಸಂಗಡಿಗರ ಪರಿಷ್ಕರಣವಾದಿ ನೀತಿಯ ಕಟು ಟೀಕೆ ಇದ್ದಿತು. ಇವುಗಳನ್ನೆಲ್ಲಾ ಓದಿ ನನಗೆ ವಿಪರೀತ ಚಿಂತೆಯಾಯಿತು. ನಿದ್ದೆ ಬರುವುದು ಕಡಿಮೆಯಾಯಿತು. ಸೋವಿಯತ್ ಒಕ್ಕೂಟ ಮತ್ತು ಚೀನಾ ಸೇರಿದಂತೆ ಎಲ್ಲಾ ಸಮಾಜವಾದಿ ದೇಶಗಳೂ ಸಾಮ್ರಾಜ್ಯಶಾಹಿಗಳ ವಿರುದ್ಧವಾಗಿ ಒಂದಾಗಿ ಹೋರಾಡಬೇಕು. ಸೋವಿಯತ್ ಒಕ್ಕೂಟ, ಚೀನ ಮತ್ತು ಭಾರತದ ಜನತೆ ಒಂದಾಗಿ ವಿರೋಧಿಸಬೇಕು. ಆದರೆ ಸಿಪಿಎಸ್‌ಯು ಸಿಪಿಸಿಗಳ ನಡುವೆ ಅಭಿಪ್ರಾಯಭೇದ, ಭಾರತ, ಚೀನಗಳ ನಡುವೆ ಗಡಿವಿವಾದ, ಸಿಪಿಐ ನಾಯಕತ್ವ ಕಾಂಗ್ರೆಸ್‌ಪರ, ಹೀಗಿರುವಾಗ ನನ್ನ ಗುರಿಸಾಧನೆಯಲ್ಲಿ ಪ್ರಗತಿಯು ಹೇಗೆ? ಆಗ ನನಗೆ 23-24 ವರ್ಷ ವಯಸ್ಸು. ಆಗ ಇವುಗಳ ಚಿಂತೆಯಿಂದಾಗಿ ಅನೇಕ ದಿವಸಗಳು ನಿದ್ರೆ ಬರಲಿಲ್ಲ ಮಾತ್ರವಲ್ಲ ರಾತ್ರಿ ಈ ಪರಿಸ್ಥಿತಿಯಲ್ಲಿ ನಾನು ಪರಿಣಾಮಕಾರಿಯಾಗಿ ಏನನ್ನೂ ಮಾಡುವ ಸ್ಥಿತಿಯಲ್ಲಿ ಇಲ್ಲವಲ್ಲಾ ಎಂಬ ಅಸಹಾಯಕತೆಯ ಭಾವನೆ ಬರುತ್ತಿತ್ತು. ಒಮ್ಮೊಮ್ಮೆ ಅಳು ಸಹ ಬರುತ್ತಿತ್ತು.

1963ರಲ್ಲಿ ನಾನು ಎಂ.ಕಾಂ. ಪರೀಕ್ಷೆಗೆ ಕುಳಿತುಕೊಳ್ಳಲು ಆಗಲಿಲ್ಲ.

1964ರಲ್ಲಿ ಬಹಳ ಮುಖ್ಯ ಘಟನೆಗಳು ಸಂಭವಿಸಿದವು. ವರ್ಷದ ಪ್ರಾರಂಭದಿಂದಲೇ ಹುಬ್ಬಳ್ಳಿಯಲ್ಲಿ ನಡೆಯಬೇಕಿದ್ದ ಸಮ್ಮೇಳನದ ಸ್ವಾಗತ ಸಮಿತಿಯ ಕೆಲಸ , ಸ್ಮರಣ ಸಂಚಿಕೆಯನ್ನು ಮುದ್ರಿಸುವ ಕೆಲಸಗಳನ್ನು ಮಾಡಬೇಕಾಯಿತು. ಇತರರೂ ತಮ್ಮ ಕೆಲಸಗಳನ್ನು ಮಾಡುವಂತೆ ನೋಡಿಕೊಳ್ಳಬೇಕಾಯಿತು. ಸಮ್ಮೇಳನವು ಯಶಸ್ವಿಯೂ ಆಯಿತು. ನನ್ನ ಸಂಪರ್ಕವೂ ವ್ಯಾಪಕವಾಗಿ ಬೆಳೆಯಿತು. ಈ ವೇಳೆಗೆ ನನ್ನ ಸಹೋದ್ಯೋಗಿಗಳಲ್ಲಿ ಇಬ್ಬರು ನನ್ನಂತೆ ನಮ್ಮ ಕಣ್ಣೋಟದಿಂದ ಕೆಲಸ ಮಾಡಲು ಬೆಳೆದು ಬಂದರು. ಇದು ನನ್ನ ಎರಡೂವರೆ ವರ್ಷಗಳ ದುಡಿಮೆಯ ಫಲ.

ಸಂಘದ ಕೇಂದ್ರದ ಕರೆಯ ಮೇರೆಗೆ ನನ್ನ ಸಹೋದ್ಯೋಗಿಗಳನ್ನು ಚಳುವಳಿಗಿಳಿಸಲು ಸಾಧ್ಯವಾಯಿತು. 30,40ರ ಸಂಖ್ಯೆಯಲ್ಲಿ ಪ್ರಾರಂಭವಾದ ಮೆರವಣಿಗೆಗಳು ಕಾಲಕಳೆದಂತೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕ ನೌಕರರು ಪಾಲ್ಗೊಳ್ಳುವ ಚಳುವಳಿಯಲ್ಲಿ ಬೆಳೆದವು. ಮುಂದೆ 1966ರಿಂದ 1968ರವರೆಗೆ ಹುಬ್ಬಳ್ಳಿಯಲ್ಲಿರುವ ರೈಲ್ವೆ ವರ್ಕ್‌ಶಾಪಿನ ಸಹಸ್ರಾರು ಕಾರ್ಮಿಕರೂ ಸೇರಿದಂತೆ ಕೇಂದ್ರಸರ್ಕಾರದಸಹಸ್ರಾರು ಕಾರ್ಮಿಕ-ನೌಕರರು ನಡೆಸಿದ ಬೃಹತ್ ಮೆರವಣಿಗೆಗಳು , ಪ್ರದರ್ಶನಗಳು , ಬಹಿರಂಗ ಸಭೆಗಳು 1964 ರಲ್ಲಿ ಪ್ರಾರಂಭವಾದ ಕಾಮರ್ಸ್ ಕಾಲೇಜು ಸಮೀಪದಿಂದ ರೈಲು ನಿಲ್ದಾಣದವರೆಗೆ, ದುರ್ಗದ ಬಯಲಿನವರೆಗೆ ನಡೆಯುತ್ತಿದ್ದ ಚಿಕ್ಕ ಮೆರವಣಿಗೆಗಳು ನಾಂದಿಯಾದುವು. ಅಂಚೆ ಮತ್ತು ಆರ್.ಎಮ್.ಎಸ್.ನಲ್ಲಿದ್ದ ನೌಕರರ ಸಂಘಗಳೂ 1964ರ ವೇಳೆಗೆ ಕ್ರಿಯಾಶೀಲವಾಗಿದ್ದುವು.

ಮುಂದುವರಿಯುವುದು

ಪ್ರತ್ಯೇಕತಾವಾದಿಗಳಿಗೆ ಕಾಶ್ಮೀರಿಗಳ ಸವಾಲು

ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕರು ಮತ್ತು ಕೋಮು ವಾದಿಗಳ ಚಟುವಟಿಕೆ ಅವ್ಯಾಹತವಾಗಿ ಸಾಗಿದೆ ಆದರೂ ರಾಜ್ಯದ ಜನರ ಎಚ್ಚರ ಹಾಗೂ ಪರಂಪರಾಗತ ಕೋಮುಭ್ರಾತೃತ್ವ ಹಾಗೂ ಸೌಹಾರ್ದತೆಯನ್ನು ಎತ್ತಿ ಹಿಡಿಯುವ ಧೃಢ ನಿರ್ಧಾರದಿಂದಾಗಿ ಪ್ರತ್ಯೇಕತಾವಾದಿಗಳು ತಮ್ಮ ಉದ್ದೇಶದಲ್ಲಿ ಸಫಲರಾಗಿಲ್ಲ.

ಸೆಪ್ಟೆಂಬರ್ ಒಂದರಂದು ಜಮ್ಮುನಲ್ಲಿ ನಡೆದ ಕೋಮು ಸೌಹಾರ್ದ ಸಮಾವೇಶ ಜಮ್ಮು ಮತ್ತು ಕಾಶ್ಮೀರ ಜನತೆಯ ಧೃಢ ವಿಶ್ವಾಸದ ಪ್ರತೀಕದಂತಿತ್ತು. ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ. ರಾಜ್ಯ ಘಟಕಗಳು ಈ ಸಮಾವೇಶ ಏರ್ಪಡಿಸಿದ್ದರೂ ಜನರ ಅಭೂತಪೂರ್ವ ಪ್ರತಿಕ್ರಿಯೆ ದೊರಕಿತು. ವಸ್ತುಶಃ ಇದು ಸರ್ವಪಕ್ಷ ಸಮಾವೇಶವಾದಂತಾಯಿತು. ಯಾಕೆಂದರೆ ನ್ಯಾಷನಲ್ ಕಾನ್ಫರೆನ್ಸ್, ಜನತಾದಳ ಮಾತ್ರವಲ್ಲದೆ ಕಾಂಗ್ರೆಸ್ (ಐ) ನಾಯಕರು ಕೂಡ ಇದರಲ್ಲಿ ಮಾತನಾಡಿದರು.

ಶೇರ್-ಎ-ಕಾಶ್ಮೀರ್ ಸಭಾಭವನದಲ್ಲಿ ನಡೆದ ಸಮಾವೇಶದಲ್ಲಿ 1000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಭಾರತೀಯ ಜನತಾಪಕ್ಷ ಈ ಸಮಾವೇಶವನ್ನು ಹಾಳುಗೆಡವಲು ಭಾರಿ ಪ್ರಯತ್ನವನ್ನೇ ನಡೆಸಿದ್ದು, ಸಮಾವೇಶದ ಮಹತ್ವ ಹಾಗೂ ಯಶಸ್ಸಿನ ಸೂಚಕವಾಗಿದೆ. ಈ ಸಮಾವೇಶದ ದಿನದಂದೇ ಬಿ.ಜೆ.ಪಿ. ಕೂಡ ಒಂದು ಸಭೆಯನ್ನು ಏರ್ಪಡಿಸಿ ಅಟಲ್ ಬಿಹಾರಿ ವಾಜಪೇಯಿಯವರನ್ನೇ ಭಾಷಣಕಾರರಾಗಿ ಕರೆಸಿತ್ತು. ಕಮ್ಯೂನಿಸ್ಟರು ಏರ್ಪಡಿಸಿರುವ ಸಮಾವೇಶದಲ್ಲಿ ಭಾಗವಹಿಸದಂತೆ ಅದು ಜನರನ್ನು, ಅದರಲ್ಲೂ ವಿಶೇಷವಾಗಿ ಕಣಿವೆಯ ವಲಸಿಗರನ್ನು, ಬೆದರಿಸಿತು. ಆದರೂ ಸಮಾವೇಶದಲ್ಲಿ ಬಹಳಷ್ಟು ವಲಸೆಬಂದ ಜನರು ಪಾಲ್ಗೊಂಡರು.

ವಿವಿಧ ಪಕ್ಷಗಳ ಸ್ಥಳೀಯ ನಾಯಕರಲ್ಲದೆ ಸಿ.ಪಿ.ಐ. (ಎಂ) ಸಂಸತ್ ಸದಸ್ಯೆ ಸರಳಾ ಮಹೇಶ್ವರಿ ಮತ್ತು ಸಿ.ಪಿ.ಐ. ಕೇಂದ್ರ ಸಮಿತಿ ನಾಯಕ ಎಂ. ಫರೂಕಿ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಖ್ಯಾತ ಉರ್ದು ಸಾಹಿತಿ ಹಾಗೂ ಶಿಕ್ಷಣ ತಜ್ಞ ಜಗನ್ನಾಥ 'ಆಜಾದ್' ಅಧ್ಯಕ್ಷತೆ ವಹಿಸಿದ್ದರು. ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಮಹಮದ್ ಯೂಸುಫ್ ತರಿಗಾಮಿ ಕಲಾಪಗಳನ್ನು ನಿರ್ವಹಿಸಿದರು.

ಜಗನ್ನಾಥ್ 'ಆಜಾದ್' ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಮುತುವರ್ಜಿಯನ್ನು ಶ್ಲಾಘಿಸಿದರು. ಮತ್ತು ಈ ಪಕ್ಷಗಳು ಮುಂದಿನ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ಶಿಕ್ಷಣತಜ್ಞರು, ಬುದ್ಧಿಜೀವಿಗಳು ಭಾಗವಹಿಸುವಂತೆ ಮಾಡಬೇಕೆಂದು ಸಲಹೆ ಮಾಡಿದರು.

ರಾಷ್ಟ್ರವಿರೋಧಿ ಶಕ್ತಿಗಳ ಪಿತೂರಿಗಳನ್ನು ಒಗ್ಗಟ್ಟಿನಿಂದ ಸೋಲಿಸುವಂತೆ ರಾಜ್ಯದ ಜನರಿಗೆ ಕರೆನೀಡುವ ನಿರ್ಣಯ ವೊಂದನ್ನು ಸಮಾವೇಶ ಕೈಗೊಂಡಿತು.

ದಿಲ್ಲಿಯಲ್ಲಿ ಬೆಲೆಯೇರಿಕೆ ವಿರೋಧಿ ಸಪ್ತಾಹ

'ಚೀಲ ತುಂಬಾ ಹಣ, ಕಿಸೆ ತುಂಬ ಸಾಮಾನು' ಎನ್ನುವುದು ಬೆಲೆಯೇರಿಕೆಗೆ ಸಂಬಂಧಿಸಿದ ವಿಶ್ಲೇಷಣೆ. ಭಾರತವನ್ನಾಳುವ ಸರಕಾರಗಳು ದೇಶದ ಜನರು ಸದಾ ಈ ಮಾತನ್ನು ನೆನಪಿನಲ್ಲಿಟ್ಟು ಕೊಳ್ಳುವಂತೆ ಮಾಡುತ್ತಿವೆ. ಹೊಸ ಹೊಸ ಆಶೆ ನಿರೀಕ್ಷೆಗಳನ್ನು ಚಿಗುರಿಸಿದ ರಾಷ್ಟ್ರೀಯರಂಗ ಸರಕಾರವೂ ಇದಕ್ಕೆ ಹೊರತಾದುದಲ್ಲ.

ಬಹಳಷ್ಟು ಆಶ್ವಾಸನೆಗಳನ್ನು ನೀಡಿದರೂ ಅವು ಕೇವಲ ಬಾಯುಪಚಾರದ ಮಾತುಗಳಾಗಿವೆ ಹೊರತು ಹಸಿದವರ ಹೊಟ್ಟೆ ತಣ್ಣಗಾಗಿಸಿಲ್ಲ. ಬೆಲೆಯೇರಿಕೆ ತಡೆಯದಿರುವುದು ಮಾತ್ರವೇ ಅಲ್ಲ. ರೇಷನ್ ಸಾಮಗ್ರಿಗಳ ಬೆಲೆಯನ್ನು ಹೆಚ್ಚಿಸುವ ಮೂಲಕ ಸರಕಾರ ಬೆಂಕಿಗೆ ಎಣ್ಣೆ ಸುರಿದಿದೆ. ಆರ್ಥಿಕ ಅಪರಾಧಿಗಳು ಹಾಗೂ ಕಾಳ ಸಂತೆಕೋರರ ವಿರುದ್ಧ ಧೃಢಕ್ರಮ ಕೈಗೊಳ್ಳಲು ಸರಕಾರ ಸಿದ್ಧವಿಲ್ಲ. ಅಲ್ಲದೆ ವಿಶ್ವಬ್ಯಾಂಕ್ ಐ.ಎಂ.ಎಫ್ ನೀತಿಗಳನ್ನು ಜಾರಿಗೊಳಿಸಿ ದಿನಬಳಕೆಯ ವಸ್ತುಗಳ ಸಬ್ಸಿಡಿಯನ್ನು ಇಳಿಸಿದ್ದು ಕಳವಳಕಾರಿ ಬೆಲೆ ಪರಿಸ್ಥಿತಿಗೆ ಕಾರಣವಾಗಿದೆ.

ಹೀಗೆ ಜನರ ಜೀವನವನ್ನು ಅಸಹನೀಯಗೊಳಿಸಿರುವ ಕೇಂದ್ರದ ರಾಷ್ಟ್ರೀಯರಂಗ ಸರಕಾರದ ನೀತಿಯನ್ನು ಪ್ರತಿಭಟಿಸಲು ಸಿ.ಪಿ.ಐ.(ಎಂ) ದಿಲ್ಲಿ ರಾಜ್ಯ ಸಮಿತಿ ಆಗಸ್ಟ್ 20 ರಿಂದ 25 ರ ವರೆಗೆ ಬೆಲೆಯೇರಿಕೆ ವಿರೋಧಿ ಸಪ್ತಾಹ ಆಚರಿಸಿತು.

ಸಪ್ತಾಹದ ಕೊನೆಯ ದಿನ ಚಾಂದ್‌ನಿ ಚೌಕದಲ್ಲಿರುವ ಪಕ್ಷದ 1000 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಸಪ್ತಾಹದ ಅವಧಿಯಲ್ಲಿ ರಾಜ್ಯದ ವಿವಿದೆಡೆ ವಿವಿಧ ಕೈಗಾರಿಕಾ ಪ್ರದೇಶಗಳು, ವಸತಿ ಪ್ರದೇಶಗಳು, ಕೊಳೆಗೇರಿಗಳು ಮತ್ತು ಪುನರ್ ವಸತಿ ಪ್ರದೇಶಗಳಲ್ಲಿ ರಸ್ತೆಬದಿ ಸಭೆ ಮತ್ತು ಮೆರವಣಿಗೆಗಳನ್ನು ನಡೆಸಲಾಯಿತು. ಈ ಸ್ಥಳೀಯ ಜನರು ನೂರಾರು ಸಂಖ್ಯೆಯಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸರಕಾರದ ವಿರುದ್ಧದ ಸಿಟ್ಟನ್ನು ವ್ಯಕ್ತಪಡಿಸಿದರು. ಸಾವಿರಾರು ಉರ್ದು ಮತ್ತು ಹಿಂದಿ ಕರಪತ್ರಗಳನ್ನು ವಿತ್ತರಿಸಲಾಯಿತು. ವಾರದುದ್ದಕ್ಕೂ ಒಂದು ಜೀಪ್ ಪ್ರಚಾರ ಕಾರ್ಯದಲ್ಲಿತ್ತು.

ಬೃಂದಾಕಾರಟ್, ಸೊಹೆಲ್‌ಹಷ್ಮಿ, ರಂಜನ್ ನರುಲಾ, ಮೋಹನ್ ಲಾಲ್, ಎಂ.ಎ. ಚಾವೇದ್, ಎಚ್.ಸಿ. ಪಂತ್ ಮೊದಲಾದ ಮುಖಂಡರು ಸಭೆಗಳನ್ನುದ್ದೇಶಿಸಿ ಮಾತನಾಡಿದರು.

ನಾಗಾಲ್ಯಾಂಡ್‌ನಲ್ಲಿ ಪ್ರತ್ಯೇಕತಾವಾದದ ಹೊಸ ಕೂಗು

ಈಶಾನ್ಯ ಭಾರತದಲ್ಲಿ ಯಾವಾಗಲೂ ಪ್ರತ್ಯೇಕತಾವಾದದ ಸೊಲ್ಲು ಕೇಳಿ ಬರುತ್ತದೆ. ಅಲ್ಲಿನ ಅಸಮಾನ ಬೆಳವಣಿಗೆಗಳಿಂದ ಜನರಲ್ಲಿ ಉದ್ಭವಿಸಿದ ಅತೃಪ್ತಿಯನ್ನು ಇಂಥ ಭಾವನೆ ಕೆರಳಿಸಲು ಸಾಮ್ರಾಜ್ಯಶಾಹಿ ಶಕ್ತಿಗಳು ಸಾಕಷ್ಟು ಪ್ರಯತ್ನ ನಡೆಸುತ್ತಿವೆ.

ಈಗ ಈಶಾನ್ಯ ರಾಜ್ಯವಾದ ನಾಗಾಲ್ಯಾಂಡ್‌ನಲ್ಲಿ ಪ್ರತ್ಯೇಕತಾವಾದದ ಹೊಸ ಕೂಗೊಂದು ಕೇಳಿ ಬರುತ್ತಿದೆ. ಅಲ್ಲಿ ನಾಗಾ ಯುವ ವಿಮೋಚನಾ ರಂಗ (ಎನ್.ವೈ.ಎಲ್.ಎಫ್) ಎಂಬ ಹೊಸ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ. ಅದು ರಾಜ್ಯದಲ್ಲಿರುವ ಎಲ್ಲಾ ನಾಗಾಯೇತರ ಜನರು ಹೊರ ಹೋಗುವಂತೆ ಇತ್ತೀಚೆಗೆ ಕರೆ ನೀಡಿದೆ. ಸೆಪ್ಟೆಂಬರ್ 30 ರೊಳಗೆ ನಾಗಾಯೇತರರು ಹೊರ ಹೋಗದಿದ್ದರೆ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗ ಬಹುದೆಂದು ಈ ರಂಗ ಬೆದರಿಕೆಹಾಕಿದೆ.

ಹಾಡು ಹಗಲೇ ಪೋಲೀಸರು ಮತ್ತು ಭದ್ರತಾ ಸಿಬ್ಬಂದಿಗಳ ಎದುರಿನಲ್ಲೇ ರಂಗದ ಕಾರ್ಯಕರ್ತರು ಐದಾರು ಉನ್ನತ ಸರಕಾರಿ ಅಧಿಕಾರಿಗಳನ್ನು ಕೊಂದಿರುವುದರಿಂದ ರಾಜ್ಯದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಅರಾಜಕತೆ ತಾಂಡವವಾಡುತ್ತಿದೆ ಎಂದು ಅಧಿಕಾರಿಗಳು ಮತು ನಾಗಾಯೇತರ ಜನರು ಅಭಿಪಾಯಪಟ್ಟಿದ್ದಾರೆ.

ಈ 'ನಾಗಾ' ಉಗ್ರಗಾಮಿಗಳು ಪ್ರಧಾನವಾಗಿ ಬಂಗಾಳಿಗಳು, ಬಿಹಾರಿಗಳು ಮತ್ತು ಕೇರಳೀಯರನ್ನು ತಮ್ಮ ಪ್ರಧಾನ ಗುರಿಯನ್ನಾಗಿಸಿದ್ದಾರೆ. ಕೆಲವು ಕೆಥೋಲಿಕ್ ಮಿಷನರಿಗಳಿಗೂ ರಾಜ್ಯದಿಂದ ಹೊರ ಹೋಗುವಂತೆ 'ನೋಟಿಸ್' ನೀಡಲಾಗಿದೆ.

ಮಣಿಪುರದಲ್ಲಿ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ

ಆಗಸ್ಟ್ ಕೊನೆಯವಾರದಲ್ಲಿ ಕಾಲೇಜ್‌ಗೆ ಹೋಗಿದ್ದ ವಿದ್ಯಾರ್ಥಿನಿ ರಾಜಕುಮಾರಿ ಟಂಫಾಸ್‌ನ ಮನೆಗೆ ಮರಳಲಿಲ್ಲ. ಎರಡು ದಿನಗಳ ನಂತರ ಆಕೆಯ ಶವ ದೊರಕಿತ್ತು. ಈ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಿ ಆಕೆಯನ್ನು ಕೊಲೆ ಮಾಡಲಾಗಿತ್ತೆಂದು ತಿಳಿದು ಬಂದಿದೆ.

ಈ ಸಂದರ್ಭದಲ್ಲಿ ಪೋಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಅಪರಾಧವೆಸಗಿದ ಮೇಲೆ ತೌಡಮ್ ಆಶಾಕುಮಾರ್ ಮತ್ತು ಕೊನ್‌ಸಣಂಗೊತ್ ನಾಗಾಲ್ಯಾಂಡ್-ಬರ್ಮಾ ಗಡಿಪ್ರದೇಶಕ್ಕೆಪರಾರಿಯಾಗಿದ್ದರು.

ಅತ್ಯಾಚಾರ-ಕೊಲೆ ಹಾಗೂ ಅಪರಾಧಿಗಳನ್ನು ಬಂಧಿಸುವಲ್ಲಿ ಪೋಲೀಸರು ವಿಳಂಬಿಸುತ್ತಿರುವುದನ್ನು ವಿರೋಧಿಸಿ ಇಂಫಾಲ್‌ನಲ್ಲಿ ಮಹಿಳಾ ವರ್ತಕರು ಸೆ.4 ರಂದು ಹರತಾಳ ಆಚರಿಸಿದರು.

ದೇಶದೊಳಗೊಂದು ಸುತ್ತು

ರೈತರ ಸಮಾವೇಶ

ತಾ: 26-8-90 ರಂದು ಕೋಟೆಕಾರ್ ಸರ್ಕಲ್‌ನ ರೈತರ ಸಮಾವೇಶವು ಕುತ್ತಾರು ಪದವಿನಲ್ಲಿ ಸೋಮೇಶ್ವರ ಮಂಡಲದ ಉಪ ಪ್ರಧಾನರಾದ ಶ್ರೀ ಪಿ. ಪರಮೇಶ್ವರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತ್ತು.

ಸಭೆಯ ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಯು.ಪಿ.ಡಿ.ಸೋಜ ಸಭೆಯನ್ನು ಸ್ವಾಗತಿಸಿದರು.

ಸಭೆಯಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಂ: ಕೆ.ಆರ್. ಶ್ರೀಯಾನ್ ರೈತರು ಕೃಷಿ ಕೂಲಿಗಾರರು ಬಾಧಿಸುವ ಸಮಸ್ಯೆಯನ್ನು ಪರಿಹರಿಸಲು ರೈತರು ಸಂಘಟಿತರಾಗಿ ಹೋರಾಟ ನಡೆಸಲು ಕರೆ ನೀಡಿದರು. ಹಾಗೂ ತಾಲೂಕು ರೈತ ಸಂಘದ ಅಧ್ಯಕ್ಷ ಶ್ರೀ ಬಾಬು ಪೂಜಾರಿ, ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಜನಾರ್ಧನ ನಾಯಕ್, ರೈತರ ಸಮಸ್ಯೆಯ ಬಗ್ಗೆ ಮಾತನಾಡಿ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್‌ನ ಕಾರ್ಯದರ್ಶಿ ಕಾಂ: ಸುಕುಮಾರ್ ಸಮಾವೇಶಕ್ಕೆ ಸಂದೇಶ ನೀಡಿದರು.

ಬಳಿಕ ಮುಂದಿನ ಸಂಘಟನೆ ನಡೆಸಲು 29 ಜನರುಳ್ಳ ಹೊಸ ಸಮಿತಿಯನ್ನು ರಚಿಸಿ ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷ ಪಾವ್ಲ್ ಡಿಸೋಜ, ಉಪಾಧ್ಯಕ್ಷರಾಗಿ - ಪಿ. ಪರಮೇಶ್ವರ ಶೆಟ್ಟಿ, ಕೆ. ಅಣ್ಣಪ್ಪ ಶೆಟ್ಟಿ ಕಾರ್ಯದರ್ಶಿ - ಶ್ರೀನಿವಾಸ್ ಆಳ್ವ ಕಟ್ಟೆಮಾರು, ಉಪಕಾರ್ಯದರ್ಶಿ - ಗಂಗಯ್ಯ ಗಟ್ಟಿ ಕೃಷ್ಣ ಶೆಟ್ಟಿ, ಖಜಾಂಚಿಯಾಗಿ - ಲಕ್ಷಣ ಕೋಟ್ಯಾನರನ್ನು ಆರಿಸಲಾಯಿತು.

ಕೊನೆಗೆ ಆನಂದ ಬೆಳ್ಮಾಡರು ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ಡಿವೈಎಫ್.ಐನಿಂದ ಕೋಮು ಸೌಹಾರ್ದತಾ ವಾರ

ಭಾರತ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ ಕೇಂದ್ರ ಸಮಿತಿ ಆಗಸ್ಟ್ 9 ರಿಂದ 15 ರವರೆಗೆ ಕೋಮುಸೌಹಾರ್ದತಾ ವಾರ ಆಚರಿಸಿ ದೇಶದ ಯುವಜನತೆಯನ್ನು ಜಾಗೃತಗೊಳಿಸಬೇಕೆಂದು ನೀಡಿದ ಕರೆಯ ಮೇರೆಗ ರಾಜ್ಯದೆಲ್ಲೆಡೆ ಡಿವೈಎಫ್ಐ ಘಟಕಗಳು ಕೋಮುಸೌಹಾರ್ಧತಾ ವಾರಾಚರಣೆ ನಡೆಸಿವೆ. ಕೆಲವು ವರದಿಗಳು ಇಲ್ಲಿವೆ.

ಬೆಂಗಳೂರು

ಬೆಂಗಳೂರಿನ ದಾಸರಹಳ್ಳಿ ಘಟಕ ಆಗಸ್ಟ್
12 ರಂದು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘದ ಮುಖಂಡರೂ, 'ಐಕ್ಯರಂಗ' ಪತ್ರಿಕೆಯ ಜಿ.ಎನ್.ನಾಗರಾಜ್ ರವರು ಬ್ರಿಟಿಷರ ಕಾಲದಲ್ಲಿ ಅವರು, ಸ್ವಾತಂತ್ರ್ಯಾನಂತರ ಸಾಮ್ರಾಜ್ಯಶಾಹಿ ಶಕ್ತಿಗಳು, ದೇಶದ ಬಂಡವಾಳಶಾಹಿ-ಭೂಮಾಲಿಕ ಶಕ್ತಿಗಳು ಕೋಮು ಐಕ್ಯತೆಯನ್ನು ನಾಶಪಡಿಸುತ್ತಿದ್ದಾರೆ ಎಂದು ವಿವರಿಸಿ ಯುವಜನತೆ ದುಡಿಯುವ ಜನರೊಂದಿಗೆ ಸೇರಿ ಕೋಮುಸೌಹಾರ್ಧತೆಯನ್ನು ಕಟ್ಟಿ ಬೆಳೆಸಬೇಕೆಂದು ಕರೆ ನೀಡಿದರು. ಬಿ.ಇ.ಎಫ್.ಐ.ನ ಮುಖಂಡ ಎಂ.ಆರ್.ಶೆಣೈ ನಿರುದ್ಯೋಗ ಮತ್ತು ಕೋಮುವಾದದ ನಡುವಿನ ಸಂಬಂಧದ ಕುರಿತು ಮಾತನಾಡಿದರು. ಘಟಕದ ಕಾರ್ಯದರ್ಶಿ ಎಂ.ಎಸ್. ನಂಜರಾಜುರವರು ಸ್ವಾಗತಿಸಿದರು. ಘಟಕದ ಅಧ್ಯಕ್ಷ ಬಿ.ಮೋನಪ್ಪ ವಂದನಾರ್ಪಣೆ ಮಾಡಿದರು.

ಸುಳ್ಯ

ದ.ಕ.ಜಿಲ್ಲೆಯ ಸುಳ್ಯದಲ್ಲಿ ಆಗಸ್ಟ್ 15ರ ಬೆಳಿಗ್ಗೆ 10ಗಂಟೆಗೆ ಕೋಮುವಾದ-ಪ್ರತ್ಯೇಕವಾದದ ವಿರುದ್ಧ ದೊಡ್ಡ ರಾಲಿ ನಡೆಯಿತು. ಡಿವೈಎಫ್ಐ ಸುಳ್ಯ ತಾಲೂಕು ಸಮಿತಿ ಸಂಘಟಿಸಿದ್ದ ರಾಲಿಯಲ್ಲಿ ಯುವಜನರಲ್ಲದೆ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರೂ ಭಾಗವಹಿಸಿದ್ದರು.

ಸಿಐಟಿಯು ತಾಲ್ಲೂಕು ಅಧ್ಯಕ್ಷ ಸೂರ್ಯನಾರಾಯಣ ಭಟ್, ಮಹಿಳಾ ಸಂಘಟನೆಯ ದ.ಕ. ಜಿಲ್ಲಾ ಸಂಚಾಲಕಿಯಾದ ಎಸ್.ಆರ್.ಲೀಲಾವತಿ, ರೈತ ಸಂಘದ ಕಾರ್ಯದರ್ಶಿ ಮೋನಪ್ಪ ಗೌಡ, ಹಾಗೂ ಇನ್ನೊಬ್ಬ ಕಾರ್ಯಕರ್ತರಾದ ಕೃಷ್ಣಭಟ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ದೇಶದೆಲ್ಲೆಡೆ ಹಿಂದೂ-ಮುಸ್ಲಿಂ ಕೋಮುವಾದಿಗಳು, ಅಮೇರಿಕನ್ ಸಾಮ್ರಾಜ್ಯಶಾಹಿಗಳ ನೆರವಿನೊಂದಿಗೆ ಪ್ರತ್ಯೇಕತಾವಾದಿಗಳು ನಡೆಸುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಯುವಜನತೆಯನ್ನು ಎಚ್ಚರಿಸುತ್ತಾ ಯುವಜನ, ಮಹಿಳೆಯರು, ಕಾರ್ಮಿಕರು,ರೈತರು ಒಗ್ಗೂಡಿ ದೇಶದ ಐಕ್ಯತೆಯ ರಕ್ಷಣೆಗೆ ಶ್ರಮಿಸಬೇಕೆಂದರು.

ಡಿವೈಎಫ್ಐ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ರಾಬರ್ಟ್ ಡಿ.ಎಸ್. ಸ್ವಾಗತಿಸಿದರು, ಅಧ್ಯಕ್ಷ ಎಂ,ಹೆಚ್. ಪರಮೇಶ್ವರ ಗೌಡರು ವಂದಿಸಿದರು.

ಹೊಸಪೇಟೆ

ಆಗಸ್ಟ್ 14ರ ಮಧ್ಯರಾತ್ರಿ ಪಂಜಿನ ಮೆರವಣಿಗೆಯನ್ನು ಯಶಸ್ವಿಯಾಗಿ ಸಂಘಟಿಸಿ ಹೊಸಪೇಟೆ ನಗರ ಸಮಿತಿ ಕೋಮುಸೌಹಾರ್ದತಾ ವಾರಾಚರಣೆ ನಡೆಸಿತು.

ನಗರದ ಮೂಲೆ-ಮೂಲೆಗಳಿಂದ ಯುವಜನರು ಪಂಜುಗಳನ್ನು ಹಿಡಿದು ಜಿನುಗು ಮಳೆಯಲ್ಲಿ ಹಿಂದಿನ ಒಂದು ವಾರದ ಮಳೆಯಿಂದಾಗಿ ಸ್ವಾತಂತ್ರ್ಯಾನಂತರದ ಆಳುವ ವರ್ಗದ ಜನಗಳ ಭ್ರಷ್ಟತೆಯ ಪ್ರತೀಕವಾಗಿದ್ದ ರಸ್ತೆಗಳಲ್ಲಿ ಐಕ್ಯತೆಯ ಘೋಷಣೆಗಳನ್ನು ಕೂಗಿಕೊಂಡು ಬರುತ್ತಿದ್ದಂತೆ ಇನ್ನಷ್ಟು ಯುವಜನರು ಮೆರವಣಿಗೆಗಳನ್ನು ಸೇರಿಕೊಂಡರು. ಏಕೆಂದರೆ ಜಾತಿ, ಧರ್ಮ, ಭಾಷೆಗಳ ಹೆಸರಿನಲ್ಲಿ ದೇಶವನ್ನೊಡೆಯುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು, ಹಡತನ, ನಿರುದ್ಯೋಗ, ಅನಕ್ಷರತೆಯಿಂದ ಕತ್ತಲಲ್ಲಿ ಬಳಲುತ್ತಾ ಇರುವ ಬದುಕನ್ನು ತೊಡೆದು ಹೊಸ ಸಮಾಜದ ನಿರ್ಮಾಣಕ್ಕಾಗಿ ಹೋರಾಡುವ ಬನ್ನಿ ಎಂದು ಈ ಪಂಜು ಹಿಡಿದ ಯುವಜನರು ಇತರ ಯುವಜನರಿಗೆ ಕರೆ ನೀಡುತ್ತಿದ್ದರು. ಗಾಂಧೀಜಿ ವೃತ್ತದಲ್ಲಿ ಈ ಯುವಜನರೆಲ್ಲಾ ಸೇರಿ ಸ್ವಾತಂತ್ರ್ಯವೀರರ ಕ್ರಾಂತಿಕಾರಿ ಹಾದಿಯಲ್ಲಿ ಸಾಗುವ ಪಣತೊಟ್ಟರು.

ಎಂ.ಜಂಬಯ್ಯ ನಾಯಕ, ಸೋಮಪ್ಪ, ಅಶೋಕ, ಮೆಹಬೂಬ ಬೇಗ್, ರಾಜಲಕ್ಷ್ಮಿ, ಶ್ರೀನಿವಾಸ ಜಾಲಗಾರ, ಬಾಬು, ಗೋವಿಂದರಾಜ್ ಇವರ ಮುಖಂಡತ್ವದಲ್ಲಿ ಈ ಪಂಜಿನ ಮೆರವಣಿಗೆ ನಡೆಯಿತು.

ಬಂಟ್ವಾಳ ತಾಲೂಕು ಮೂರ್ತೆದಾರರ ಮತ ಪ್ರದರ್ಶನ

ಕಳೆದ ನಾಲ್ಕು ತಿಂಗಳುಗಳಿಂದ ಜಿಲ್ಲೆಯ ಮೂರ್ತೆದಾರರ ಕುಟುಂಬಗಳು, ಕರ್ನಾಟಕ ರಾಜ್ಯ ಸರಕಾರದ ಶೇಂದಿ ನಿಷೇದ ಕಾಯ್ದೆ ಜ್ಯಾರಿಯಿಂದ ಭಯಭೀತರಾಗಿದ್ದಾರೆ. ಈ ಬಗ್ಗೆ ಜಿಲ್ಲೆಯ ಹಲವು ಭಾಗಗಳಲ್ಲಿ, ತಮ್ಮ ಸಂಕಷ್ಟದ ಬಗ್ಗೆ ಹಲವು ರೀತಿಯ ಚಳುವಳಿ ಹೋರಾಟಗಳನ್ನು ನಡೆಸುತ್ತಾ ಬಂದಿದ್ದರೂ, ರಾಜ್ಯದ ಕಾಂಗ್ರೆ ಸರಕಾರವು ಮೂಕ ಪ್ರೇಕ್ಷಕನಾಗಿದ್ದುಕೊಂಡು ಕಾಲಹರಣ ಮಾಡುತ್ತಿದೆ.

ಶೇಂದಿ ಲೀಟರ್‌ಗೆ ಇತ್ತೀಚೆಗೆ 1-75 ರಂತೆ ಮೂರ್ತೆದಾರರು ತಿರಸ್ಕರಿಸಿದ್ದಾರೆ ಮೂರ್ತೆದಾರರ ಶೇಂದಿ ಲೀಟರ್‌ಗ ಕನಿಷ್ಟ 3 ರೂಪಾಯಿಯನ್ನಾದರೂ ಸದ್ಯಕ್ಕೆ ನಿಗದಿ ಮಾಡದಿದ್ದರೆ, ನಮ್ಮ ಜಿಲ್ಲೆಯ ಮೂರ್ತೆದಾರರಿಂದ ತೀವ್ರ ಪ್ರತಿಭಟನೆಯನ್ನು ರಾಜ್ಯ ಕಾಂಗ್ರೆ ಸರಕಾರವು ಎದುರಿಸಬೇಕಾದೀತು. ಎಂಬುದಾಗಿ ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕೆ.ಆರ್.ಶ್ರೀಯಾನ್ ರವರು ತಾ 10-8-90 ರಂದು ಬಂಟ್ವಾಳ ತಾಲೂಕು ಕಛೇರಿಯ ಮುಂಭಾಗದಲ್ಲಿ ನಡೆದ ಬೃಹತ್ ಮೂರ್ತೆದಾರರ ಮತು ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡುತ್ತಾ ರಾಜ್ಯ ಸರಕಾರಕ್ಕೆ ಎಚ್ಚರಿಕೆಯಿತ್ತರು.

ಬಳಿಕ ತಾಲೂಕು ರೈತ ಸಂಘದ ಅಧ್ಯಕ್ಷ ಬಿ. ವಾಸು ಗಟ್ಟಿ ಮಾತನಾಡುತ್ತಾ, ಮೂರ್ತೆದಾರರು ಬೃಹತ್ ಸಂಖ್ಯೆಯಲ್ಲಿ ಉತ್ಸಾಹದಿಂದ ಮತ ಪ್ರದರ್ಶನದಲ್ಲಿ ಭಾಗವಹಿಸುವುದಕ್ಕೆ ಪ್ರಶಂಸಿಸಿ, ಹೋರಾಟವನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ಮತ ಪ್ರದರ್ಶನದ ಪೂರ್ವಭಾವಿಯಾಗಿ ಬಿ.ಸಿ. ರೋಡ್ ರೈಲ್ವೇ ಸ್ಟೇಶನ್ನಿನ ಸಮೀಪದಿಂದ ನೇತೃತ್ವವನ್ನು ಬಂಟ್ವಾಳ ತಾಲೂಕು ಮೂರ್ತೆದಾರರ ಕ್ರಿಯಾ ಸಮಿತಿ ಮುಂದಾಳುಗಳಾದ ಬಿ. ನಾರಾಯಣ, ಎಂ. ಮಾರಪ್ಪ ಪೂಜಾರಿ, ದೇರಣ್ಣ ಪೂಜಾರಿ, ಲಿಂಗಪ್ಪ ಪೂಜಾರಿ, ಬಿ. ಸಂಜೀವ್ ಬಂಗೇರ, ಬಿ.ಹೂವಯ್ಯ ಬಂಗೇರ, ವಿಟ್ಟಿ ರಾಮಣ್ಣ ಮೊದಲಾದವರು ವಹಿಸಿದ್ದರು.

ಚಳುವಳಿಗೆ ರೈತರ ಬೆಂಬಲ

ಮೂರ್ತೆದಾರರ ಕಾನೂನುಭಂಗ ಚಳುವಳಿಗೆ ಸಂಪೂರ್ಣ ಬೆಂಬಲ ನೀಡಲು ಕುಪ್ಪೆಪದವು ಪ್ರದೇಶ ರೈತ ಸಂಘ ನಿರ್ಧರಿಸಿದೆ.

ಆಗಸ್ಟ್ 29 ರಂದು ನಡೆದ ಸಂಘದ ವಿಸ್ತೃತ ಸಭೆ ಈ ಬಗ್ಗೆ ತೀರ್ಮಾನಿಸಿತು. ಮಂಗಳೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಮತ್ತು ಸಿ.ಪಿ.ಐ.(ಎಂ) ಗುರುಪುರ ಪ್ರದೇಶ ಸಮಿತಿಯ ಕಾರ್ಯದರ್ಶಿಯವರು ಅತಿಥಿಗಳಾಗಿ ಸಭೆಯಲ್ಲಿ ಭಾಗವಹಿಸಿದರು.

ದೂಮಣ್ಣ ಪೂಜಾರಿ ಅಧ್ಯಕ್ಷರು, ನೀಲಯ್ಯನಾಯ್ಕ ಮತ್ತು ಉಮರಬ್ಬ ಉಪಾಧ್ಯಕ್ಷರು ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ, ಮುದರ ಪೂಜಾರಿ ಸಹಕಾರ್ಯದರ್ಶಿ ಹಾಗೂ ಸುಧಾಕರ್ ಕೋಶಾಧಿಕಾರಿಯಾಗಿರುವ 15 ಜನರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಕೊಲ್ಲಿ ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿರುವ ಏಶಿಯನ್ನರು

ಐದು ವಾರಗಳಾದರೂ ಇರಾಕ್‌ನ ಕುವೈತ್ ಆಕ್ರಮಣದಿಂದ ಉಂಟಾಗಿರುವ ಕೊಲ್ಲಿ ಬಿಕ್ಕಟ್ಟು ಪರಿಹಾರವಾಗುವ ಸೂಚನೆ ಇನ್ನೂ ಇಲ್ಲ. ಯುದ್ಧದ ಭಯ ಇನ್ನೂ ತೊಲಗಿಲ್ಲದಿದ್ದರೂ ಈ ಶೀತ ಸಮರದಲ್ಲೇ ಇರಾಕ್ - ಕುವೈಟ್‌ನಲ್ಲಿ ಕೆಲಸಕ್ಕಾಗಿ ಬಂದಿರುವ ವಿದೇಶೀ ಕಾರ್ಮಿಕರ ಬವಣೆ ಯುದ್ಧ ಕಾಲೀನ ಸಮಸ್ಯೆಗಳಿಗಿಂತ ಕಡಿಮೆ ಗಂಭೀರವಾಗಿಲ್ಲ.

ಈ ವಾರ ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಇರಾಕ್ ವಿದೇಶ ಮಂತ್ರಿಯನ್ನು ಭೇಟಿ ಮಾಡುವ ಮೂಲಕ ಆರಂಭವಾಯಿತು. ಅದೂ ವಿಫಲವಾಯಿತು. ಈ ನಡುವೆ ಇರಾಕ್.ಪಾಶ್ಚಿಮಾತ್ಯ ದೇಶಗಳ ಹೆಂಗಸರು, ಮಕ್ಕಳನ್ನು ತಮ್ಮ ದೇಶಗಳಿಗೆ ಮರಳಲು ಅವಕಾಶಮಾಡಿಕೊಟ್ಟಿದ್ದು ಶಾಂತಿಯ ಆಸೆ ಚಿಗುರಲು ಕಾರಣವಾಯಿತು.

ಆಹಾರ ಕೊರತೆ

ಅಮೇರಿಕ ಏಕ ಪಕ್ಷೀಯವಾಗಿ ವಿಶ್ವಸಂಸ್ಥೆ ಇರಾಕ್ ಮೇಲೆ ವಿಧಿಸಿರುವ ಆರ್ಥಿಕ ದಿಗ್ಬಂಧನವನ್ನು ಜಾರಿಗೆ ತರಲು ತನ್ನ ನೌಸೇನಾಶಕ್ತಿ ಬಳಸಲು ಆರಂಭಿಸಿದೆ. ಕೊಲ್ಲಿಯಲ್ಲಿ ಓಡಾಡುವ ಹಡಗುಗಳನ್ನು ಇರಾಕ್‌ಗೆ ಸಾಮಗ್ರಿಗಳನ್ನು ಒಯ್ಯುತ್ತಿದ'ಯೆ ಎಂದು 'ತಪಾಸಣೆ' ಮಾಡಲಾಗುತ್ತಿದೆ. ಈ ಆಪಾದನೆ ಮೇಲೆ ಹಲವು ಹಡಗುಗಳನ್ನು ವಾಪಸುಮಾಡಲಾಯಿತು. ಆರ್ಥಿಕ ದಿಗ್ಬಂಧನದಲ್ಲಿ ಆಹಾರ, ಮತ್ತು ಆವಶ್ಯಕ ಔಷಧಿ ಸೇರಿವೆಯೇ ಎಂಬ ಸಂದೇಹ ಎದ್ದಿದೆ. ಅಮೇರಿಕ ಇದು ದಿಗ್ಬಂಧನದಲ್ಲಿ ಸೇರಿದೆ ಎನ್ನುತ್ತಿದೆ. ಇರಾಕ್ ಇವು ದಿಗ್ಬಂಧನದಲ್ಲಿ ಸೇರಿಲ್ಲ, ಅಲ್ಲದೆ ಈ ದಿಗ್ಬಂಧನ ವಿಧಿಸುವ ಮೊದಲು ಹಣಪಾವತಿ ಮಾಡಿಕೊಂಡಿರುವ ಸರಕುಗಳ ಮೇಲೆ ದಿಗ್ಬಂಧನ ಅನ್ವಯಿಸುವುದಿಲ್ಲ ಎಂದು ಇರಾಕ್‌ವಾದ. ಈ ವಿವಾದಲದಿಂದ ಸದ್ಯಕ್ಕೆ ಪಾಶ್ಚಿಮಾತ್ಯ ಹೆಂಗಸರು, ಮಕ್ಕಳು ಮತ್ತು ರೋಗಿಗಳ ಸ್ವದೇಶ ವಾಪಸಾತಿ ನಿಂತಿದೆ.

ಇರಾಕ್ ಮೇಲೆ ಹೊರಿಸಿರುವ ಆರ್ಥಿಕ ದಿಗ್ಬಂಧನದ ಪರಿಣಾಮ ಕಾಣಲು ಆರಂಭವಾಗಿದೆ. ಇರಾಕ್-ಕುವೈತ್‌ಗಳಲ್ಲಿ ಆಹಾರ ಮತ್ತು ಔಷಧಿಯ ತೀವ್ರ ಅಭಾವ ಉಂಟಾಗಿದೆ. ಆಹಾರವಿಲ್ಲದೆ ಮಕ್ಕಳು ಸಾಯಲು ಆರಂಭಿಸಿದ್ದಾರೆ ಎಂದು ಇರಾಕ್ ಅಧ್ಯಕ್ಷ ಸದ್ದಾಮ್ ಹುಸೇನ್ ಹೇಳಿಕೊಂಡಿದ್ದರೂ, ವಿವರಗಳನ್ನು ಕೊಟ್ಟಿಲ್ಲ. ಪಾಶ್ಚಿಮಾತ್ಯ ದೇಶಗಳು ಆಹಾರ, ಔಷಧಿ ಪೂರೈಕೆ ಒದಗಿಸಿದರೆ ಬದಲಿಗೆ ಈಗ ನಿಲ್ಲಿಸಿರುವ ಪಾಶ್ಚಿಮಾತ್ಯ ಹೆಂಗಸರು, ಮಕ್ಕಳು ಸ್ವದೇಶ ವಾಪಸಾತಿ ಆರಂಭವಾಗಬಹುದು ಎಂದು ಇರಾಕ್ ಹೇಳಿಕೊಂಡಿದೆ. ಅಲ್ಲದೆ ಹಡಗುಗಳ ಮೇಲೆ ಮಾತ್ರ ನಿರ್ಬಂಧ ಹೇರಿರುವುದು ವಿಶ್ವಸಂಸ್ಥೆ. ವಾಯು ಮಾರ್ಗವಾಗಿ ಆಹಾರ, ಔಷಧಿ ತರಿಸಿಕೊಳ್ಳಲು ಇರಾಕ್ ಪ್ರಯತ್ನಿಸುತ್ತಿದ್ದು, ಇದಕ್ಕೆ ವಿರುದ್ಧವಾಗಿ ಅಮೇರಿಕ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಿಂದ ಇರಾಕ್‌ಗೆ ವಾಯು ದಿಗ್ಬಂಧನದ ನಿರ್ಣಯ ತೆಗೆದುಕೊಳ್ಳುವಂತೆ ಪ್ರಯತ್ನಿಸುತ್ತಿದೆ.

ಭಾರತ, ಮೂರನೆಯ ಜಗತ್ತಿನ ದೇಶಗಳ ಸಂಕಟ:

ಕೊಲ್ಲಿ ಬಿಕ್ಕಟ್ಟಿನಿಂದ ಅತ್ಯಂತ ಹೆಚ್ಚು ಸಂಕಟಕ್ಕೊಳಗಾಗಿರುವುದು ಈ ಬಿಕ್ಕಟ್ಟಿನಲ್ಲಿ ನೇರ ಪಾತ್ರವಿಲ್ಲದ ಭಾರತ ಮತ್ತು ಮೂರನೇಯ ಜಗತ್ತಿನ ದೇಶಗಳು. ಈ ದೇಶಗಳಲ್ಲಿ ಹೆಚ್ಚಿನವು ಕೊಲ್ಲಿದೇಶಗಳಿಂದ ತೈಲ ಆಮದು ಮಾಡುತ್ತಿದ್ದು ಅದರ ಬೆಲೆಯೇರಿಕೆ, ಪೂರೈಕೆಯಲ್ಲಿ ಅಭಾವದಿಂದ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗುತ್ತಾರೆ. ಹೆಚ್ಚಿನ ಈ ದೇಶಗಳ ಜನರು ಕೊಲ್ಲಿ ದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದು, ಈ ಬಿಕ್ಕಟ್ಟಿನಿಂದಾಗಿ ಅವರು ವಾಪಾಸಾಗುತ್ತಿದ್ದು ಅವರ ವಿದೇಶಿ ವಿನಿಮಯದ ಪಾವತಿ ನಿಂತುಹೋಗಿರುವುದಲ್ಲದೆ, ಅವರ ನಿರಾಶ್ರಿತ ಸಮಸ್ಯೆ ಎದುರಿಸಬೇಕಾಗಿದೆ. ಇರಾಕ್‌ನಲ್ಲಿ ಭಾರತದ ಕಂಪನಿಗಳು ಹಲವಾರು ಕಂಟ್ರಾಕ್ಟುಗಳನ್ನು ನಿರ್ವಹಿಸುತ್ತಿದ್ದು, ಅದರ ನಿಲುಗಡೆಯಿಂದಲೂ ಭಾರತಕ್ಕೆ ಭಾರೀ ಹಾನಿ ಆಗಲಿದೆ.

ಇರಾಕ್-ಕುವೈತ್‌ಗಳಲ್ಲಿ ಸುಮಾರು ಎರಡು ಲಕ್ಷ ಭಾರತೀಯರಿದ್ದು, ಅವರಿಗೆ ಆಹಾರ, ಔಷಧಿ ಒದಗಿಸುವುದು, ವಾಪಾ ಸಾಗಬಯಸುವವರಿಗೆ ಹಿಂದಿರುಗಲು ವ್ಯವಸ್ಥೆ ಮಾಡುವುದು ಭಾರತ ಸರ್ಕಾರಕ್ಕೆ ದೊಡ್ಡ ಸಮಸ್ಯೆಯಾಗಿದೆ. ಈಗಾಗಲೇ ಸಾವಿರಾರು ಭಾರತೀಯರು (ಅಂತೆಯೇ ಏಶಿಯನ್ನರು) ಯುದ್ಧ ಭೀತಿಯಿಂದ ಇರಾಕ್-ಕುವೈತ್‌ನಿಂದ ಜೋರ್ಡಾನ್‌ಗೆ ಓಡಿಬರುತ್ತಿದ್ದು, ಅಲ್ಲಿ ಅವರಿಗೆ ಮಾನವ ಯೋಗ್ಯ ವಸತಿ, ಆಹಾರ, ನೀರು ವ್ಯವಸ್ಥೆ ಮಾಡಲು ಸಾಧ್ಯವಾಗುತ್ತಿಲ್ಲ. ಇರಾಕ್ ಜೋರ್ಡಾನ್ ಗಡಿಪ್ರದೇಶದಲ್ಲಿ ನಿರಾಶ್ರಿತರ ಶಿಬಿರಗಳಲ್ಲಿ ಪರಿಸ್ಥಿತಿ ತೀವ್ರವಾಗಿದೆ. ಇದರ ಪರಿಹಾರಕ್ಕಾಗಿ ಅಂತರ್ರಾಷ್ಟ್ರೀಯ ನೆರವಿನ ಅಗತ್ಯವಿದೆ. ಇದನ್ನು ವಿಶ್ವಸಂಸ್ಥೆ ಸಂಘಟಿಸಬೇಕೆಂಬ ಮೂರನೇಯ ಜಗತ್ತಿನ ಅದರಲ್ಲೂ ಮುಖ್ಯವಾಗಿ ಏಶ್ಯನ್ ದೇಶಗಳ ಬೇಡಿಕೆಗೆ ನೀಡಿದೆ. ಇದಕ್ಕೆ ಇರಾನ್, ಚೀನಾ, ಯುಗೋಸ್ಲಾವಿಯಾ, ರೊಮೇನಿಯಾ ಬೆಂಬಲನೀಡಿವೆ. ಇದರಲ್ಲಿ ಇರಾಕ್-ಕುವೈತ್‌ನಲ್ಲಿ ಸಿಕ್ಕಿಬಿದ್ದಿರುವ ಏಶ್ಯನ್ನರಿಗೆ ಆಹಾರ, ಔಷಧಿ ಪೂರೈಕೆಯನ್ನು ದಿಗ್ಬಂಧನದ ಪರಿಮಿತಿಯನ್ನು ಸೇರಿಸಬಾರದೆಂಬ ಕೇಳಿಕೆಯೂ ಸೇರಿದೆ. ವಿಶ್ವ ಸಂಸ್ಥೆ ಈ ಬಗ್ಗೆ ಒಂದು ನಿರ್ಧಾರವನ್ನು ಸದ್ಯದಲ್ಲೇ ತೆಗೆದುಕೊಳ್ಳುವ ಸಾಧ್ಯತೆಇದೆ.

ಶಾಂತಿಗಾಗಿ ಸಂಧಾನಗಳು:

ಕೊಲ್ಲಿ ಸಂಕಟಕ್ಕೆ ಶಾಂತಿ ಪರಿಹಾರ ಹುಡುಕಲು ಹಲವಾರು ದಿಕ್ಕುಗಳಿಂದ ಪ್ರಯತ್ನ ನಡೆದಿದೆ- ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಗಳ ಜೋರ್ಡಾನ್ ಭೇಟಿಯಿಂದ ಆರಂಭಿಸಿ. ಜೋರ್ಡಾನ್ ಅಧ್ಯಕ್ಷರು ಸಹ ಈ ಪ್ರಯತ್ನದಲ್ಲಿ 10 ದೇಶಗಳ ಭೇಟಿ ಮಾಡುತ್ತಿದ್ದಾರೆ. ಅಲಿಪ್ತ ದೇಶಗಳು (ಭಾರತ ಸೇರಿದಂತೆ) ಶಾಂತಿ ಸಂಧಾನದ ಪ್ರಯತ್ನಗಳನ್ನು ಮಾಡುತ್ತಿವೆ. ಅರಬ್ ದೇಶಗಳೇ ಪ್ರಯತ್ನಿಸುತ್ತಿವೆ.

ಆದರೆ ಅರಬ್ ದೇಶಗಳಲ್ಲೇ ಸ್ಪಷ್ಟವಾಗಿ ಅಮೇರಿಕ-ಪರ, ಅಮೇರಿಕ ವಿರೋಧಿ ಬಣಗಳಿರುವುದರಿಂದ,ಸಾಮಾನ್ಯ ಅರಬ್ ಶಾಂತಿ ಸೂತ್ರ ಸಾಧ್ಯವಾಗಿಲ್ಲ. ಅಮೇರಿಕನ್-ವಿರೋಧಿ ಬಣ-ಪ್ಯಾಲೆಸ್ಟೀನ್, ಇರಾನ್, ಯೆಮೆನ್, ಅಲ್ಜೀರಿಯಾ, ಜೋರ್ಡಾನ್ ಇರಾಕ್ ಜತೆ ಸೇರಿ ಒಂದು ಶಾಂತಿ ಸೂತ್ರ ಪ್ರಸ್ತಾಪ ಮಾಡಿದ್ದು, ಈಗಿನ ಕೊಲ್ಲಿ ಬಿಕ್ಕಟ್ಟನ್ನು ಹಿಂದೆ ಎಲ್ಲಾ ವಿದೇಶೀ



ಆಕ್ರಮಣ- ತೆರವು ಮಾಡುವುದರ ಜತೆ, ಇತರ ಸಮಸ್ಯೆಗಳ ಜತೆಯಾಗಿ ಪರಿಹಾರ ಮಾಡಬೇಕು ಎನ್ನಲಾಗಿದೆ. ಈ ಶಾಂತಿ ಸೂತ್ರದ ಮುಖ್ಯ ಪ್ರಸ್ತಾಪಗಳು-ಕುವೈಟ್‌ನಿಂದ ಇರಾಕ್ ಪಡೆಗಳ ವಾಪಸಾತಿ, ಕುವೈಟ್‌ನಲ್ಲಿ ಪ್ರಜಾಸತ್ತಾತ್ಮಕ ಚುನಾವಣೆಗಳು (ಕುವೈಟ್‌ನಲ್ಲಿ ಅಮೀರರಿಗೆ ಅಧಿಕಾರ ವಾಸಸಾತಿ ಇಲ್ಲ), ವಿವಾದಗ್ರಸ್ತ ತೈಲ ಕ್ಷೇತ್ರಗಳು ಇರಾಕ್‌ಗೆ 200 ವರ್ಷಗಳಿಗೆ ಭೋಗ್ಯಕ್ಕೆ, ಅರಬ್ ದೇಶಗಳಿಂದ ಎಲ್ಲಾ ವಿದೇಶೀ ಸೈನ್ಯಗಳ ವಾಪಸಾತಿ (ಪ್ಯಾಲೆಸ್ಟೀನ್‌ನಲ್ಲಿ ಇಸ್ರೇಲ್ ಪಡೆಗಳು ಸೇರಿದಂತೆ). ಇದು ಅಮೇರಿಕ ಪರ ಅರಬ್‌ದೇಶಗಳಿಗೆ ಒಪ್ಪಿಗೆ ಇಲ್ಲ. ಆದರೆ ಅರಬ್ ಸಾಮಾನ್ಯ ಜನತೆ ಅಮೇರಿಕ ವಿರೋಧಿಯಾಗಿರುವುದರಿಂದ, ಅಮೇರಿಕನ್ ಸೈನ್ಯ ಸೌದಿ ಅರೇಬಿಯಾದ ಭಾರಿ ಪ್ರಮಾಣದಲ್ಲಿ ಜಮಾಯಿಸಿದ್ದು ಹೆಚ್ಚಿನ ದೇಶಗಳಿಗೆ ಒಪ್ಪಿಗೆಯಾಗಿಲ್ಲ. ಈ ವಿರೋಧ ಎಷ್ಟು ತೀವ್ರವಾಗಿದೆಯೆಂದರೆ ಅಮೇರಿಕನ್ ಸೈನ್ಯಾಧಿಕಾರಿ, ಮತ್ತು ಸೌಧಿ ಅರೇಬಿಯಾದ ರಕ್ಷಣಾ ಮಂತ್ರಿ-ಸೌದಿ ಅರೇಬಿಯಾದ ಮಣಿಂನಿಂದ ಇರಾಕ ಮೇಲೆ ಆಕ್ರಮಣ ನಡೆಯುವುದಿಲ್ಲ. ಅಮೇರಿಕನ್ ಸೈನ್ಯ ಸೌದಿಅರೇಬಿಯಾದ ಮೇಲೆ ಆಕ್ರಮಣವಾದರೆ ಮಾತ್ರ ರಕ್ಷಣಾತ್ಮಕ ಕ್ರಮ ಕೈಗೊಳ್ಳುವುದು ಎಂದು ಹೇಳಬೇಕಾಗಿ ಬಂದಿದೆ. ಆದರೆ ಅಮೇರಿಕನ್ ಸೇನಾ ಜಮಾವಣೆ ನೋಡಿದರೆ ಇರಾಕ್ ಮೇಲೆ ಆಕ್ರಮಣಕ್ಕೆ ಎಲ್ಲಾ ಸಿದ್ಧತೆ ನಡೆದಂತಿದೆ. ಯುದ್ಧ ಆರಂಭಿಸಲು ನೆವ ಮಾತ್ರ ಬೇಕಾಗಿದೆ.

ಬುಶ್-ಗೋರ್ಬಚೇವ್ ಶೃಂಗ ಸಭೆ.

ಯುದ್ಧ ತಡೆಯಲು ಬಹಳ ನಿರೀಕ್ಷೆ ಮೂಡಿಸಿದ್ದು ಬುಶ್--ಗೋರ್ಬಚೇವ್ ಶೃಂಗ ಸಭೆ. ಆದರೆ ಶೃಂಗ ಸಭೆ ಆರಂಭವಾಗುವ ಮೊದಲೇ ಇರಾಕ್ ಕುವೈಟ್‌ನಿಂದ ಹಿಂತೆಗೆಯುವುದು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿದೆ. ಈ ನಡುವೆ ಅಮೇರಿಕ ತಾನು ಜಮಾಯಿಸಿರುವ ಸೈನ್ಯವನ್ನು ಶಾಶ್ವತವಾಗಿ ಅಲ್ಲಿಡಲು ಪ್ರಸ್ತಾಪಗಳನ್ನು ಮುಂದಿಡುತ್ತಿದೆ. ನಾಟೋ ತರದ ಅರಬ್ ಮಿಲಿಟರಿ ಒಪ್ಪಂದದ ಪ್ರಸ್ತಾಪ ಮಾಡಿದೆ.ಇದಕ್ಕೆ ವ್ಯಾಪಕ ವಿರೋಧ ಕಂಡು ಬಂದಿದೆ. ಆದರೆ ಭಾರಿ ಅಮೆರಿಕನ್ ಸೈನ್ಯವನ್ನು ಸೌದಿಯಲ್ಲಿ ಸಾಕುವ ವೆಚ್ಚ ಅಪಾರ. ಅದನ್ನು ಅಮೇರಿಕ ತಾನೇ ಹೊರಲು ತಯಾರಿಲ್ಲ. ತನ್ನ ನ್ಯಾಟೋ ಮಿತ್ರರು ಹೊರಬೇಕೆಂದು ಬಯಸುತ್ತದೆ. ಈ ವೆಚ್ಚ ಸುಮಾರು [illegible] ಕೋಟಿ ಡಾಲರುಗಳು [illegible] ಬ್ರಿಟನ್, ಫ್ರಾನ್ಸ್ ಮತ್ತು ಸೌದಿ ಅರೇಬಿಯಾ ಬಿಟ್ಟರೆ ಬೇರೆ ಯಾವ ಮಿತ್ರ ದೇಶಗಳು ಇದಕ್ಕೆ ಮುಂದಾಗಿಲ್ಲ. ಅಮೆರಿಕಾದ ಈ ನೀತಿ ಸೋವಿಯತ್‌ನಲ್ಲೂ ಆತಂಕಕ್ಕೆ ಕಾರಣವಾಗಿದೆ. ಸೋವಿಯತ್ ದಕ್ಷಿಣ ಗಡಿಯಿಂದ ಎರಡು ಗಂಟೆ ವಾಯು ಪ್ರವಾಸದಷ್ಟು ದೂರ ಇಷ್ಟು ಭಾರಿ ಅಮೆರಿಕಾದ ಸೈನ್ಯ ಜಮಾವಣೆಗೆ ಸೋವಿಯತ್ ಸೈನ್ಯಾಧಿಕಾರಿ ಭಾರಿ ವಿರೋಧ ವ್ಯಕ್ತಪಡಿಸಿದ್ದಾರೆ. ಸೋವಿಯತ್ ಒಕ್ಕೂಟ ಇರಾಕ್ ಕುವೈತ್‌ನಿಂದ ಹಿಂತೆಗೆಯಬೇಕೆಂದು ಸ್ಪಷ್ಟವಾಗಿ ಹೇಳಿದೆ. ಆದರೆ ಅದನ್ನು ಸಾಧ್ಯವಾಗಿಸುವುದು ಮಿಲಿಟರಿ ಕ್ರಮಗಳಿಂದಲ್ಲ. ರಾಜಕೀಯ, ರಾಯಭಾರ ಪ್ರಯತ್ನಗಳಿಂದ ಕೊಲ್ಲಿ ಬಿಕ್ಕಟ್ಟಿಗೆ ಪರಿಹಾರ ಅರಬ್ ದೇಶಗಳಿಂದಲೇ ಬರಬೇಕು. ಈ ಪ್ರದೇಶದ ಹೊರಗಿನ ದೇಶಗಳು ವಿಶ್ವ ಸಂಸ್ಥೆಯ ಮೂಲಕ ಮಾತ್ರ ಈ ಬಿಕ್ಕಟ್ಟು ಬಗೆಹರಿಸುವುದರಲ್ಲಿ ಭಾಗವಹಿಸಬೇಕು. ಮಿಲಿಟರಿ ಕ್ರಮ ತೀರಾ ಅಗತ್ಯವಾದರೆ ಅದು ವಿಶ್ವ ಸಂಸ್ಥೆಯ ನಿಯಂತ್ರಣದಲ್ಲಿ ನಡೆಯಬೇಕು. ಇದು ಸೋವಿಯತ್ ನಿಲುವು.

ಕೊಲ್ಲಿ ಬಿಕ್ಕಟ್ಟಿನ ಒಂದೇ ಒಂದು ಸಕಾರಾತ್ಮಕ ವಿಷಯ ಈವರೆಗೆ ಈ ಬಿಕ್ಕಟ್ಟಿನ ಪರಿಹಾರದಲ್ಲಿ ವಿಶ್ವಸಂಸ್ಥೆ, ಅಂತರಾಷ್ಟ್ರೀಯ ಪಾಲ್ಗೊಳ್ಳುವಿಕೆ. ಅಲ್ಲದೆ ಹಿಂದೆಂದೂ ಪ್ರಾದೇಶಿಕ ಸಂಘರ್ಷಗಳ ಪರಿಹಾರದ ಬಗ್ಗೆ ಅಮೆರಿಕಾ ಮತ್ತು ಸೋವಿಯತ್ ಮಾತುಕತೆ ನಡೆಸಿದ್ದಿಲ್ಲ. ಇದು ಪರಿಹಾರಕ್ಕೆ ಎಡೆಕೊಡುತ್ತದೆಯೆ ಎಂದು ಇದು ಕಾದು ನೋಡಬೇಕಾಗಿದೆ. ಸಾಧ್ಯವಾದರೆ, ಇದು ಒಂದು ಮಹತ್ವದ ಅಂತರಾಷ್ಟ್ರೀಯ ಬೆಳವಣಿಗೆಯಾಗಲಿದೆ.

ಕಂಬೋಡಿಯಾ : ವಿಶ್ವಸಂಸ್ಥೆ ಶಾಂತಿ ಸೂತ್ರದತ್ತ?

ಇಂತಹ ಅವಕಾಶ ಕಂಬೋಡಿಯಾದಲ್ಲಿ ಹೆಚ್ಚಾಗಿದೆ. ಇತ್ತೀಚೆಗೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಐದು ಶಾಶ್ವತ ದೇಶಗಳು ಕಂಬೋಡಿಯಾದ ಸಮಸ್ಯೆಗೆ ಪರಿಹಾರ ಕೊಡುವ ಶಾಂತಿ ಪ್ರಸ್ತಾಪವನ್ನು ಮುಂದಿಟ್ಟಿವೆ. ಇದಕ್ಕೆ ಈ ಐದು ದೇಶಗಳು--ಅಮೆರಿಕ, ಸೋವಿಯತ್ ಒಕ್ಕೂಟ, ಚೀನಾ, ಬ್ರಿಟನ್, ಫ್ರಾನ್ಸ್-ಒಪ್ಪಿಕೊಂಡಿವೆ. ಇದರ ಮುಖ್ಯ ಸಾರ ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಕಾಂಬೋಡಿಯಾದ ಆಂತರಿಕ ಯುದ್ಧ ನಿಲುಗಡೆ, ಮುಕ್ತ ಚುನಾವಣೆಗಳು, ಅಲ್ಲಿವರೆಗೆ ವಿಶ್ವಸಂಸ್ಥೆ ಆಡಳಿತ. ವಿಶ್ವ ಸಂಸ್ಥೆಯ ಪಾಲ್ಗೊಳ್ಳುವಿಕೆ, ಜವಾಬ್ದಾರಿ ಈ ಸೂತ್ರದ ಪ್ರಕಾರ ನಮೀಬಿಯಾದಂತೆ ಇದ್ದರೂ,ಅದರ ಪಾತ್ರ ಇನ್ನು ಹೆಚ್ಚಿನದು.

ಈ ಶಾಂತಿಸೂತ್ರ ಇಡಿಯಾಗಿ ಕಂಬೋಡಿಯಾದ ಪ್ರಸ್ತುತ ಹನ್-ಸೆನ್ ಸರಕಾರ ಮತ್ತು ಅವರ ಸರ್ಕಾರದ ವಿರುದ್ಧ ಹೋರಾಡುತ್ತಿರುವ ರಾಜಕುಮಾರ ಸಿಹ ನುಕ್ ಮತ್ತು ಪೊಲ್ ಪೊಟ್ ಗುಂಪುಗಳಿಗೆ ಒಪ್ಪಿಗೆಯಾಗಿಲ್ಲ. ಆದರೂ ಇದೇ ಶಾಂತಿ ಸೂತ್ರದಲ್ಲಿ ಸ್ವಲ್ಪ ಬದಲಾವಣೆಗಳೊಂದಿಗೆ ಎಲ್ಲರಿಗೂ ಒಪ್ಪಿಗೆ ಯಾಗುವ ಸೂತ್ರ ಕಂಡುಹಿಡಿಯುವ ಸಾಧ್ಯತೆ ಇದೆ. ಇಂತಹ ಒಂದು ಸುಹೆಪ್ರಕಾರ ಚುನಾವಣೆಯಾಗುವವರೆಗೆ ವಿಶ್ವಸಂಸ್ಥೆಯ ಬದಲು, ಎಲ್ಲಾ ನಾಲ್ಕು ರಾಜಕೀಯ ಗುಂಪುಗಳು ಪ್ರತಿನಿಧಿತವಾಗಿರುವ ಸುಪ್ರೀಂ ರಾಷ್ಟ್ರೀಯ ಮಂಡಳಿ ಕಂಬೋಡಿಯಾದ ಆಡಳಿತ ನೋಡಿಕೊಳ್ಳಬಹುದು. ವಿಶ್ವಸಂಸ್ಥೆ ಮೇಲ್ವಿಚಾರಣೆ ಮತ್ತು ಅಂತರಾಷ್ಟ್ರೀಯ ಪ್ರೇಕ್ಷಕನ ಪಾತ್ರವಹಿಸಬಹುದು. ದೈನಂದಿನ ಆಡಳಿತ ಮಾತ್ರ ರಾಷ್ಟ್ರೀಯ ಮಂಡಳಿ ಕೈಯಲ್ಲಿರುತ್ತದೆ. ಆದರೆ ಈ ರಾಷ್ಟ್ರೀಯ ಮಂಡಳಿಯಲ್ಲಿ ಈ ಗುಂಪುಗಳ ಪ್ರಾತಿನಿಧ್ಯ ಎಷ್ಟಿರಬೇಕು ಎಂಬುದು ವಿವಾದಾಸ್ಪದ ವಿಷಯವಾಗಿದೆ. ಅದರಲ್ಲೂ ಮುಖ್ಯವಾಗಿ 1975 ರಲ್ಲಿ ನರಮೇಧಕ್ಕೆ ಕಾರಣರಾದ ಪೊಲ್ - ಪೊಟ್ ಗುಂಪಿಗೆ ಎಷ್ಟು ಪ್ರಾಮುಖ್ಯತೆಕೊಡಬೇಕು ಎಂಬುದರ ಬಗ್ಗೆ ಭಾರಿ ವಿವಾದವಿದೆ. ಇದರ ಬಗ್ಗೆ ಮಾತುಕತೆ ನಡೆಸಲು ಈ ಎಲ್ಲಾ ಗುಂಪುಗಳು ಜಕಾರ್ತದಲ್ಲಿ ಸಭೆ ಸೇರುವ ಸಾಧ್ಯತೆ ಇದೆ ಒಟ್ಟಾರೆ ಕಂಬೋಡಿಯಾದ ಆಂತರಿಕ ಯುದ್ಧ ನಿಲ್ಲುವ ಆಶಾದಾಯಕ ಸಾಧ್ಯತೆಗಳು ಇವೆ.

ಕೊರಿಯಾಗಳು-ಶಾಂತಿಯುತ ಪುನರ್ಮಿಲನದತ್ತ ಮಾತುಕತೆಗಳು

ಮೊದಲೇ ಯೋಜಿಸಿದ್ದಂತೆ ಎರಡು ಕೊರಿಯಾಗಳು ಶೀತಲಸಮರ ನಿಲ್ಲಿಸಿ, ಶಾಂತಿಯುತವಾಗಿ ಪುನರ್ಮಿಲನಗೊಳ್ಳುವ ಬಗ್ಗೆ ಪ್ರಧಾನ ಮಂತ್ರಿಗಳ ಮಟ್ಟದ ಮಾತುಕತೆ ನಡೆದು ಆ ಬಗ್ಗೆ ಆಶಾದಾಯಕ ಭರವಸೆ ಮೂಡಿಸಿವೆ. ಈ ಮಾತುಕತೆ ದ. ಕೊರಿಯಾದ ರಾಜಧಾನಿ ಸಿಯೋಲ್‌ನಲ್ಲಿ ನಡೆದಿದ್ದು, ಉತ್ತರ ಕೊರಿಯಾದ ಪ್ರಧಾನಮಂತ್ರಿಯ ನಾಯಕತ್ವದ ನಿಯೋಗ ಇದಕ್ಕಾಗಿ ಸಿಯೋಲ್‌ಗೆ ಹೋಗಿತ್ತು. ಇಷ್ಟು ಉನ್ನತ ಮಟ್ಟದಲ್ಲಿ ಎರಡು ಕೊರಿಯಾ ನಡುವಣ ಭೇಟಿ, ಸುಮಾರು 45 ವರ್ಷಗಳ ನಂತರ ಎಂದು ಹೇಳಲಾಗಿದೆ. ಎರಡೂ ಕಡೆಯಿಂದಹಲವು ಪ್ರಸ್ತಾಪಗಳನ್ನು ಮಂಡಿಸಲಾಯಿತು. ಅದರ ಬಗ್ಗೆ ಚರ್ಚೆ ನಡೆಸಲಾಯಿತು.

ಉತ್ತರ ಕೊರಿಯಾ ಮೂರು ವಿಷಯಗಳ ಬಗ್ಗೆ ಒಮ್ಮತ ಮೂಡಿಸುವುದು ಈ ಪ್ರಕ್ರಿಯೆಯ ಆರಂಭವಾಗಬಹುದು ಎಂದು ಸಲಹೆ ನೀಡಿದೆ. ಆ ಮೂರು ಸಲಹೆಗಳು--ಕೊರಿಯಾ ವಿಶ್ವಸಂಸ್ಥೆಯಲ್ಲಿ ಒಂದೇ ಸದಸ್ಯನಾಗಿ ಪ್ರವೇಶಿಸುವುದು, ಅಮೆರಿಕಾ - ದ. ಕೊರಿಯಾಗಳ ಜಂಟಿ ಮಿಲಿಟರಿ ಅಭ್ಯಾಸ 'ಟೀಂ ಸ್ಪಿರಿಟ್' ಸ್ಥಗಿತಗೊಳಿಸುವುದು, ಮತ್ತು ದ. ಕೊರಿಯಾದ ಸರ್ಕಾರದ ಅನುಮತಿ ಇಲ್ಲದೆ ಉತ್ತರ ಕೊರಿಯಾಕ್ಕೆ ಭೇಟಿನೀಡಿದ ಭಿನ್ನಮತೀಯರನ್ನು ಬಿಡುಗಡೆ ಮಾಡುವುದು. ಉತ್ತರ ಕೊರಿಯಾದ ನಿಯೋಗ ಬಂಧನಕ್ಕೊಳಗಾಗಿರುವ ಭಿನ್ನಮತೀಯರ ಕುಟುಂಬ ಮತ್ತು ಇತರ ವಿರೋಧಿ ಸಂಘಟನೆಗಳ ನಾಯಕರೊಂದಿಗೆ ಭೇಟಿಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡಿತ್ತು. ದ. ಕೊರಿಯಾ ಸರ್ಕಾರ ಇದನ್ನು ನಿರಾಕರಿಸಿ, ಮಾತುಕತೆ ಸರ್ಕಾರಗಳ ಮಟ್ಟದಲ್ಲಿ ಇರಬೇಕು ಎಂದು ಹೇಳಿದೆ. ಎರಡೂ ದೇಶಗಳ ಪ್ರಮುಖ ಸಾಮಾಜಿಕ, ರಾಜಕೀಯ ಸಂಘಟನೆಗಳ ನಡುವೆ ವಿಚಾರ ವಿನಿಮಯ ಅಗತ್ಯವೆಂಬುದು ಉತ್ತರ ಕೊರಿಯಾದ ನಿಲುವು.

ಗಜರಾಲದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆದ ದೌರ್ಜನ್ಯ ಖಂಡನೆ.

ಉತ್ತರ ಪ್ರದೇಶದ ಮೀರಟ್ ಜಿಲ್ಲೆಯ ಸೈಂಟ್ ಮೇರಿಸ್ ಕಾನ್ವೆಂಟಿನ ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ ನಡೆದ [illegible] ಕೃತ್ಯವನ್ನು ತೀವ್ರವಾಗಿ ಖಂಡಿಸಿ, ಆರೋಪಿಗಳನ್ನು ತೀವ್ರವಾದ ಶಿಕ್ಷೆಗೆ ಗುರಿಪಡಿಸುವಂತೆ ತಾ 6-8-90 ರಂದು ಉಡುಪಿ ತಾಲೂಕು ಕೃಷಿ ಕಾರ್ಮಿಕರ ಸಭೆಯಲ್ಲಿ ಕೇಂದ್ರ ಮತ್ತು ಉತ್ತರ ಪ್ರದೇಶದ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಕೃಷಿ ಕಾರ್ಮಿಕರಿಗೆ ಕೇಂದ್ರ ಶಾಸನವೊಂದನ್ನು ಲೋಕಸಭೆಯ ಮಳೆಗಾಲದ ಅಧಿವೇಶನದಲ್ಲಿಯೇ ಮಂಡಿಸುವಂತೆಯೂ ಆ ಮೂಲಕ ಗ್ರಾಮಾಂತರದ ಕೃಷಿ ಕಾರ್ಮಿಕರಿಗೆ ರಕ್ಷಣೆ ಒದಗಿಸುವಂತೆಯೂ ಕೇಂದ್ರ ಸರಕಾರವನ್ನು ಒತ್ತಾಯಿಸಲಾಯಿತು.

ರೈತ ಕೃಷಿ ಕಾರ್ಮಿಕರ, ನೇಕಾರರೇ ಮೊದಲಾದವರ ಸಾಲಮನ್ನಾ, ಮೂರ್ತೆದಾರರ ನ್ಯಾಯವಾದ ಹೋರಾಟವನ್ನು ಬೆಂಬಲಿಸಿ ನಿರ್ಣಯಗಳನ್ನು ನಿಲ್ಲಿಸುವಂತೆಯೋ ಕೈಗೊಳ್ಳಲಾಯಿತು.

ಕರ್ನಾಟಕ ಪ್ರಾಂತ ರೈತ ಕೃಷಿ ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ಶ್ರೀ. ಅಬ್ರಹಾಂ ಕರ್ಕಡರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ "ರೈತರ ಕೃಷಿ ಕಾರ್ಮಿಕರ ಸಂಘಟನೆ ಬಲಪಡಿಸಿ ದೌರ್ಜನ್ಯ ದಬ್ಬಾಳಿಕೆಗಳ ವಿರುದ್ಧ ಹೋರಾಟ ನಡೆಸಿ ಸರಿಯಾದ ಸಂಬಳ ಸವಲತ್ತುಗಳನ್ನು ಪಡೆಯಲು ಸಾಧ್ಯವಿದೆಯೆಂದು ತಿಳಿಸಿದರು.

ಉಡುಪಿಯ NGO ಸಭಾಭವನದಲ್ಲಿ ಕಿಕ್ಕಿರಿದು ನೆರೆದಿದ್ದ ಕೃಷಿ ಕಾರ್ಮಿಕರ ವಿಸ್ತೃತ ಸಭೆಯ ಅಧ್ಯಕ್ಷತೆಯನ್ನು ಶ್ರೀ. ಡೇವಿಡ್ ಎ. ಕರ್ಕಡ ವಹಿಸಿದ್ದರು.

ವಾರದಲ್ಲಿ 6 ದಿನಗಳ ಕೆಲಸಕ್ಕಾಗಿ ಬೀಡಿ ಕಾರ್ಮಿಕರ ಮೆರವಣಿಗೆ

ಉಡುಪಿ ತಾಲೂಕಿನ ಸಿ.ಐ.ಟಿ.ಯು ಸಂಘಗಳಿಗೆ ಸೇರಿದ ಬೀಡಿ ಕಾರ್ಮಿಕರು ಆಗಸ್ಟ್ 29 ರಂದು ಮೆರವಣಿಗೆ ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು. ಮನವಿಯಲ್ಲಿ ವಾರದಲ್ಲಿ 6 ದಿನಗಳ ಕೆಲಸ, ಕೆಲಸ ನೀಡದ ದಿನಗಳಿಗೆ ಕಾನೂನಿನಂತೆ ಪರಿಹಾರ ನೀಡಿಕೆ, ಎಲೆ ತಂಬಾಕಿನ ಹೆಸರಿನಲ್ಲಿ ಕಾರ್ಮಿಕರಿಂದ ದಂಡ ವಸೂಲು ಮಾಡುವುದನ್ನು ನಿಲ್ಲಿಸಬೇಕು. ಬೀಡಿ ಕಾರ್ಮಿಕರನ್ನು ಖಾಯಂಗೊಳಿಸಿ ಲೋನ್ ಪುಸ್ತಕ ನೀಡುವುದು. ಕಂಪೆನಿ ನಿರ್ಧರಿಸಿದ [illegible] ಬೀಡಿಗಳನ್ನು ಕಟ್ಟುಕ್ಕರಿದ [illegible] ದನ್ನು ನಿಷೇಧಿಸಬೇಕು. [illegible] ಮೊದಲಾದ ಕೇಳಿಕೆಗಳಿಗಾಗಿ ಒತ್ತಾಯಿಸಲಾಗಿದೆ.

K R N M/ BGW - 293 MAG (2) PRB DECR 319 - 78/79

ಸಾಮಾಜಿಕ ನ್ಯಾಯದೊಂದಿಗೆ....

ಪುಟ 1ರಿಂದ

ಉತ್ಪಾದನಾ ಸಾಧನಗಳ ಒಡೆತನ ಹೊಂದಿರುವ, ರಾಜಕೀಯದಲ್ಲಿ ಒಳ್ಳೆಯ ಪ್ರಾತಿನಿಧ್ಯ ಹೊಂದಿರುವ ವಿಭಾಗವೊಂದು ಮುಂದೆ ಬಂದಿದೆ. ಆದ್ದರಿಂದ ಇದೊಂದು ಕ್ಲಿಷ್ಟ ಸಂಗತಿ. ಆದ್ದರಿಂದ ಈ ಹಿಂದುಳಿದ ಜಾತಿಗಳ ಬಹುಪಾಲು ಬಡಜನರಿಗೆ ಮೀಸಲಾತಿಯ ನಿಜವಾದ ಉಪಯೋಗ ಸಿಗಬೇಕಾದರೆ ಒಂದು ಆರ್ಥಿಕ ಅಳತೆಗೋಲು ಅಗತ್ಯ ಎಂದು ಸಿ.ಪಿ.ಐ(ಎಂ) ಅಭಿಪ್ರಾಯ. ಇದು ಕೇವಲ ಆದಾಯ ಮಿತಿ ಮಾತ್ರ ಆಗಿರಬೇಕಿಲ್ಲ. ಆದಾಯ ತೆರಿಗೆ ಅಂದಾಜು. ಭೂಒಡೆತನದ ಮಟ್ಟ. ಪೋಷಕರ ವೃತ್ತಿ ಸ್ಥಾನಮಾನ ಇತ್ಯಾದಿಗಳನ್ನು ಗಮನಕ್ಕೆ ತೆಗೊಳ್ಳಬಹುದು.

ಆದರೆ ಇದು ಹರಿಜನ-ಗಿರಿಜನರಿಗೆ ಮೀಸಲಾತಿಯ ವಿಷಯದಲ್ಲಿ ಅನ್ವಯ ವಾಗುವುದಿಲ್ಲ. ಏಕೆಂದರೆ ಶತಮಾನಗಳ ಕಾಲ ಅತ್ಯಂತ ಕ್ರೂರ ದಮನ ಎದುರಿಸಿದ ಈ ವಿಭಾಗಗಳಿಗೆ ಸಂವಿಧಾನ ನೀಡಿರುವ ಕನಿಷ್ಟ ಪರಿಹಾರವಿದು. ಈಗಲೂ ಈ ಕನಿಷ್ಟ ಪರಿಹಾರದ ಪ್ರಯೋಜನ ಸಿಕ್ಕಿರುವುದು ಈ ಜನ ವಿಭಾಗದ 100%ಕ್ಕೂ ಕಮ್ಮಿ ಜನಕ್ಕೆ ಇನ್ನೂ ಅವರ 'ಅಸ್ಪೃಶ್ಯ' ತೆಯ ಸ್ಥಾನಮಾನ ಮಾಯವಾಗಿಲ್ಲ. ಈಗಲೂ ಅವರು ನೆಟ್ಟಗೆ ನಿಂತರೆ ಅವರನ್ನು ಕಡಿದೇ ಹಾಕಲಾಗುತ್ತಿದೆ. ಹರಿಜನ - ಗಿರಿಜನ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿದೆ. 1987 ಹಾಗೂ 1988 ರಲ್ಲಿ 28736 ಇಂತಹ ಪ್ರಕರಣಗಳು ವರದಿಯಾಗಿವೆ. ಇದಕ್ಕೆ ಕಾರಣ ಬಹುಪಾಲು ಹರಿಜನ - ಗಿರಿಜನರ ಆರ್ಥಿಕ ಜೀವನದ ಮೂಲಾಧಾರ ಬದಲಾಗಿಯೇ ಇಲ್ಲ. ಭೂಮಾಲಕತ್ವ ಪೂರ್ಣವಾಗಿ ನಿರ್ನಾಮವಾಗುವವರೆಗೆ ಇದು ಸಾಧ್ಯವಿಲ್ಲ. ಭಾರತದ ಬಂಡವಾಳಶಾಹೀ ವರ್ಗ ಇದರಲ್ಲಿ ವಿಫಲವಾಗಿದೆ. ಆದರಿಂದ ಆರ್ಥಿಕ ಅಳತೆಗೋಲಿನ ಪರಿಕಲ್ಪನೆ ಹರಿಜನ - ಗಿರಿಜನರ ಮೀಸಲಾತಿಗೆ ಅನ್ವಯವಾಗ ಬಾರದೆಂಬುದು ಸಿ.ಪಿ.ಐ(ಎಂ)ನ ದೃಢ ನಿಲುವು.

ಆರ್ಥಿಕ ಅಳತೆಗೋಲಿನ ಪರಿಕಲ್ಪನೆ ಹೊಸತೇನೂ ಅಲ್ಲ. 1958 ರಷ್ಟು ಹಿಂದೆಯೇ ಕೇರಳದಲ್ಲಿ ಆಗ ಮುಖ್ಯಮಂತ್ರಿಯಾಗಿದ್ದ ಇ.ಎಂ.ಎಸ್. ನಂಬೂದರಿಪ್ಪಾಡ್ ನೇತೃತ್ವದ ಆಯೋಗವೊಂದು ಹಿಂದುಳಿದ ವರ್ಗಗಳ ಮೀಸಲಾತಿಗೆ ಆರ್ಥಿಕ ಅಳತೆಗೋಲನ್ನು ಮೊತ್ತ ಮೊದಲು ಬಾರಿ ಸೂಚಿಸಿತ್ತು. ಹತ್ತು ವರ್ಷಗಳ ನಂತರ ಕೇರಳದ ಸಂಯುಕ್ತರಂಗ ಸರ್ಕಾರದ ಅವಧಿಯೂ

ಉದ್ಯೋಗಾವಕಾಶ ಹೆಚ್ಚಿಸಲು, ದುಡಿ ಯುವ ಹಕ್ಕಿನ ಭರವಸೆ ಜ್ಯಾರಿಗೆ ತರಿಸಲು ಹೋರಾಟ, ಹೆಚ್ಚುವರಿ ಯೆಂದು ಗುರುತಿಸಿದ ಜಮೀನಿನ ವಿತರಣೆಗಾಗಿ ಹೋರಾಟ, ಶಿಕ್ಷಣಾವಕಾಶ ಗಳನ್ನು ಹೆಚ್ಚಿಸಲು ಹೋರಾಟ ಹಾಗೂ ಉದ್ಯೋಗಾವಕಾಶಗಳನ್ನು ನುಂಗಿಹಾಕಿದ ಹಿಂದಿನ ಸರ್ಕಾರದ ಆರ್ಥಿಕ ನೀತಿಗಳನ್ನು ತ್ಯಜಿಸಬೇಕೆಂದು ಒತ್ತಾಯಿಸುವ ಹೋರಾಟ ವ್ಯಾಪಕ ಜನವಿಭಾಗಗಳ ಐಕ್ಯತೆ ಕಟ್ಟಬಲ್ಲದು.

ಸೀಮಿತವಾದ ಇನ್ನೊಂದು ಆಯೋಗವೂ ಇದೇ ಶಿಫಾರಸು ಮಾಡಿತ್ತು. ಇತ್ತೀಚೆಗೆ ಕರ್ನಾಟಕದಲ್ಲಿ ವರದಿ ಸಲ್ಲಿಸಿದ ಚಿನ್ನಪ್ಪ ರೆಡ್ಡಿ ಆಯೋಗವೂ ಆರ್ಥಿಕ ಅಳತೆಗೋಲನ್ನು ಸೂಚಿಸಿದೆ.

ಬಿಹಾರದಲ್ಲಿ 1978ರಲ್ಲಿ 'ಕರ್ಪೂರಿ ಠಾಕೂರ್' ಸೂತ್ರದಲ್ಲಿ ಕೂಡಾ ಈ ಪರಿಕಲ್ಪನೆಯ ಅಂಶವಿತ್ತು. ಅದು ಅಲ್ಲಿ ಈಗಲೂ ಜ್ಯಾರಿಯಲ್ಲಿದೆ. ಅದರ ಪ್ರಕಾರ 26ಉ ಮೀಸಲಾತಿಯಲ್ಲಿ 12ಉ ಅತೀ ಹಿಂದುಳಿದ ವಿಭಾಗಕ್ಕೆ, 8ಉ ಇತರ ಹಿಂದುಳಿದ ವಿಭಾಗಕ್ಕೆ, ವಾರ್ಷಿಕ 12000 ರೂ ಆದಾಯ ಮಿತಿಯೊಂದಿಗೆ, 3ಉ ಮಹಿಳೆಯರಿಗೆ ಮತ್ತು 3ಊ ಮುಂದುವರಿದ ಜಾತಿಗಳ ಬಡವರಿಗೆ.

ರಾಷ್ಟ್ರೀಯ ರಂಗ ಸರ್ಕಾರ ಈ ಸೂತ್ರದ ನಿರ್ವಹಣೆಯ ಅನುಭವವನ್ನು ಪರಿಶೀಲಿಸಬೇಕು. ಈ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ 5 ಉ ಮೀಸಲಾತಿಯ ಪ್ರಸ್ತಾಪವನ್ನು ಒಪ್ಪಬಹುದು ಆದರೆ ಅದನ್ನು ಈಗಾಗಲೇ ಮೀಸಲಾತಿಯ ವ್ಯಾಪ್ತಿಯೊಳಗೆ ಇಲ್ಲದವರಿಗೆ ನೀಡಬೇಕು. ಮುಂದುವರಿದ ಜಾತಿಗಳ ಆರ್ಥಿಕವಾಗಿ ವಂಚಿತರಾದವರ ಭಯ ನಿವಾರಿಸಲು ಇದು ನೆರವಾಗಬಹುದು.

ಇಲ್ಲಿ ಸಿ.ಪಿ.ಐ. (ಎಂ) ಹೇಳುವ ಆರ್ಥಿಕ ಅಳತೆಗೋಲಿಗೂ ಬಿ.ಜೆ.ಪಿ. ಪ್ರತಿಪಾದಿಸುವ ಆರ್ಥಿಕ ಅಳತೆಗೋಲಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಬಿ.ಜೆ.ಪಿ. ಮುಂತಾದ ಪಕ್ಷಗಳು ಹೇಳುವ ಅಳತೆಗೋಲು ಮೀಸಲಾತಿಯ ವಿಧಾನವನ್ನು ಸುಧಾರಿಸಲಿಕ್ಕಾಗಿಯಲ್ಲ, ಬದಲಾಗಿ ಮೀಸಲಾತಿ ನೀತಿಯ ಜ್ಯಾರಿಯನ್ನು ಪರೋಕ್ಷವಾಗಿ ವಿಫಲ ಗೊಳಿಸುವ ತಂತ್ರವಷ್ಟೆ.

ಮೀಸಲಾತಿಗೆ ಸಂಬಂಧಪಟ್ಟಂತೆ ಬಿ.ಜೆ.ಪಿ.,ಕಾಂಗ್ರೆಗಳದ್ದು ಇಬ್ಬಂದಿ ನೀತಿ. ಕಾಂಗ್ರೆಸ್ (ಐ)

ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾ ವಿ.ಪಿ.ಸಿಂಗ್ ರಾಜಕೀಯ ಉದ್ದೇಶದಿಂದ ಇದನ್ನು ತಂದಿದ್ದಾರೆ ಎಂದಷ್ಟೇ ರಾಗ ಹಾಡುತ್ತದೆ- ಜಾತಿಸಮರದ ಬೆದರಿಕೆಯ ಸಮಯ ಸಾಧಕ ಮಾತನಾಡುತ್ತಿದೆ. ಸೀತಾರಾಮ ಕೇಸರಿ ಮೀಸಲಾತಿ ಸಮರ್ಥಿಸಿದರೆ, ಜಗನ್ನಾಥ್ ಮಿಶ್ರಾ ವಿರೋಧಿಸುತ್ತಿದ್ದಾರೆ. ಇದೇ ರೀತಿ ಇತರ ಕಾಂಗ್ರೆಸ್ ಮುಖಂಡರು ಕೂಡಾ. ಕಾಂಗ್ರೆ ಮೀಸಲಾತಿ ವಿರೋಧಿ ಚಳುವಳಿಗಳ ನೇತೃತ್ವ ವಹಿಸುತ್ತಿದ್ದಾರೆ.

ಬಿ.ಜೆ.ಪಿ. ಕೂಡಾ ಮೀಸಲಾತಿ ಎಂದು ಹೇಳುತ್ತಿದ್ದರೂ. ಅದರ ಕಾರ್ಯಕರ್ತರೂ ಕಾಂಗ್ರೆನಂತೆ ಮೀಸಲಾತಿ -ವಿರೋಧಿ ಚಳುವಳಿಗೆ ನೇತೃತ್ವ ನೀಡುವಲ್ಲಿ ಸಕ್ರಿಯರಾಗಿದ್ದಾರೆ. ಒಬ್ಬ ಬಿ.ಜೆ.ಪಿ. ಎಂ.ಪಿ. ಡಾ. ಜೆ.ಕೆ. ಜೈನ್ ಉಪವಾಸ ಮುಷ್ಕರ ಕೂಡಾ ನಡೆಸಿದರು. ದೆಹಲಿ ವಿಶ್ವವಿದ್ಯಾಲಯದ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಕಾಂಗ್ರೆ ಮತ್ತು ಬಿ.ಜೆ.ಪಿ. ಪ್ರತಿನಿಧಿಗಳು ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಜ್ಯಾರಿಯನ್ನು ಖಂಡಿಸುವ ನಿರ್ಣಯ ಪಾಸುಮಾಡಿಸಲು ಪ್ರಯತ್ನಿಸಿದರು.

ಆರ್.ಎಸ್.ಎಸ್. ಅಂತೂ ಬಹಿರಂಗ ವಿರೋಧ ವ್ಯಕ್ತಪಡಿಸಿದೆ. ಅದರ ಮುಖವಾಣಿ ಆರ್ಗನೈಸರ್ "ವಿವೇಕಾನಂದ, ದಯಾನಂದ ಸರಸ್ವತಿ, ಮಹಾತ್ಮಾಗಾಂಧಿ ಮತ್ತು ಡಾ. ಹೆಡ್ಗೆವಾರ್ ದಿನಗಳಿಂದ ಆರಂಭವಾದ ಹಿಂದೂಗಳನ್ನು ಒಗ್ಗಟ್ಟಾಗಿಸುವ ಮಹಾನ್ ಕೆಲಸವನ್ನು ವಿ.ಪಿ. ಸಿಂಗ್ ಕೆಡಿಸಿದ್ದಾರೆ." ಎಂದಿದೆ. ಆರ್ ಎಸ್.ಎಸ್. ನ ಈ ಸಂಕುಚಿತ ಮೇಲ್ಜಾತಿ ಪೂರ್ವಾಗ್ರಹದಲ್ಲಿ ಆಶ್ಚರ್ಯವೇನಿಲ್ಲ.

ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಬಹು ದಿನದಿಂದ ಇದೆ. ಅದು ಮುಂದುವರಿಯುತ್ತದೆ. ಆದ್ದರಿಂದ ಕೆಲವರು ಚಿತ್ರಿಸುವಂತೆ ಇದು ವಿ.ಪಿ.ಸಿಂಗ್‌ರ ದುಷ್ಟ ಬುದ್ಧಿಯಿಂದ ಸೃಷ್ಟಿಯಾದ ಸಮಸ್ಯೆಯೇನಲ್ಲ. ಇದು ಸ್ವಾತಂತ್ರ್ಯದ ಮೊದಲಿನ ದಿನಗಳಿಂದಲೂ ಸ್ವಾತಂತ್ರ್ಯದ ನಾಲ್ಕು ದಶಕಗಳಲ್ಲೂ ಭಾರತೀಯ ಸಮಾಜದ ಶೋಷಿತ ವಿಭಾಗಗಳಲ್ಲಿ ಬೆಳೆದುಬಂದ ಆಕಾಂಕ್ಷೆಗಳ ರಾಜಕೀಯ ಪರಿಣಾಮವಷ್ಟೆ. ಅರುಣ್ ಶೌರಿಯಂತವರು ಈ ಚಾರಿತ್ರಿಕ ಸತ್ಯವನ್ನು ಬೇಕೆಂದೇ ಮರೆಮಾಚುತ್ತಾರೆ. ಬಾಬ್ರಿ ಮಸೀದೆಯನ್ನು ಅದು ಈಗಿರುವ ಅಯೋಧ್ಯೆಯಿಂದ "ಸ್ಥಳಾಂತರಿಸುವ" ಪ್ರತಿಪಾದನೆ ಮಾಡುವುದು ಎರಡೂ ಕೆಳಜಾತಿಗಳ ಆಕಾಂಕ್ಷೆಗಳನ್ನು ಗೇಲಿ ಮಾಡುವುದು ಎರಡೂ ಒಂದೇ ಸ್ವಭಾವದ ಎರಡು ರೂಪಗಳು.

ದಕ್ಷಿಣ ಭಾರತದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಅಬ್ರಾಹ್ಮಣ ಆಂದೋಲನಗಳು ಒಂದು ಶತಮಾನದ ಹಿಂದೆಯೇ ಆರಂಭವಾದುದು. ಅವು ಮೇಲ್ಜಾತಿಗಳ ಪ್ರಾಬಲ್ಯವನ್ನು ವಿರೋಧಿಸಿದ ಆಂದೋಲನಗಳು ಉತ್ತರ ಭಾರತದಲ್ಲಿ ಇಂತಹ ಆಂದೋಲನಗಳು ಸ್ವಲ್ಪ ತಡವಾಗಿಯೇ ಆರಂಭವಾದವು. ಈ ಆಂದೋಲನಗಳ ಒಂದು ದೌರ್ಬಲ್ಯವೆಂದರೆ ಅವು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಿಂದ ದೂರ ನಿಂತವು. ಇದಕ್ಕೆ ಆಗಿನ ಕಾಂಗ್ರೆಸ್ ಮುಖಂಡತ್ವದ ನಿಲುವೂ ಕೂಡಾ ಕಾರಣ. ಕೃಷಿ ಸಂಬಂಧಗಳನ್ನು ಪೂರ್ಣವಾಗಿ ಬದಲಿಸಿ ಮೇಲ್ಜಾತಿಗಳ ಪ್ರಾಬಲ್ಯವನ್ನು ಮುರಿಯುವ ಬದಲು ಕಾಂಗ್ರೆಸ್ ಮೇಲ್ಜಾತಿಯ ದೃಷ್ಟಿಕೋನವನ್ನಷ್ಟೆ ಅಂಗೀಕರಿಸಿತು. ಗಾಂಧೀವಾದ ಇದಕ್ಕೊಂದು ಉದಾಹರಣೆ

ಈ ವಾರ

ಉತ್ತರ ಮತ್ತು ದಕ್ಷಿಣ. ಕೊರಿಯಾ ಪ್ರಧಾನಿಗಳ ನಡುವೆ ಮಾತುಕತೆ ನಡೆಯಿತೆನ್ನುವುದೇ ಮಹತ್ವದ ವಿಷಯವಾಗಿದೆ.

'ದಿ ಹಿಂದೂಸ್ತಾನ್ ಟೈಮ್ಸ್' ಸಂಪಾದಕೀಯದಲ್ಲಿ. ಸೆಪ್ಟೆಂಬರ್ 8

★ ರಾಜಕೀಯ ಮುಖಂಡರು ಸ್ವಾರ್ಥ ಸಾಧನೆಗಾಗಿ ಕೋಮುವಾದವನ್ನು ಪ್ರಚೋದಿಸುವ ಆಟ ಆಡುವುದರಿಂದ ದೂರ ಉಳಿಯಬೇಕಾಗಿದೆಯೆನ್ನುವುದು ಇದರ ಅರ್ಥ. ಜಾತ್ಯತೀತತೆಗೆ ಬದ್ಧವಾಗಿದ್ದೇವೆಂದು ಹೇಳುತ್ತಿರುವಾಗಲೇ ಅವರು ಇಂಥ ಕೃತ್ಯಗಳಲ್ಲಿ ತೊಡಗಿರುತ್ತಾರೆ.

ಸೆ. 4 'ದ ಹಿಂದೂ' ಸಂಪಾದಕೀಯದಲ್ಲಿ

★ ದೇಶದಲ್ಲಿ 178 ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿವೆ. ಅವುಗಳಲ್ಲಿ 136 ಕ್ಕೆ ರಾಜ್ಯ ಸರಕಾರಗಳು ಅನುದಾನ ನೀಡುತ್ತಿಲ್ಲ ಮತ್ತು ಅವುಗಳನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮಾನ್ಯ ಮಾಡಿಲ್ಲ. ಮಂಡಳಿಯ ಅನುಮತಿಯಿಲ್ಲದೆ ಈ ಕಾಲೇಜುಗಳು ಸ್ಥಾಪನೆಯಾದವು.

ಮಾನವ ಸಂಪನ್ಮೂಲಗಳ ಅಭಿವೃದ್ಧಿ ಖಾತೆ ಸಚಿವ ಚಿಮನ್‌ಭಾಯ್ ಮೆಹ್ತಾ, ಸೆ 3 ರಂದು ಲೋಕ ಸಭೆಯಲ್ಲಿ

★ ಕೆಲವು ಮೀಸಲಾತಿ ವಿರೋಧಿಗಳು ಭಾನುವಾರ ಇಲ್ಲಿ (ಬೇಗು ಸರಾಯ್, ಬಿಹಾರ) ಮಹಾತ್ಮಾಗಾಂಧಿ ಪ್ರತಿಮೆಯನ್ನು ಹಾಳುಗೆಡವಿದರು.

ದಿ ಸ್ಟೇಟ್ಸ್ ಮ್ಯಾನ್, ಆಗಸ್ಟ್ 28

ಸಂಘಟನಾ ಪ್ಲೀನಂ

ಆಗಸ್ಟ್ 25 ರಿಂದ 28 ರವರೆಗೆ ನಡೆದ ಸಿ.ಪಿ.ಐ(ಎಂ) ಕೇಂದ್ರ ಸಮಿತಿಯ ಸಭೆ ಮುಂದಿನ ವರ್ಷ ಜನವರಿ 16 ರಿಂದ 20 ರವರೆಗೆ ಪಕ್ಷದ ಸಂಘಟನೆಯ ಕುರಿತಾದ ಪ್ಲೀನಂ ನಡೆಸಲು ನಿರ್ಧರಿಸಿದೆ. ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಇದು ನಡೆಯಲಿದೆ. ಪಕ್ಷದ ಹೆಚ್ಚುತ್ತಿರುವ ಸಾಮೂಹಿಕ ಪ್ರಭಾವವನ್ನು ಇನ್ನೂ ಪೂರ್ಣವಾಗಿ ಕ್ರೋಢೀಕರಿಸಿಲ್ಲ, ಪಕ್ಷದ ಸಂಘಟನೆಯನ್ನು ವಿಸ್ತರಿಸಿಲ್ಲ ಎಂದು ಹದಿಮೂರನೇ ಮಹಾಧಿವೇಶನ ಗಮನಿಸಿತ್ತು. ಆದ್ದರಿಂದ ಪಕ್ಷದ ಸಂಘಟನೆಯನ್ನು ಚುರುಕುಗೊಳಿಸುವ, ವ್ಯವಸ್ಥಿತಗೊಳಿಸುವ ಕ್ರಮಗಳ ಬಗ್ಗೆ ಚರ್ಚಿಸಲು ಸಂಘಟನೆಯ ಬಗ್ಗೆ ಒಂದು ವಿಶೇಷ ಪ್ಲೀನಂ ನಡೆಸಲು ಮಹಾಧಿವೇಶನ ಕರೆ ನೀಡಿತ್ತು.

ಮಾರ್ಕ್ಸ್‌ವಾದಿ ದೃಷ್ಟಿಕೋನದ ಪ್ರಕಾರ ಜಾತಿ-ವಿರೋಧಿ ಆಂದೋಲನ ಯಶಸ್ವಿಯಾಗಬೇಕಾದರೆ ಅದು ತನ್ನನ್ನು ಕೃಷಿಕ ಕ್ರಾಂತಿಗಾಗಿ ನಡೆಯುವ ಆಂದೋಲನದೊಂದಿಗೆ, ದುಡಿಯುವ ಜನಗಳ ಆಂದೋಲನದೊಂದಿಗೆ ಬೆಸೆದುಕೊಳ್ಳಲೇ ಬೇಕಾಗುತ್ತದೆ., ಪ್ರಜಾಪ್ರಭುತ್ವ ಆಂದೋಲನದ ಮುನ್ನಡೆಯ ಪ್ರಯತ್ನದಲ್ಲಿ ಸೇರಿಕೊಳ್ಳಬೇಕಾಗುತ್ತದೆ. ಎಲ್ಲಿ ಈ ಪ್ರಯತ್ನಪೂರ್ಣಗೊಂಡಿಲ್ಲವೋ ಅಲ್ಲೆಲ್ಲಾ ಶೋಷಿತ ಜನಸಮೂಹಗಳ ಪ್ರಜ್ಞೆ ಮೀಸಲಾತಿಯೊಂದೇ ತಮ್ಮ ಮುನ್ನಡೆಗೆ ಇರುವ ಮಾರ್ಗ ಎಂಬ ಭಾವನೆಗೆ ಸೀಮಿತಗೊಳ್ಳುತ್ತದೆ. ಇಂತಹ ಸನ್ನಿವೇಶದಲ್ಲಿ ಕಾರ್ಮಿಕ ವರ್ಗದ ಪಕ್ಷ ಒಂದೆಡೆ ಮೀಸಲಾತಿಯನ್ನು ಬೆಂಬಲಿಸುತ್ತಾ ಇನ್ನೊಂದೆಡೆ ಗ್ರಾಮೀಣ ಜನಸಮೂಹಗಳೊಂದಿಗೆ ತನ್ನ ಸಂಪರ್ಕಗಳನ್ನು ಬಲಗೊಳಿಸಲು ಪ್ರಯತ್ನಿಸುತ್ತದೆ. ಏಕೆಂದರೆ ಈ ವಿಭಾಗವೇ ಕೃಷಿಕ ಕ್ರಾಂತಿಯ ಪ್ರಮುಖ ಶಕ್ತಿ. ಅದೇ ವೇಳೆಗೆ ಎಲ್ಲಾ ಜಾತಿಗಳ ದುಡಿಯುವ ಜನರ ಐಕ್ಯತೆ ಕಟ್ಟುವ ಕೆಲಸ ಒಂದು ನಿರ್ಣಾಯಕ ಪ್ರಶ್ನೆ ಎಂದು ಪಕ್ಷ ಭಾವಿಸುತ್ತದೆ.

ದುರದೃಷ್ಟವಶಾತ್ ಕೆಲವು ಪ್ರಜಾಸತ್ತಾತ್ಮಕ ಮನೋಭಾವದ ಬುದ್ಧಿಜೀವಿಗಳೂ ಕೂಡಾ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಜಾತಿ ಪದ್ಧತಿಯನ್ನು ಶಾಶ್ವತಗೊಳಿಸುತ್ತದೆ ಎಂದು ಭಾವಿಸುತ್ತಿದ್ದಾರೆ. ಮೇಲ್ಜಾತಿಗಳ ಜಾತಿವಾದ, ಜತೆಗೆ ಉತ್ಪಾದನಾ ಸಾಧನಗಳ ಮೇಲೆ ಅವುಗಳ ಗುತ್ತೇದಾರಿಕೆಯಿಂದಾಗಿಯೇ ಹಿಂದುಳಿಕೆ ಶಾಶ್ವತಗೊಳ್ಳುವಂತಾಗಿದೆ ಎಂಬುದನ್ನು ಅವರು ಗಮನಿಸುವುದಿಲ್ಲ. ಬಂಡವಾಳಶಾಹಿ ಅಭಿವೃದ್ಧಿಯೊಂದಿಗೆ ವರ್ಗ ಮತ್ತು ಜಾತಿ ಬಲಾಬಲ ವ್ಯತ್ಯಾಸಗೊಳ್ಳುತ್ತಿದ್ದರೆ ಜಾತಿವಾದವನ್ನು ಅಂತ್ಯಗೊಳಿಸಲು ಮತ್ತು ವರ್ಗ ಆಧಾರಿತ ಆಂದೋಲನಗಳನ್ನು ಕಟ್ಟಲು ದ್ವಿಮುಖ ನೀತಿ ಅಗತ್ಯವಾಗುತ್ತದೆ.

ಈ ಸನ್ನಿವೇಶದಲ್ಲಿ ಮುಂದುವರಿದ ಪ್ರಜಾಪ್ರಭುತ್ವ ಆಂದೋಲನದ ಜವಾಬಾದಿರಿಯೇನು? ಅದರ ಹೊಣೆ ಬಹಳ ದೊಡ್ಡದು.

1. ಮೀಸಲಾತಿಯನ್ನು ವಿರೋಧಿಸುವ ಚಳುವಳಿಗಳನ್ನು ವಿರೋಧಿಸಬೇಕು.

2. ಅದೇ ವೇಳೆ, ಚಾರಿತ್ರಿಕ-ಸಾಮಾಜಿಕ ಪರಿಸ್ಥಿತಿಗಳಿಂದಾಗಿ ಸಮಾನ ಸ್ಪರ್ಧೆಯ ಅವಕಾಶದಿಂದ ವಂಚಿತರಾದವರಿಗೆ ಮೀಸಲಾತಿಯ ಈ ಸೀಮಿತ ರಿಯಾಯ್ತಿ ನೀಡುವುದು ಅಗತ್ಯ ಎಂಬುದನ್ನು ಮೀಸಲಾತಿಯಿಲ್ಲದ ಪ್ರಜಾಪ್ರಭುತ್ವವಾದಿ ಜನವಿಭಾಗಗಳು ಸ್ವೀಕರಿಸುವಂತೆ ಅವರಿಗೆ ಮನವರಿಕೆ ಮಾಡಿಸಬೇಕು.

3 ಜಾತಿಗಳಿಗೇ ತಮ್ಮನ್ನು ಅಂಟಿಸಿಕೊಳ್ಳುವ, ಕೇವಲ ಮೀಸಲಾತಿಯ ಮೇಲೆಯೇ ವಿಪರೀತ ಒತ್ತು ನೀಡಿ ಮೀಸಲಾತಿಗರ್ಹರಾದ ನೌಕರರನ್ನು, ಕಾರ್ಮಿಕರನ್ನು ದುಡಿಯುವ ಚಳುವಳಿಯಿಂದ ದೂರಮಾಡುವ ಚಳುವಳಿಗಳ ಪ್ರಯತ್ನ ಸಫಲವಾಗದಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ದುಡಿಯುತ್ತ ಜನರ ಆಂದೋಲನ ಮೀಸಲಾತಿಯುಳ್ಳ ವಿಭಾಗದ ವಿಶೇಷ ಸಮಸ್ಯೆಗಳನ್ನು, ಬೇಡಿಕೆಗಳನ್ನು ಪ್ರತಿಪಾದಿಸಬೇಕು.

ಒಟ್ಟಿನಲ್ಲಿ ದುಡಿಯುವ ಜನ ಮೀಸಲಾತಿ ಪ್ರಶ್ನೆಯ ಮೇಲೆ ವಿಭಜನೆಗೊಳಸ್ಪದಂತೆ ನೋಡಿಕೊಳಸ್ಪಬೇಕು. ಇದು ಸಾಧ್ಯವಾಗಬೇಕಾದರೆ ಈಗಿನ ಧೋರಣೆಗಳ ದಿಕ್ಕನ್ನು ಬದಲಿಸುವ ಹೋರಾಟ ಅತ್ಯಗತ್ಯ. ಉದ್ಯೋಗಾವಕಾಶ ಹೆಚ್ಚಿಸಲು ಕೆಲಸದ ಹಕ್ಕಿನ ಭರವಸೆ ಜ್ಯಾರಿಗೆ.ತರಿಸಲು ಒತ್ತಾಯಿಸುವ ಹೋರಾಟ ಕೋಟ್ಯಂತರ ಜನರ ಅತ್ಯಂತ ವ್ಯಾಪಕ ಐಕ್ಯತೆ ಕಟ್ಟಬಲ್ಲದು. ಈಗಾಗಲೇ ಹೆಚ್ಚುವರಿಯೆಂದು ಗರುತಿಸಲ್ಪಟ್ಟಿದ್ದ ರೂ ಸರಕಾರ ಅದನ್ನು ವಹಿಸಿಕೊಳ್ಳದೆ, ವಿತರಣೆ ಮಾಡದಿರುವ 5.85 ಕೋಟಿ ಎಕ್ರೆ ಭೂಮಿಯ ವಿತರಣೆಗಾಗಿ ಹೋರಾಟ ಗ್ರಾಮೀಣ ಬಡವರನ್ನು ಒಗ್ಗಟ್ಟಾಗಿಸಬಲ್ಲದು. ಶಿಕ್ಷಣರಂಗದಲ್ಲಿ ಮೇಲ್ವರ್ಗಗಳ ಪರವಾದ ದೃಷ್ಟಿಕೋನ ಬಿಟ್ಟು ಶಿಕ್ಷಣಾವಕಾಶಗಳನ್ನು ವ್ಯಾಪಕಗೊಳಿಸುವ ನೀತಿ ಮೀಸಲಾತಿಯಿದ್ದರೂ ಅರ್ಹರಾದ ಎಲ್ಲರಿಗೂ ಉಚ್ಚ ಶಿಕ್ಷಣ ಸಿಗುವಂತೆ ಮಾಡಬಲ್ಲದು.

ರಾಷ್ಟ್ರೀಯ ರಂಗ ಸರ್ಕಾರ ಹಿಂದಿನ ಸರ್ಕಾರದ ಆರ್ಥಿಕ ನೀತಿಗಳನ್ನು ಬದಲಾಯಿಸಿಲ್ಲ. ಇದನ್ನು ಒತ್ತಾಯಿಸುವ ಹೋರಾಟ ಮುಚ್ಚಿದ ಲಕ್ಷಾಂತರ ಕಾರ್ಖಾನೆಗಳನ್ನು ತೆರೆಸುವ, ಉದ್ಯೋಗ ನುಂಗುವ ವಿದೇಶೀ ಬಂಡವಾಳ ಹಾಗೂ ಖಾಸಗೀಕರಣ ನೀತಿಯನ್ನು ಬದಲಿಸುವ ಸರಕಾರೀ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ನೇಮಕಾತಿ ಮೇಲೆ ನಿರ್ಬಂಧ ತೊರೆಯಬೇಕೆಂದು ಒತ್ತಾಯಿಸುವ, ಭೂ ಸುಧಾರಣೆಗಳನ್ನು ಪೂರ್ಣಗೊಳಿಸಬೇಕೆಂದು ಒತ್ತಾಯಿಸುವ ಹೋರಾಟಗಳಿಗೆ ಎಲ್ಲಾ ಜನವಿಭಾಗಗಳ ಐಕ್ಯತೆ ಅಗತ್ಯ.

ಸಾಮಾಜಿಕ ನ್ಯಾಯದೊಂದಿಗೆ ದುಡಿಯುವ ಜನಗಳ ಐಕ್ಯತೆ ರಕ್ಷಿಸಿಕೊಂಡು ಬೂರ್ಜ್ವಾ-ಭೂಮಾಲಿಕ ವ್ಯವಸ್ಥೆಯ ವಿರುದ್ಧ ಮೂಲಭೂತ ಮೀಸಲಾತಿಯ ಕುರಿತಾದ ನಿಲುವಿಗೆ ಆಧಾರ.

24-9-90 ರಂದು ವಿದ್ಯುತ್ ದರ ಏರಿಕೆ ವಿರುದ್ಧ ಪ್ರತಿಭಟನೆ ಸಿ.ಐ.ಟಿ.ಯು ರಾಜ್ಯ ಮಂಡಳಿ ಕರೆ

Printed and published by P.Ramachandra Rao on behalf of Communist Party of India (Marxist) Karnataka State Committee, 95A, Lemsk Muneshwara Block, Palace Guttahalli, Bangalore 560003. Phone 366489 Editor: P.Ramachandra Rao.